# ಯುಗರಶ್ಮಿ

ಸ್ವಾತಂತ್ರ್ಯ ಹೋರಾಟದಲ್ಲಿ ಅಹ್ಮದಿಯರ ಪಾತ್ರ

ರಮ್‌ಝಾನ್ ತಿಂಗಳ ಉಪವಾಸ

ಆಧುನಿಕ ವೈಜ್ಞಾನಿಕ ಪ್ರಗತಿ ಮತ್ತು ಇಸ್ಲಾಂ

ಯೇಸುಕ್ರಿಸ್ತರು ಮೃತರಾದುದು ಎಲ್ಲಿ?

ತ್ರೈಮಾಸಿಕ

ಸಪ್ಟೆಂಬರ್ 1976

ತಬೂಕ್ 1355

ಬೆಲೆ: ರೂ. 1–00

ಅಳತೆಯಲ್ಲಿ ಕಡಿಮೆ ಕೊಡುವವರಿಗೆ ಆಪತ್ತು! – ಅವರು ಕೊಳ್ಳುವಾಗ ಹೆಚ್ಚಾಗಿ ತೆಗೆಯುವರು; ಅಳೆದು ಅಥವಾ ತೂಕಮಾಡಿ ಕೊಡುವಾಗ ಕಮ್ಮಿ ಕೊಡುವರು. ಎಲ್ಲಾ ಜನರು ಸರ್ವಲೋಕ ಪರಿಪಾಲಕನ ಮುಂದೆ ನಿಲ್ಲಿಸಲ್ಪಡುವ ಆ ಮಹಾ ದಿನದಂದು ಅವರು ಎದ್ದೇಳಿಸಲ್ಪಡುವರೆಂದು ಅವರಿಗೆ ತಿಳಿದಿಲ್ಲವೇ?

—ಪವಿತ್ರ ಖುರ್‌ಆನ್ (83:2–7)

# ಯುಗರಶ್ಮಿ

ತ್ರೈಮಾಸಿಕ

23/1008, ಅನ್ಸಾರಿ ರೋಡ್,

ಬಂದರ್, ಮಂಗಳೂರು—575001.

ಸಂಪುಟ: 2 ಸಂಚಿಕೆ: 2

ಜುಲಾಯಿ—ಸಪ್ಟೆಂಬರ್ 1976 / ವಫಾ—ತಬೂಕ್ 1355

ಸಂಪಾದಕ: ಮುಹಮ್ಮದ್ ಯೂಸುಫ್

ಬಿಡಿ ಪ್ರತಿ: ಒಂದು ರೂಪಾಯಿ ವಾರ್ಷಿಕ ಚಂದಾ: ನಾಲ್ಕು ರೂಪಾಯಿಗಳು

## ವಿಷಯ ಸೂಚಿಕೆ:

ದೇಶದ ಮುನ್ನಡೆ

ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

ಭೂಕಂಪಗಳೂ ಜಲಪ್ರಳಯಗಳೂ

ಸ್ವಾತಂತ್ರ್ಯ ಹೋರಾಟದಲ್ಲಿ ಅಹ್ಮದಿಯರ ಪಾತ್ರ

ರಮ್‌ಝಾನ್ ತಿಂಗಳ ಉಪವಾಸ

ಹೆಚ್ಚು ಹೆಚ್ಚಾಗಿ ಮರಗಳನ್ನು ಬೆಳೆಸಿರಿ

ಆಧುನಿಕ ವೈಜ್ಞಾನಿಕ ಪ್ರಗತಿ ಮತ್ತು ಇಸ್ಲಾಂ

ಸಂಪಾದಕರಿಗೆ ಪತ್ರ

ಅಹ್ಮದಿಯಾ ವಾರ್ತೆಗಳು

ಪುಸ್ತಕ ವಿಭಾಗ— ಯೇಸುಕ್ರಿಸ್ತರು ಮೃತರಾದುದು ಎಲ್ಲಿ?

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ


| ಸಂಪುಟ: 2 | ಜುಲಾಯಿ –ಸಪ್ಟಂಬರ 1976/ವಫಾ—ತಬೂಕ್ 1355 | ಸಂಚಿಕೆ: 2 |
|---|---|---|


## ದೇಶದ ಮುನ್ನಡೆ

ರಾಷ್ಟ್ರ ವಿರೋಧಿ ಶಕ್ತಿಗಳನ್ನು ಅಣಗಿಸಿ ನಮ್ಮ ದೇಶವನ್ನು ಗಂಡಾಂತರಕಾರಿ ಪರಿಸ್ಥಿತಿಯಿಂದ ತಪ್ಪಿಸಲು ನಮ್ಮ ನೆಚ್ಚಿನ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು ಸಂದರ್ಭೋಚಿತವಾದ ದಿಟ್ಟ ಹೆಜ್ಜೆಯನ್ನಿಟ್ಟುದರ ಫಲವಾಗಿ ಕಳೆದ ವರ್ಷ ಜೂನ್ 26ನೇ ದಿನಾಂಕದಂದು ತುರ್ತು ಪರಿಸ್ಥಿತಿಯು ಘೋಷಿಸಲ್ಪಟ್ಟಿತು. ಜೊತೆಗೆ ರಾಷ್ಟ್ರವನ್ನು ಪ್ರಗತಿ ಪಥದಲ್ಲಿ ಸಾಗಿಸಲು ಪ್ರಧಾನಿಯವರು ಇಪ್ಪತ್ತಂಶ ಕಾರ್ಯಕ್ರಮಗಳನ್ನು ಸಹ ಸಾರಿದರು. ಹೀಗೆ ಒಂದು ವರ್ಷವನ್ನು ಮಿಕ್ಕಿ ನಮ್ಮ ರಾಷ್ಟ್ರವು ವಿನಾಶಕಾರಿ ಪರಿಸ್ಥಿತಿಯಿಂದ ರಚನಾತ್ಮಕ ಸ್ಥಿತಿಯೆಡೆಗೆ ಸಾಗುತ್ತಾ ಬರುತ್ತಿದೆ.

ತುರ್ತು ಪರಿಸ್ಥಿತಿಯ ಮೊದಲು ರಾಷ್ಟ್ರದಲ್ಲಿ ಅರಾಜಕತೆ ತಾಂಡವವಾಡುತ್ತಿತ್ತು. ಗುಲ್ಲು, ಗಲಾಟೆ, ಮುಷ್ಕರ, ಬಹಿಷ್ಕಾರಗಳಿಲ್ಲದ ದಿನವೇ ಇರುತ್ತಿರಲಿಲ್ಲವೆನ್ನಬಹುದೇನೋ! ಒಂದು ಕಡೆಯಲ್ಲಿ ಕೋಮು ದಂಗೆಯಾದರೆ ಇನ್ನೊಂದು ಕಡೆಯಲ್ಲಿ ಗುಂಪು ಘರ್ಷಣೆ. ಒಂದು ಕಡೆಯಲ್ಲಿ ಕಾರ್ಮಿಕರ ಮುಷ್ಕರವಾದರೆ, ಇನ್ನೊಂದು ಕಡೆಯಲ್ಲಿ ಕ್ಲಾಸುಗಳಿಗೆ ವಿದ್ಯಾರ್ಥಿಗಳ ಬಹಿಷ್ಕಾರ. ಒಂದು ಕಡೆಯಲ್ಲಿ ಕಾಳಸಂತೆಕೋರರ ಸಾಮ್ರಾಜ್ಯವಾದರೆ, ಇನ್ನೊಂದು ಕಡೆಯಲ್ಲಿ ಕಳ್ಳಸಾಗಾಟಗಾರರ ವಿಲಾಸ. ಆದರೆ ಸರಕಾರದ ಸೂಕ್ತ ಕ್ರಮವು ಎಲ್ಲಕ್ಕೂ ವಿರಾಮ ಹಾಕಿತು.

ತುರ್ತುಪರಿಸ್ಥಿತಿಯ ಮೊದಲು ದೇಶದ ಹಲವಾರು ಕಡೆಗಳಲ್ಲಿ ಜೀತ ಪದ್ಧತಿಯೂ ರೂಢಿಯಲ್ಲಿತ್ತು. ಆದರೆ ಈಗ ಅದು ನಿರ್ಮೂಲನವಾಗಿ ಮೊದಲು ಜೀತದಾಳಾಗಿದ್ದ ಆ ಬಡ ಜನರು ಸಹ ಎಲ್ಲರಂತೆ ಬಾಳ್ವೆ ನಡೆಸುತ್ತಿದ್ದಾರೆ. ತುರ್ತುಪರಿಸ್ಥಿತಿಯ ಮೊದಲು ಕರಗಳ್ಳತನವು ತುಂಬಾ ಜಾಸ್ತಿಯಾಗಿತ್ತು. ಆದರೆ ಈಗ ಅದು ಸಾಕಷ್ಟು ತಡೆಯಲ್ಪಟ್ಟು ಸರಕಾರದ ಬೊಕ್ಕಸಕ್ಕೆ ಕೋಟ್ಯಾನು ಕೋಟಿ ರೂಪಾಯಿಗಳು ಬಂದು ಸೇರಿವೆ. ಕೃಷಿಯಲ್ಲಿ ಕೂಡ ಈ ವರ್ಷ ನಮ್ಮ ದೇಶವು ಒಂದು ಕ್ರಾಂತಿಯನ್ನುಂಟುಮಾಡಿ ಧಾನ್ಯ ಸಂಗ್ರಹದಲ್ಲಿ ದಾಖಲೆಯನ್ನು ಸ್ಥಾಪಿಸಿರುತ್ತದೆ.

# ಮುಹಮ್ಮದ್ ಪೈಗಂಬರರ ನುಡಿ ಮುತ್ತುಗಳು

1. ಪಡೆಯುವುದರಲ್ಲೂ ನೀಡುವುದರಲ್ಲೂ ಕರಾರು ಪಾಲಿಸುವವನು ಒಳ್ಳೆಯ ವ್ಯಾಪಾರಿ; ಪಡೆಯುವುದರಲ್ಲೂ ನೀಡುವುದರಲ್ಲೂ ಕರಾರು ಪಾಲಿಸದ ವ್ಯಾಪಾರಿ ದುಷ್ಟನು.

2. ಕೊಳ್ಳುವುದರಲ್ಲೂ ಮಾರುವುದರಲ್ಲೂ, ಪಡೆಯುವುದರಲ್ಲೂ ನೀಡುವುದರಲ್ಲೂ ಉದಾರನಾಗಿರುವವನಿಗೆ ಪರಮಾತ್ಮನು ಕ್ಷಮೆಯನ್ನು ನೀಡಿದ್ದಾನೆ.

3. ಸುಳ್ಳು ಪ್ರಮಾಣ ಮಾಡುವುದರಿಂದ ಮಾರಾಟ ಹೆಚ್ಚಾದರೂ ಅನುಗ್ರಹದ ಎಲ್ಲಾ ಲಾಭಗಳು ಅದರಿಂದಾಗಿ ಬರಿದಾಗುತ್ತವೆ.

4. ಒಂದು ವಸ್ತುವಿನ ಸರಿಯಾದ ಸ್ಥಿತಿಯನ್ನು ಬಯಲು ಮಾಡದೆ ಅದನ್ನು ಮಾರಬಾರದು.

5. ಧಾನ್ಯವನ್ನು ಅಳೆದು ಕೊಡಿರಿ; ಅದರಲ್ಲಿ ಅನುಗ್ರಹವಿದೆ.

6. ಅಳೆಯುವವನಿಗೂ ತೂಕ ಮಾಡುವವನಿಗೂ ಒಂದು ಜವಾಬ್ದಾರಿಕೆಯಿದೆ.

7. ಹಾಲಿಗೆ ನೀರನ್ನು ಬೆರಸುವುದರ ಕುರಿತು ನನ್ನ ಸಮುದಾಯದೊಡನೆ ನಾನು ಭಯ ಪಡುತ್ತೇನೆ.

8. ಒಮ್ಮೆ ಪೈಗಂಬರರೊಡನೆ ಯಾವ ವೃತ್ತಿಯು ಉತ್ತಮವಾದುದೆಂದು ಪ್ರಶ್ನಿಸಲಾಯಿತು. ಆಗ ಅವರು: ಕೈಗಳಿಂದ ಮಾಡುವ ಕೆಲಸ ಅಥವಾ ಮೋಸವೂ ವಂಚನೆಯೂ ಇಲ್ಲದ ವ್ಯಾಪಾರವೆಂದು ಉತ್ತರಿಸಿದರು.

9. ಓರ್ವನು ತನ್ನ ವಿಷಮಾವಸ್ಥೆಯಲ್ಲಿ ನಡೆಸುವ ಮಾರಾಟದಿಂದ ಪ್ರಯೋಜನವನ್ನು ಪಡೆಯಲು ಬಯಸುವವರನ್ನೂ ಕುಹಕ ವಹಿವಾಟನ್ನೂ ಪೈಗಂಬರರು ನಿಷೇಧಿಸಿರುವರು. ಕೊಂಬೆಯಲ್ಲಿರುವ ಬಲಿಯದ ಫಲಗಳನ್ನೂ ಮಾರುವುದನ್ನು ಸಹ ಪೈಗಂಬರರು ನಿರೋಧಿಸಿರುವರು.

10. ಒಮ್ಮೆ ಪೈಗಂಬರರು ಒಂದು ಧಾನ್ಯದ ರಾಶಿಯನ್ನು ದಾಟಿ ಹೋಗುತ್ತಿರುವಾಗ ತನ್ನ ಕೈಯನ್ನು ಅದರೊಳಗೆ ತೂರಿಸಿದರು. ಹೊರ ಬಂದ ಒದ್ದೆಯಾದ ಬೆರಳುಗಳನ್ನು ನೋಡಿ ಇದೇನೆಂದು ಅದರ ಯಜಮಾನನೊಡನೆ ವಿಚಾರಿಸಿದರು. ಅದು ಮಳೆಯಿಂದಾಗಿ ಒದ್ದೆಯಾದುದೆಂದು ಅವನು ಉತ್ತರಿಸಿದನು. ಒದ್ದೆಯಾದ ಧಾನ್ಯಗಳನ್ನು ಜನರಿಗೆ ತೋರುವ ರೀತಿಯಲ್ಲಿ ನೀನೇಕೆ ರಾಶಿಯ ಮೇಲ್ಭಾಗದಲ್ಲಿ ಹಾಕಲಿಲ್ಲ ? ನ್ಯೂನತೆಯನ್ನು ಮರೆ ಮಾಡುವವನು ನನ್ನ ಪೈಕಿಯವನಲ್ಲ ಎಂದು ಪೈಗಂಬರರು ನುಡಿದರು.

(ಸರ್ ಮುಹಮ್ಮದ್ ಝಫ್ರುಲ್ಲಾ ಖಾನರು ಬರೆದ Wisdom of The Holy Prophet ನಿಂದ ಆಯ್ದುದು).

—o—o—

---

ಜನಸಾಮಾನ್ಯರ ಉಪಯೋಗದ ಎಲ್ಲಾ ಸಾಮಾಗ್ರಿಗಳ, ಮುಖ್ಯವಾಗಿ ಧಾನ್ಯಗಳ ಬೆಲೆಯೇರುವಿಕೆಯು ತಡೆಯಲ್ಪಟ್ಟು ಬಡವನು ಹಸಿವೆಯಿಂದ ರಕ್ಷಿಸಲ್ಪಟ್ಟಿದ್ದಾನೆ.

ಹೀಗೆ ದೇಶವು ದಿನೇ ದಿನೇ ಪ್ರಗತಿಯತ್ತ ಮುನ್ನಡೆಯುತ್ತಿದೆ. ದೇಶವು ಇದೇ ಪಥದಲ್ಲಿ ಸಾಗುವುದರೊಂದಿಗೆ ತನ್ನ ಸಾಧನೆಯಲ್ಲಿ ಇನ್ನೂ ಹೆಚ್ಚಿನ ವರ್ಧನೆಯನ್ನು ಗಳಿಸಲಿ ಎಂದು ನಮ್ಮ ಹಾರೈಕೆ.

—ಸಂಪಾದಕ.

# ಭೂಕಂಪಗಳೂ ಜಲಪ್ರಳಯಗಳೂ



ಅಹ್ಮದಿಯಾ ಸಂಘಟನೆಯ ಸ್ಥಾಪಕ
**ಹಜ್ರತ್ ಮಿರ್ಜಾ ಗುಲಾಮ್ ಅಹ್ಮದ್.**

"ನೆನಪಿಡಿರಿ, ಈ ಭೂಲೋಕದಲ್ಲಿ ಅನೇಕ ಭೂಕಂಪಗಳು ಸಂಭವಿಸಲಿವೆಯೆಂಬ ಸೂಚನೆಯನ್ನು ಪರಮಾತ್ಮನು ನನಗೆ ಅರುಹಿದ್ದಾನೆ. ನಾನು ಮುಂದಾಗಿ ಹೇಳಿದ್ದಂತೆ, ಅಮೇರಿಕವನ್ನು ಮತ್ತು ಯುರೋಪನ್ನು ಭೂಕಂಪಗಳು ಬಾಧಿಸಿವೆ. ಅಂತೆಯೇ ಏಷ್ಯಾವನ್ನು ಸಹ ಬಾಧಿಸುವುದು ಖಂಡಿತ. ಅವುಗಳಲ್ಲಿ ಕೆಲವು ಪ್ರಳಯ ಕಾಲದ ಭಯಂಕರವಾದ ಸರ್ವನಾಶಕ್ಕೆ ಸಮಾನವಾಗಿರಬಹುದು. ಹಲವಾರು ಮಂದಿ ಮಡಿಯುವರು. ರಕ್ತದ ಹೊಳೆಗಳೇ ಹರಿಯುವುವು ...... ಮನುಷ್ಯನುಂಟಾದ ಕಾಲದಿಂದ ಇಷ್ಟರವರೆಗೆ ಸಂಭವಿಸದ ರೀತಿಯ ಅತ್ಯಂತ ಭಯಂಕರವಾದ ನಾಶವು ಉಂಟಾಗುವುದು. ಭೂಮಿಯ ನಾನಾ ಭಾಗಗಳು ಅಲ್ಲಿ ಎಂದೂ ಜನವಾಸವಿದ್ದಿಲ್ಲವೆಂದು ಭಾಸವಾಗುವಷ್ಟರ ಮಟ್ಟಿಗೆ ಅಡಿಮೇಲಾಗಿ ಸರ್ವನಾಶವಾಗುವವು. ಇದರೊಂದಿಗೆ ಭೂಮಿಯಲ್ಲಿಯೂ ಆಕಾಶದಲ್ಲಿಯೂ ಭಯಂಕರವಾದ ನಾಶಗಳು ಸಂಭವಿಸುವುವು. ವಿವೇಕಿಗಳಾದ ಜನರು ಇವುಗಳ ಅಸಾಧಾರಣತೆಯನ್ನು ಗ್ರಹಿಸುವರು. ಅವುಗಳ ಕುರಿತು ವೈಜ್ಞಾನಿಕ ಹಾಗೂ ತತ್ವಶಾಸ್ತ್ರ ಗ್ರಂಥಮಾಲೆಗಳಿಂದ ಏನನ್ನೂ ಅರಿಯಲು ಸಾಧ್ಯವಾಗಲಿಕ್ಕಿಲ್ಲ. ಆಗ ಜನರು ಮುಂದೇನು ಸಂಭವಿಸಬಹುದೆಂದು ಕಳವಳಗೊಳ್ಳುವರು. ಅನೇಕರು ರಕ್ಷಿಸಲ್ಪಡುವರು; ಅನೇಕರು ನಾಶವಾಗುವರು; ಅಂಥಾ ದಿನಗಳು ಅತೀ ಸಮೀಪವಾಗಿವೆ. ಅಷ್ಟೇಕೆ, ಬಾಗಿಲಲ್ಲಿಯೇ ಬಂದು ನಿಂತಿವೆ. ಒಂದು ಮಹಾನಾಶವನ್ನು ಈ ಲೋಕವು ಕಣ್ಣಾರೆ ಕಾಣಲಿದೆ. ಭೂಕಂಪಗಳು ಮಾತ್ರವಲ್ಲ, ಭೂಮಿಯಲ್ಲೂ ಆಕಾಶದಲ್ಲೂ ಇನ್ನೂ ಭಯಂಕರವಾದ ವಿಪತ್ತುಗಳು ಸಂಭವಿಸುವುವು! **ಮನುಷ್ಯರು ಪರಮಾತ್ಮನನ್ನು ಮರೆತು, ತಮ್ಮ ಪ್ರಯತ್ನ ಹಾಗೂ ಹೃದಯದ ಸಕಲ ಆಶಯಗಳನ್ನು ಕೇವಲ ಲೌಕಿಕ ಆಡಂಭರಗಳಿಗಾಗಿ ಮೀಸಲಾಗಿರಿಸಿದ ಕಾರಣದಿಂದಾಗಿ ಇವೆಲ್ಲಾ ಉಂಟಾಗುವುವು ..........'ಒಬ್ಬ ಪ್ರವಾದಿಯನ್ನು ಕಳುಹಿಸದೆ ನಾವು ಜನರನ್ನು ಶಿಕ್ಷಿಸುವುದಿಲ್ಲ' ಎಂದು** ಪರಮಾತ್ಮನು ಪವಿತ್ರ ಖುರ್‌ಆನಿನಲ್ಲಿ (17:16) ಹೇಳಿರುವನು. ಪಶ್ಚಾತ್ತಾಪ ಪಡುವವರು ರಕ್ಷಣೆಯನ್ನು ಹೊಂದುವರು. ಆಪತ್ತುಗಳಿಗೆ ಭಯಪಡುವವರೊಡನೆ ಕರುಣೆ ತೋರಿಸಲ್ಪಡುವುದು. ಈ ಕಷ್ಟ ಪರಂಪರೆಗಳಿಗೆ ಗುರಿಯಾಗಲಾರೆವೆಂದು ನೀವು ಭಾವಿಸುವಿರಾ? **ಅಥವಾ ಉಪಾಯದಿಂದ ಸ್ವಯಂ ರಕ್ಷಣೆಯನ್ನು ಪಡೆಯಲು ನಿಮಗೆ ಸಾಧ್ಯವಿದೆಯೇ? ಎಂದಿಗೂ ಸಾಧ್ಯವಿಲ್ಲ. ಅಂದು ಮನುಷ್ಯರ ಎಲ್ಲಾ ಯೋಜನೆಗಳು ಪರಾಜಯಗೊಳ್ಳುವುವು.** ಅಮೇರಿಕದಲ್ಲಿಯೂ ಇನ್ನಿತರ ಭೂಖಂಡಗಳಲ್ಲಿಯೂ ಭೂಕಂಪಗಳಾದರೂ ನಿಮ್ಮ ರಾಜ್ಯವು ಸುರಕ್ಷಿತವಾಗಿಯೇ ಇರುವುದೆಂದು ಭಾವಿಸಬೇಡಿ. ಅದಕ್ಕಿಂತಲೂ ಅತ್ಯಂತ ದಾರುಣವಾದ ಕಷ್ಟನಷ್ಟಗಳಿಗೆ ನೀವು ಗುರಿಯಾಗಬೇಕಾದೀತು. ಎಲೈ ಯುರೋಪಿನ ಜನಾಂಗಗಳೇ, ನೀವು ಸುರಕ್ಷಿತರಲ್ಲ. ಎಲೈ ಏಷ್ಯಾದ ಜನಾಂಗಗಳೇ, ನೀವು ಸಹ ವಿಮುಕ್ತರಲ್ಲ; ಎಲೈ ದ್ವೀಪವಾಸಿಗಳೇ, ನಿಮ್ಮ ಸ್ವಯಂ ಕಲ್ಪಿತ ದೇವರುಗಳು ಆ ದಿನದಂದು ನಿಮ್ಮ ರಕ್ಷಣೆಗೆ ಬರಲಾರರು. **ದೊಡ್ಡ ದೊಡ್ಡ ನಗರಗಳು ನಾಶವಾಗುವುದನ್ನು ಮತ್ತು ಜನಭರಿತ ಪ್ರದೇಶಗಳು ಜನಶೂನ್ಯವಾಗುವ ಭವಿಷ್ಯದ ಚಿತ್ರವನ್ನು ನಾನು ಈಗಲೇ ಕಾಣುತ್ತಿದ್ದೇನೆ.** ಆ ಸರ್ವಶಕ್ತನಾದ ಪರಮಾತ್ಮನು ಒಂದು ದೀರ್ಘಕಾಲದವರೆಗೆ ಮೌನವನ್ನಾಚರಿಸಿದನು. ಅವನ ಸಮ್ಮುಖದಲ್ಲಿಯೇ ಹೇಯವಾದ ಅನೇಕ ಅತೀ ದುಷ್ಟ

ಕಾರ್ಯಗಳು ನಡೆಯುತ್ತಿದ್ದರೂ ಅವನು ಸುಮ್ಮಗಿದ್ದನು. ಆದರೆ ಈಗ ಅವನು ಭಯಂಕರ ಸ್ವರೂಪದಿಂದ ತನ್ನ ಮುಖವನ್ನು ತೋರಿಸುವನು. ಕಿವಿ ಇದ್ದವರು ಕೇಳಿಕೊಳ್ಳಲಿ! ಅಂತಹ ಕಾಲವು ದೂರವಿಲ್ಲ!............ ನೋಹಾ ಪ್ರವಾದಿಯ ಕಾಲವು*1 ನಿಮ್ಮ ಕಣ್ಣಮುಂದೆ ಪ್ರತ್ಯಕ್ಷವಾಗುವುದು. ಪ್ರವಾದಿ ಲೂತ್‌ರವರ ರಾಜ್ಯದಲ್ಲಿ ಸಂಭವಿಸಿದ್ದನ್ನು*2 ನಿಮ್ಮ ಸ್ವಂತ ಕಣ್ಣುಗಳಿಂದ ಕಾಣುವಿರಿ. ಆದರೆ ಪರಮಾತ್ಮನು ತನ್ನ ಕೋಪವನ್ನು ನಿಧಾನವಾಗಿ ತೋರಿಸುವನು. ನಿಮ್ಮ ಮೇಲೆ ದಯಾದೃಷ್ಟಿಯನ್ನು ಬೀರುವಂತೆ ನೀವು ಅವನನ್ನು ಪಶ್ಚಾತ್ತಾಪದಿಂದ ಪ್ರಾರ್ಥಿಸಿರಿ. ದೇವರನ್ನು ಮರೆತವನು ಮನುಷ್ಯನಲ್ಲ; ಕ್ರಿಮಿಕೀಟಕ್ಕೆ ಸಮಾನನು. ದೇವರಿಗೆ ಯಾರು ಹೆದರುವುದಿಲ್ಲವೋ ಅವನು ಸತ್ತಂತೆಯೇ ಸರಿ; ಜೀವವಿಲ್ಲದವನು." (ಹಕೀಖತುಲ್ ವಹ್ಯ 1907. ಪುಟ 256–257.)

—ಹಜ್ರತ್ ಅಹ್ಮದ್.

---

*1 ಭಯಂಕರ ಜಲಪ್ರಳಯ.

*2 ಸೆಡೋಮ್ ಗಮೋರಾಗಳಲ್ಲಿ ಭೀಕರ ಭೂಕಂಪಗಳು ಸಂಭವಿಸಿದ್ದುವು

—ಸಂಪಾದಕ.


For your needs in empty gunnies, always rely on

Phone No. 74803

JANATHA STORES

9/211 Gunny Street, CALICUT-673001.

Phone: 73196 Phone Branch: 75849

ಉತ್ತಮ ತರದ ಮರಗೆಣಸಿನ ಚಿಪ್ಸ್ ಮತ್ತು ಹಿಟ್ಟಿನ ರಖಂ ವ್ಯಾಪಾರಸ್ಥರು

KESSEE TRADING CORPORATION

Dealers in: **Tapioca** Chips & Flour

9/135, Gunny Street, CALICUT-1.

Phone: 75849 GST No. K-191 CSR No. K-125

ಶುಂಠಿ, ಕರಿಮೆಣಸು, ಮರಗೆಣಸು, ಅರಸಿನ ಮತ್ತು ಇತರ ಕಾಡು ಉತ್ಪತ್ತಿಗಳ ಪ್ರಸಿದ್ಧ ವ್ಯಾಪಾರಿಗಳು

KECEE & COMPANY

Merchants & Commission Agents

9/231, COPRA BAZAAR, CALICUT—1.

## ಸ್ವಾತಂತ್ರ್ಯ ಹೋರಾಟದಲ್ಲಿ ಅಹ್ಮದಿಯರ ಪಾತ್ರ

# ಕೋಮನ್‌ವೆಲ್ತ್ ಸಮ್ಮೇಳನದಲ್ಲಿ ಚರಿತ್ರಪ್ರಧಾನವಾದ ಭಾಷಣ

—ಸರ್ ಝಫರುಲ್ಲಾ ಖಾನರ ಆತ್ಮಕಥೆಯಿಂದ.

1945ರ ಮಾರ್ಚ್ ತಿಂಗಳಲ್ಲಿ ಲಂಡನಿನ ಚೇತಂ ಹೌಸಿನಲ್ಲಿ "ರೋಯಲ್ ಇನ್‌ಸ್ಟಿಟ್ಯೂಟ್ ಓಫ್ ಇಂಟರ್‌ನೇಶನಲ್ ಎಫೇರ್ಸ್"ನ ಆಶ್ರಯದಲ್ಲಿ ಕೋಮನ್‌ವೆಲ್ತ್ ಪ್ರತಿನಿಧಿಗಳ ಒಂದು ಸಭೆಯು ಸೇರಿತು. ಇಂಡಿಯನ್ ಇನ್‌ಸ್ಟಿಟ್ಯೂಟ್‌ನ ಒಂದು ಪ್ರತಿನಿಧಿ ಸಂಘವೂ ಈ ಕೊನ್ಫರೆನ್ಸಿನಲ್ಲಿ ಭಾಗವಹಿಸಿತ್ತು. ಪ್ರತಿನಿಧಿ ಸಂಘದಲ್ಲಿ ನನ್ನೊಂದಿಗೆ ಸರ್ ಮಹಾರಾಜ್ ಸಿಂಗ್, ಮಿರ್ ಮಖ್‌ಬೂಲ್ ಮಹಮೂದ್, ಸಿ. ಎಲ್. ಮೆಹ್ತ, ಖಾಜಾ ಸರ್‌ವರ್ ಹಸನ್ ಎಂಬಿವರೂ ಇದ್ದರು. ಉದ್ಘಾಟನಾ ಸಮಾರಂಭದಲ್ಲಿ ಪ್ರತಿಯೊಂದು ಪ್ರತಿನಿಧಿ ಸಂಘದ ಮುಖಂಡರೂ ತಮ್ಮ ತಮ್ಮ ರಾಷ್ಟ್ರದ ಯುದ್ಧಯತ್ನಗಳ ಕುರಿತು ಐದೈದು ನಿಮಿಷ ಭಾಷಣ ಮಾಡಬೇಕೆಂದು ಬೇಡಿಕೆಯುಂಟಾಯಿತು. ಭಾರತದ ಸರದಿ ಬಂದಾಗ ನಾನು ಮೂರು ನಿಮಿಷಗಳಲ್ಲಿ ಭಾರತದ ಯುದ್ಧಯತ್ನಗಳ ಕುರಿತು ಸಂಕ್ಷಿಪ್ತವಾದ ವಿವರಣೆಯನ್ನು ನೀಡಿದ ಬಳಿಕ ಈರೀತಿ ಹೇಳಿದೆನು: "25 ಲಕ್ಷ ಭಾರತೀಯರು ಒಂದಲ್ಲ ಒಂದು ರೀತಿಯಲ್ಲಿ ಯುದ್ಧದ ವಿವಿಧ ಮಂಡಲಗಳಲ್ಲಿ ಬ್ರಿಟನಿನ ಹಾಗೂ ಇತರ ಮಿತ್ರ ರಾಷ್ಟ್ರಗಳ ಸ್ವಾತಂತ್ರ್ಯ ಮತ್ತು ಸ್ವಾಸ್ಥ್ಯ ಸಂರಕ್ಷಣೆಗಾಗಿ ವಿವಿಧ ವಿಧಾನದ ಸೇವೆಗಳಲ್ಲಿ ಏರ್ಪಟ್ಟಿರುವರು. ಅವರು ತಮ್ಮ ಜೀವವನ್ನು ಬಲಿಯರ್ಪಿಸಲು ಕೂಡಾ ಹಿಂಜರಿಯಲಿಲ್ಲ. ಮಾತ್ರವಲ್ಲ, ಸೈನ್ಯ ಸಹಾಯದಲ್ಲೂ ಯುದ್ಧ ಸಾಮಾಗ್ರಿಗಳನ್ನು ಮತ್ತು ಆಹಾರ ಪದಾರ್ಥಗಳನ್ನು ಶೇಖರಿಸಿ ಕೊಡುವುದರಲ್ಲೂ ಭಾರತವು ಅನುಸರಣೀಯವಾದ ಪಾತ್ರವನ್ನು ವಹಿಸಿರುತ್ತದೆ."

ಇದರ ಕುರಿತಾದ ಕೆಲವು ವಿವರಣೆಗಳನ್ನು ನೀಡುತ್ತಾ ನಾನು ಈರೀತಿ ಮುಂದುವರಿಸಿದೆ: "ಕೋಮನ್‌ವೆಲ್ತಿನ ರಾಜ್ಯ ತಂತ್ರಜ್ಞರೇ, ಭಾರತದ ಮಕ್ಕಳು ಬ್ರಿಟಿಷ್ ಸಾಮ್ರಾಜ್ಯದ ಸ್ವಾತಂತ್ರ್ಯವನ್ನು ರಕ್ಷಿಸಲಿಕ್ಕೋಸ್ಕರ ರಣಭೂಮಿಯಲ್ಲಿ ವೀರಸಮರವನ್ನು ನಡೆಸುತ್ತಿರುವರಾದರೂ ಭಾರತವು ಇಂದೂ ಅಸ್ವತಂತ್ರ



ವಾಗಿಯೇ ಉಳಿದಿದೆ. ಅವರು ತಮ್ಮ ಸ್ವಾತಂತ್ರ್ಯವನ್ನು ಎದುರುನೋಡುತ್ತಾ ದಿನಗಳೆಯಬೇಕಾಗಿದೆ ಎಂಬುದು ನಗ್ನವಾದ ಒಂದು ದುರ್ನೀತಿಯ ಘೋಷಣೆಯಲ್ಲವೇ? ಈ ದುರವಸ್ಥೆಯ ಕುರಿತಾದ ಒಂದು ವಿಷಯವನ್ನು ನಾನಿಲ್ಲಿ ಹೇಳಬಯಸುತ್ತೇನೆ: ಚೀನಾ ರಾಜ್ಯದ ಜನಸಂಖ್ಯೆಯೂ ವಿಸ್ತಾರವೂ ಭಾರತದ ಜನಸಂಖ್ಯೆಗಿಂತಲೂ ವಿಸ್ತಾರಕ್ಕಿಂತಲೂ ನಿಜವಾಗಿಯೂ ಅಧಿಕವಾ

ಗಿದೆ. ವಿಸ್ತಾರವನ್ನೂ ಜನಸಂಖ್ಯೆಯನ್ನೂ ಬಿಟ್ಟರೆ ಚೀನವು ಭಾರತಕ್ಕಿಂತ ಎಷ್ಟೋ ಹಿಂದುಳಿದಿದೆ. ವಿದ್ಯಾಭ್ಯಾಸದಲ್ಲೂ ಕೈಗಾರಿಕೆಯಲ್ಲೂ ಆದಾಯದಲ್ಲೂ ಖರ್ಚಿನಲ್ಲೂ ಕ್ಷೇಮಾಭಿವೃದ್ಧಿಯ ಕಾರ್ಯಗಳಲ್ಲೂ ಭಾರತವು ಚೀನಾಕ್ಕಿಂತಲೂ ಮುಂದೆಯಿದೆಯೆಂಬುದು ಯಥಾರ್ಥವಲ್ಲವೇ? ಹಾಗಿದ್ದರೂ ಚೀನವು ಇಂದು ಬೃಹತ್ ಶಕ್ತಿಗಳಲ್ಲೊಂದಾಗಿ ಗಣಿಸಲ್ಪಡುವುದೂ ಭಾರತವು ಗಣಿಸಲ್ಪಡದಿರುವುದೂ ಯಾತಕ್ಕಾಗಿ? ಚೀನ ಸ್ವತಂತ್ರವಾಗಿಯೂ ಭಾರತವು ಅಸ್ವತಂತ್ರವಾಗಿಯೂ ಇರುವುದರಿಂದ ಮಾತ್ರವಲ್ಲವೇ? ಆದರೆ, ಇದೇ ಸ್ಥಿತಿಯು ಬಹುಕಾಲ ಮುಂದುವರಿಯಲಾರದು. ಭಾರತವು ಇಂದು ಎಚ್ಚೆತ್ತಿದೆ. ಅದು ಸ್ವತಂತ್ರವನ್ನು ಗಳಿಸುವುದು ಖಂಡಿತ! ಕೋಮನ್‌ವೆಲ್ತಿನೊಳಗೆ ನಿಂತಿರುವಾಗಲೇ ನಿಮಗೆಲ್ಲಾ ಇದು ಸ್ವೀಕೃತವಾಗಿರಬೇಕಾಗಿದೆ. ಕೋಮನ್‌ವೆಲ್ತ್‌ನಿಂದ ಹೊರಗೆ ಹೋಗದೆ ನಿರ್ವಾಹವಿಲ್ಲವೆಂಬ ಅವಸ್ಥೆಗೆ ನೀವು ಭಾರತವನ್ನು ತಳ್ಳಿ ಹಾಕಬಾರದು!''

ಈ ಸಮ್ಮೇಳನವು ಒಂದು ಸಾಯಂಕಾಲದಲ್ಲಿ ನಡೆಯಿತು. ಅಧಿವೇಶನವು ಮುಗಿದ ನಂತರ ನಾವೆಲ್ಲರೂ ಚೇತಂ ಹೌಸಿನಿಂದ ಹೊರಬಂದಾಗ ಸಂಧ್ಯೆಗೆ ಪ್ರಕಟಿಸುವ "ಸ್ಟಾರ್" ಪತ್ರಿಕೆಯಲ್ಲಿ ನನ್ನ ಭಾಷಣದ ಪ್ರಸ್ತುತ ಭಾಗವು ಪದಾನುಪದ ದೊಡ್ಡ ಅಕ್ಷರಗಳಲ್ಲಿ ಮುದ್ರಿಸಿ ಕಾಣಲ್ಪಟ್ಟಿತು. ಪತ್ರಿಕೆಗಾಗಿ ಎಳೆದಾಟವೂ ನಡೆದಿತ್ತು.

ಕೆಲವು ದಿನಗಳ ನಂತರ ಕಾಂಗ್ರೆಸ್ ಮುಖಂಡರಾದ ಆಸಫಲಿ ನನ್ನೊಡನೆ ಈ ರೀತಿ ಹೇಳಿದರು: "ಲಂಡನಿನಲ್ಲಿ ನೀವು ಪ್ರಸ್ತುತ ಭಾಷಣವನ್ನು ಮಾಡುತ್ತಿದ್ದಾಗ ಪಂಡಿತ್ ಜವಾಹರಲಾಲ್ ನೆಹರೂರವರೂ ನಾನೂ ಇನ್ನಿತರ ಕೆಲವು ಕಾಂಗ್ರೆಸ್ ಮುಂದಾಳುಗಳೂ ಔರಂಗಾಬಾದಿನ ಜೈಲಿನಲ್ಲಿ ಬಂಧಿತರಾಗಿದ್ದೆವು. ನಾವು ಸಮ್ಮೇಳನದ ಕಾರ್ಯಕ್ರಮಗಳನ್ನು ರೇಡಿಯೋ ಮೂಲಕ ಶ್ರವಿಸುತ್ತಿದ್ದೆವು. ಕೋಮನ್‌ವೆಲ್ತಿನ ರಾಜ್ಯ ತಂತ್ರಜ್ಞರೇ! ಎಂದು ಜೋರಾಗಿ ಸಂಬೋಧಿಸಿ ನೀವು ಮಾತನಾಡಿದಾಗ ನಾವೆಲ್ಲರೂ ಶ್ರದ್ಧೆಯಿಂದ ಭಾಷಣವನ್ನು ಕೇಳತೊಡಗಿದೆವು. ಪಂಡಿತ್ ನೆಹರೂಜಿಯವರು ರೇಡಿಯೋದ ಅತೀ ಹತ್ತಿರಕ್ಕೆ ಬಂದು ಕಿವಿ ನಿಮಿರಿಸಿಕೊಂಡು ಅದನ್ನು ಆಲಿಸುತ್ತಿದ್ದರು. ಭಾಷಣ ಮುಗಿದ ನಂತರ ಪಂಡಿತ್‌ಜೀ ಈ ರೀತಿ ಹೇಳಿದರು: ನೋಡಿರಿ, ಇವರು ನಮ್ಮೆಲ್ಲರಿಗಿಂತಲೂ ಎಷ್ಟು ನಿರ್ಭೀತಿಯಿಂದ ಬ್ರಿಟಿಷ್ ಸರಕಾರವನ್ನು ಎಚ್ಚರಿಸಿರುವರು!''

ಅಂದು ರಾತ್ರಿಯೇ ಸಮ್ಮೇಳನದಲ್ಲಿ ಭಾಗವಹಿಸಿದವರ ಗೌರವಾರ್ಥ ಬ್ರಿಟಿಷ್ ಸರಕಾರದ ಪರವಾಗಿ ಕ್ಲಾರಿಡ್ಜ್ಸ್ ಹೋಟೆಲಿನಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಲಾಗಿತ್ತು. ಸರಕಾರದ ಪ್ರತಿನಿಧಿಯಾಗಿ ಲಾರ್ಡ್ ಕ್ರೆಂಬೋರನ್ ಆತಿಥೇಯರಾಗಿದ್ದರು. ಪ್ರಧಾನಮಂತ್ರಿ ಚರ್ಚಿಲರ ಹೊರತು ಡೆಪ್ಯೂಟಿ ಪ್ರೈಮಿನಿಸ್ಟರ್ ಆಟ್‌ಲಿ, ಲೋರ್ಡ್ ಚಾನ್ಸಲರ್ ಸೈಮನ್ ಪ್ರಭು ಎಂಬಿವರನ್ನೊಳಗೊಂಡ ಬ್ರಿಟಿಷ್ ಸರಕಾರದ ಪ್ರಧಾನ ವ್ಯಕ್ತಿಗಳೆಲ್ಲರೂ ಆ ಸತ್ಕಾರದಲ್ಲಿ ಭಾಗವಹಿಸಿ

## ನೆಹರೂಜಿ ಕಿವಿ ನಿಮಿರಿಸಿ ಆಲಿಸಿದರು!

ಆಸಫಲಿ ನನ್ನೊಡನೆ ಈ ರೀತಿ ಹೇಳಿದರು:
"ಲಂಡನಿನಲ್ಲಿ ನೀವು ಪ್ರಸ್ತುತ ಭಾಷಣವನ್ನು ಮಾಡುತ್ತಿದ್ದಾಗ ಪಂಡಿತ್ ಜವಾಹರಲಾಲ್ ನೆಹರೂರವರೂ ನಾನೂ ಇನ್ನಿತರ ಕೆಲವು ಕಾಂಗ್ರೆಸ್ ಮುಂದಾಳುಗಳೂ ಔರಂಗಾಬಾದಿನ ಜೈಲಿನಲ್ಲಿ ಬಂಧಿತರಾಗಿದ್ದೆವು. ನಾವು ಸಮ್ಮೇಳನದ ಕಾರ್ಯಕ್ರಮಗಳನ್ನು ರೇಡಿಯೋ ಮೂಲಕ ಶ್ರವಿಸುತ್ತಿದ್ದೆವು. ಕೋಮನ್‌ವೆಲ್ತಿನ ರಾಜ್ಯ ತಂತ್ರಜ್ಞರೇ! ಎಂದು ಜೋರಾಗಿ ಸಂಬೋಧಿಸಿ ನೀವು ಮಾತನಾಡಿದಾಗ ನಾವೆಲ್ಲರೂ ಶ್ರದ್ಧೆಯಿಂದ ಭಾಷಣವನ್ನು ಕೇಳತೊಡಗಿದೆವು. ಪಂಡಿತ್ ನೆಹರೂಜಿಯವರು ರೇಡಿಯೋದ ಅತೀ ಹತ್ತಿರಕ್ಕೆ ಬಂದು ಕಿವಿ ನಿಮಿರಿಸಿಕೊಂಡು ಅದನ್ನು ಆಲಿಸುತ್ತಿದ್ದರು. ಭಾಷಣ ಮುಗಿದ ನಂತರ ಪಂಡಿತ್‌ಜೀ ಈ ರೀತಿ ಹೇಳಿದರು: ನೋಡಿರಿ, ಇವರು ನಮ್ಮೆಲ್ಲರಿಗಿಂತಲೂ ಎಷ್ಟು ನಿರ್ಭೀತಿಯಿಂದ ಬ್ರಿಟಿಷ್ ಸರಕಾರವನ್ನು ಎಚ್ಚರಿಸಿರುವರು!''

ದ್ದರು. ಲೋರ್ಡ್ ಕ್ರೈಂಬೋರನ್ ಅತಿಥಿಗಳನ್ನು ಸ್ವಾಗತಿಸಿ ಶುಭವನ್ನು ಹಾರೈಸುತ್ತಾ ಕೋಮನ್‌ವೆಲ್ತಿನ ಪ್ರಾಧಾನ್ಯತೆಯು ಕುರಿತು ಕೆಲವು ಅಂಶಗಳನ್ನು ವಿವರಿಸಿದರು.

ಆತಿಥೇಯನ ಪರಾಮರ್ಶೆಗೆ ಕೆನಡಿಯನ್ ಪ್ರತಿನಿಧಿ ಸ್ಟ್ರಾಫೋರ್ಡ್ ನಮ್ರತೆಯಿಂದ ಉತ್ತರಿಸಿದರು. ಒಂದು ಪತ್ರಿಕೆಯ ಸಂಪಾದಕರು ಸಹ ಆಗಿದ್ದ ಅವರು ಅದಕ್ಕೆ ಅರ್ಹರೂ ಆಗಿದ್ದರು. ಆದರೆ ಗೌರವರೂಪದ ಔಪಚಾರಿಕ ಉತ್ತರವನ್ನೀಯುವ ಭಾರವು ನನ್ನಲ್ಲಿ ಅರ್ಪಿಸಲ್ಪಟ್ಟಿತ್ತು. ಸಾಯಾಹ್ನದ ನನ್ನ ಭಾಷಣದ ಕುರಿತು ದೊಡ್ಡ ಕೋಲಾಹಲವು ಉಂಟಾಗಿರುವ ಕಾರಣ ನಾನು ಆ ವಿಷಯವನ್ನೇ ಇನ್ನೂ ಹೆಚ್ಚು ವಿವರಿಸುವೆನೆಂದು ಸಾಮಾನ್ಯವಾಗಿ ಎಲ್ಲರೂ ಪ್ರತೀಕ್ಷಿಸಿದ್ದರು. ಭಾರತಕ್ಕೆ ಸ್ವಾತಂತ್ರ್ಯವನ್ನೀಲು ಅಡ್ಡಿಯಾಗಿರುವುದು ಬ್ರಿಟಿಷ್ ಸರಕಾರವಲ್ಲವೆಂದೂ ಹಿಂದು-ಮುಸ್ಲಿಂ ತರ್ಕಗಳ ನಿಮಿತ್ತ ಬ್ರಿಟಿಷ್ ಸರಕಾರವು ಅಸಹಾಯಕ ಪರಿಸ್ಥಿತಿಯಲ್ಲಿದೆಯೆಂದೂ ಸತ್ಕಾರಕ್ಕೆ ಹೋಗುವ ಮೊದಲು ಕೆಲವರು ಗುಣುಗುಟ್ಟುವುದನ್ನು ನಾನು ಕೇಳಿದ್ದೆ.

ನಾನು ಭಾಷಣಮಧ್ಯೆ ಭಾರತದ ಸ್ವಾತಂತ್ರ್ಯದ ಕುರಿತು ಈರೀತಿ ಹೇಳಿದೆನು: “ಹಿಂದು-ಮುಸ್ಲಿಂ ತರ್ಕವನ್ನು ಮುಂದಿಡುತ್ತಾ ತಮ್ಮ ಕರ್ತವ್ಯಗಳಿಂದ ವಿಮುಖರಾಗಲು ಬ್ರಿಟಿಷ್ ಸರಕಾರಕ್ಕೆ ಸಾಧ್ಯವಿಲ್ಲ. ಯುದ್ಧ ಕಾಲದಲ್ಲೇ ಬ್ರಿಟನ್ ತಮಗೆ ಎದುರಿಸಬೇಕಾಗಿ ಬಂದ ಎಷ್ಟೋ ಜಟಿಲ ಪ್ರಶ್ನೆಗಳನ್ನು ಪರಿಹರಿಸುವುದಲ್ಲಿ ವಿಜಯಿಯಾಗಿದೆ. ಬ್ರಿಟಿಷ್ ಸರಕಾರಕ್ಕೆ ಪರಿಹಾರವನ್ನು ಕಾಣಲು ಸಾಧ್ಯವಾಗದ ಒಂದೇ ಒಂದು ಪ್ರಶ್ನೆಯು ಭಾರತದ ಸ್ವಾತಂತ್ರ್ಯವೇ? ಈ ಪ್ರಶ್ನೆಯು ವಿಷಮಕರವಾಗಿರುವುದೆಂದು ನಾನು ನಿಶ್ಚಯವಾಗಿಯೂ ಒಪ್ಪುತ್ತೇನೆ. ಆದರೆ, ಈ ಸಮಸ್ಯೆಯನ್ನು ಪರಿಹರಿಸುವುದರಲ್ಲಿ ಬ್ರಿಟಿಷ್ ಧಿಷಣಾಶಾಲಿತ್ವವು ಎಂದಿಗೂ ಪರಾಭವಗೊಳ್ಳಬಾರದು. ಈ ಸಮಸ್ಯೆಯನ್ನು ಪರಿಹರಿಸುವುದರಲ್ಲಿ ಹಿಂದು-ಮುಸ್ಲಿಂ ತರ್ಕವೇ ಅತಿದೊಡ್ಡ ಕಾರಣವೆಂದಾಗಿದ್ದರೆ, ಹಿಂದು ಮುಸ್ಲಿಂ ತರ್ಕಗಳಿಗೆ ಒಮ್ಮತವಾದ ಒಂದು ತೀರ್ಮಾನವನ್ನು ಕೈಗೊಳ್ಳದಿದ್ದಲ್ಲಿ ಒಂದು ನಿಶ್ಚಿತ ದಿವಸದಂದು ಬ್ರಿಟಿಷ್ ಸರಕಾರವು ನೀತಿಯುತವಾದ ಒಂದು ಪರಿಹಾರವನ್ನು ನಿರ್ದೇಶಿಸುವುದೆಂದೂ, ಅದರ ಆಧಾರದಲ್ಲಿ ನಿಯಮ ನಿರ್ಮಾಣಮಾಡಿ ಭಾರತಕ್ಕೆ ಡೊಮಿನಿಯನ್ ರಾಜ್ಯ ಪದವಿ ನೀಡುವುದೆಂದೂ, ಆದರೆ ಇದು ಒಂದು ತಾತ್ಕಾಲಿಕ ಕ್ರಮವೆಂದೂ ಸಂವಿಧಾನದ ಬುನಾದಿಯಲ್ಲೇ ಕೋಮು ಪ್ರಶ್ನೆಗಳಿಗೆ ಶಾಶ್ವತವಾದ ಒಂದು ಪರಿಹಾರವನ್ನು ಉಂಟುಮಾಡುವುದರೊಂದಿಗೆ ಪಾರ್ಲಿಮೆಂಟಿನ ಐಕ್ಯಕಂಠವಾದ ತೀರ್ಮಾನದ ಮೇರೆಗೆ ಶಾಸನ ನಿರ್ಮಿಸಿ ಕಾರ್ಯಗತಗೊಳಿಸಲಾಗುವುದೆಂದೂ ಅಸಂದಿಗ್ಧವಾಗಿ ಘೋಷಿಸುತ್ತಾ ಬ್ರಿಟಿಷ್ ಸರಕಾರವು ತನ್ನ ಉದ್ದೇಶ ಶುದ್ಧಿಯನ್ನು ಬಹಿರಂಗಪಡಿಸಬೇಕಾಗಿದೆ. ಈ ಘೋಷಣೆಯಿಂದ ಭಾರತ ಮಾತ್ರವಲ್ಲ, ಲೋಕದ ಎಲ್ಲಾ ರಾಷ್ಟ್ರಗಳೂ ಬ್ರಿಟನಿನ ಉದ್ದೇಶ ಶುದ್ಧಿಯನ್ನು ಅಂಗೀಕರಿಸಲು ನಿರ್ಬಂಧಿತವಾಗುತ್ತವೆ.’’

ಸತ್ಕಾರ ಸಮಾರಂಭವು ಕೊನೆಗೊಂಡ ನಂತರ ಹಲವಾರು ಮಂತ್ರಿಗಳು ನನ್ನ ನಿರ್ದೇಶದ ಬಗ್ಗೆ ಆಳವಾದ ಅಭಿರುಚಿಯನ್ನು ಪ್ರಕಟಿಸಿದರು. ಲೋರ್ಡ್ ಚಾನ್ಸಲರ್ ಸೈಮನ್ ಪ್ರಭು ಮಧ್ಯಾಹ್ನದ ಊಟಕ್ಕೆ ನನ್ನನ್ನು ಆಮಂತ್ರಿಸಿ, ಪ್ರಸ್ತುತ ನಿರ್ದೇಶದನ್ವಯ ತುರ್ತು ಮಾತುಕತೆಗಳನ್ನು ನಡೆಸಲು ಆಲೋಚಿಸಿರುವುದಾಗಿ ತಿಳಿಸಿದರು. ಭಾಷಣ ಮಾಡಿದ ಎರಡು ದಿವಸಗಳ ನಂತರ ಒಂದು ಸಾಯಂಕಾಲದಲ್ಲಿ ನಾನು ಹೋಟೆಲ್ ರೂಮಿನಿಂದ ಸಮ್ಮೇಳನ ಸ್ಥಳವಾದ ಚೇತಂ ಹೌಸಿಗೆ ಹೋಗುತ್ತಿರುವಾಗ ದಾರಿಯಲ್ಲಿ ಲಿಬರಲ್ ಪಾರ್ಟಿಯ ಲೀಡರ್ ಕ್ಲೆಮೆಂಟ್ ಡೇವಿಡ್‌ರೊಡನೆ ಭೇಟಿಯಾಯಿತು. ಅವರೂ ಸಮ್ಮೇಳನದಲ್ಲಿ ಭಾಗವಹಿಸಲಿಕ್ಕಾಗಿ ಹೋಗುತ್ತಿದ್ದರು. ನನ್ನನ್ನು ನೋಡಿದ ಕೂಡಲೇ ಅವರು ಹೇಳಿದರು: **“ಅಭಿನಂದನೆಗಳು! ತಮ್ಮ ಭಾಷಣದ ಫಲವಾಗಿ ಕೆಬಿನೆಟ್‌ನ ಒತ್ತಾಯದಿಂದ ಭಾರತದ ವೈಸ್‌ರೋಯಿ ವೇವಲ್ ಪ್ರಭುವನ್ನು ಮಾತುಕತೆಗಾಗಿ ಲಂಡನಿಗೆ ಬರಮಾಡಿಸಲಾಗಿದೆ. ಈ ವಿಷಯವು ಈಗಲೂ ಅತಿರಹಸ್ಯವಾಗಿದೆ; ರಹಸ್ಯವಾಗಿಯೇ ಇಡಬೇಕು.”**

ನಾನು ಅಲ್ಲಾಹುವನ್ನು ಸ್ತುತಿಸಿದೆನು. ಅವನು ನನ್ನ ಈ ನಿಸ್ಸಾರವಾದ ಪರಿಶ್ರಮಗಳಲ್ಲಿ ಅನುಗ್ರಹವನ್ನು ಕರುಣಿಸಿ, ಆ ಶ್ರಮಗಳನ್ನು ಫಲಪ್ರದವನ್ನಾಗಿ ಮಾಡಿದನು.

ಆ ನಂತರ ವೇವಲ್ ಪ್ರಭು ಭಾರತಕ್ಕೆ ಬಂದು ಭಾರತ ಸ್ವಾತಂತ್ರ್ಯದ ನಿಯಮ ಸಂಬಂಧವಾದ ಪ್ರವರ್ತನೆಗಳ ಅಂತಿಮ ಕಾರ್ಯಕ್ರಮಗಳು ಆರಂಭವಾಯಿತು!

(ತಹ್‌ದೀಸೆ ನಿಅಮತ್, ಪುಟ 481–483
ಕನ್ನಡಕ್ಕೆ: ಎಂ. ಪಿ. ಇಬ್ರಾಹಿಂ.)

# ರಮ್‌ಝಾನ್ ತಿಂಗಳ ಉಪವಾಸ

—ಎನ್. ಹಾಮಿದ್

ಸಾಮಾನ್ಯವಾಗಿ ಎಲ್ಲಾ ಮತಾನುಯಾಯಿಗಳು ಉಪವಾಸವೆಂಬ ಧಾರ್ಮಿಕ ಕರ್ಮವನ್ನು ಮಾಡುತ್ತಾರೆ. ಇದನ್ನು ಅರಬಿಯಲ್ಲಿ "ಸೌಮ್'' ಎಂದೂ ಪಾರಸೀ ಭಾಷೆಯಲ್ಲಿ "ರೋಝ'' ಎಂದೂ ಸಂಸ್ಕೃತದಲ್ಲಿ "ವ್ರತ'' ಎಂದೂ ಕರೆಯುತ್ತಾರೆ. ವಿವಿಧ ಮತಾನುಯಾಯಿಗಳು ಮಾಡುವ ಉಪವಾಸ ಕ್ರಮಗಳು ಬೇರೆ ಬೇರೆ ರೀತಿಯಲ್ಲಾಗಿವೆ. ಅವರು ತಮ್ಮ ಮತದ ಸ್ಥಾಪಕರೋ ಆಚಾರ್ಯರೋ ನಿರ್ದೇಶಿಸಿದ ರೀತಿಯಲ್ಲಿ ಉಪವಾಸ ಮಾಡುವರು. ಇಸ್ಲಾಮ್ ಮತವು ನಿರ್ದೇಶಿಸಿರುವ ಉಪವಾಸ ಕ್ರಮವು ಬೇರೆ ಮತಸ್ಥರು ಅಂಗೀಕರಿಸಿದ ರೀತಿಗಿಂತ ಭಿನ್ನವಾಗಿದೆ.

"ರಮ್‌ಝಾನ್" ಎಂಬ ಚಾಂದ್ರಮಾನ ತಿಂಗಳಲ್ಲಿ ಎಲ್ಲಾ ದಿವಸ ಉಪವಾಸ ಮಾಡಬೇಕೆಂದು ಇಸ್ಲಾಂ ಆಜ್ಞಾಪಿಸುತ್ತದೆ. ಪ್ರೌಢಾವಸ್ಥೆಯನ್ನು ತಲುಪದ ಮಕ್ಕಳನ್ನೂ ರಜಸ್ವಲೆಯರಾದ ಸ್ತ್ರೀಯರನ್ನೂ ಈ ಆಜ್ಞೆಯು ತನ್ನ ಪರಿಧಿಯಿಂದ ಹೊರಗಿರಿಸಿದೆ. ರೋಗಬಾಧಿತರಾಗಲೀ ಯಾತ್ರಿಕರಾಗಲೀ ಉಪವಾಸ ವ್ರತ ಆಚರಿಸಬೇಕೆಂದಿಲ್ಲ. ತಾವು ಅನುಷ್ಠಿಸಲು ಅಸಮರ್ಥರಾದ ಉಪವಾಸಗಳನ್ನು ಇನ್ನೊಂದು ಸಮಯದಲ್ಲಿ ಅವರು ಪೂರೈಸಿದರೆ ಸಾಕು ಸ್ಥಿರವಾಗಿ ರೋಗಬಾಧಿತರೂ, ವ್ರತ ಕೈಗೊಳ್ಳಲು ಸಾಮರ್ಥ್ಯಹೀನರಾಗಿರುವಷ್ಟು ವಾರ್ಧಕ್ಯವನ್ನು ತಲುಪಿದವರೂ ಈ ಆಜ್ಞೆಯಿಂದ ವಿನಾಯಿತಿ ಪಡೆಯುವರು. ಇಂತಹ ವ್ಯಕ್ತಿಗಳು ಸಾಂಪತ್ತಿಕ ಶಕ್ತಿಯನ್ನು ಹೊಂದಿದ್ದರೆ ತಾವು ಅನುಷ್ಠಿಸಲು ಅಸಮರ್ಥರಾದ ಉಪವಾಸಗಳಿಗೆ ಪ್ರಾಯಶ್ಚಿತ್ತವಾಗಿ ಒಂದು ದಿನದ ಉಪವಾಸಕ್ಕೆ ಒಂದು ದಿನದ ಆಹಾರದಂತೆ ನಿರ್ಗತಿಕರಿಗೆ ದಾನಮಾಡಬೇಕು.

ಉಪವಾಸ ಮಾಡುವವನು ತನ್ನ ಶರೀರಕ್ಕೆ ಅನಾವಶ್ಯ ಆಯಾಸವನ್ನು ಕೊಡದಂತೆ ಪ್ರಾತಃಕಾಲಕ್ಕೆ ಮೊದಲು ಏನಾದರೂ ಆಹಾರ ತಿನ್ನುವುದು ಅಗತ್ಯವಾಗಿದೆ. ಉಪವಾಸವನ್ನು ತಾನು ಅನುಷ್ಠಿಸುವೆನೆಂಬ ಮನೋನಿರ್ಧಾರವನ್ನು ಉಪವಾಸಮಾಡುವ ಮೊದಲು ಮಾಡುವುದು ಸಹ ಅಗತ್ಯವಾಗಿದೆ. ಪೂರ್ವ ನಿರ್ಧಾರವಿಲ್ಲದ ಯಾವುದೇ ಕ್ರಿಯೆ ಇಸ್ಲಾಮಿನಲ್ಲಿ ಧರ್ಮಾನುಸೃತವಾದ ಪ್ರವೃತ್ತಿಯೆಂದು ಪರಿಗಣಿಸಲ್ಪಡಲಾರದು. ಈ ಪುಣ್ಯಕರವಾದ ಧಾರ್ಮಿಕ ಕಾರ್ಯಕ್ಕಾಗಿ ಮೊದಲೇ ನಿರ್ಧರಿಸಿ, ನಸುಕಿನಿಂದ ಸೂರ್ಯಾಸ್ತಮಾನ ಕಾಲದವರೆಗೆ ಎಲ್ಲಾ ರೀತಿಯ ಆಹಾರ ಪಾನೀಯಂಗಳನ್ನೂ ದಾಂಪತ್ಯ ಸಂಬಂಧವಾದ ಕ್ರಿಯೆಗಳನ್ನೂ ಪೂರ್ಣವಾಗಿ ತ್ಯಜಿಸಬೇಕಾಗಿದೆ. ಇದೇ ಪ್ರಕಾರ ಉಪವಾಸ ಮಾಡುವವನು ಅಹಿತ ಕಾರ್ಯಗಳಿಂದಲೂ ಅನ್ಯಾಯಕರವಾದ ವರ್ತನೆಗಳಿಂದಲೂ ದೂರಸರಿದು ನಿಲ್ಲುವುದು ಉಪವಾಸದ ಪವಿತ್ರತೆಯನ್ನು ಕಾಪಾಡಲಿಕ್ಕಾಗಿ ಅತ್ಯಾವಶ್ಯವಾಗಿದೆ.

ಹೀಗೆ ಉಪವಾಸದ ನಿಬಂಧನೆಗಳನ್ನೆಲ್ಲಾ ಸ್ವಮನೋನಿರ್ಧಾರದಿಂದ ಅನುಸರಿಸುವವನು ಒಂದು ತಿಂಗಳ ಪರಿಶೀಲನೆಯ ಫಲವಾಗಿ ತನ್ನ ಇಚ್ಛೆಗಳನ್ನೆಲ್ಲಾ ನಿಯಂತ್ರಿಸಲು ಸಮರ್ಥನಾಗುವನು. ಇಚ್ಛಾನಿರೋಧನೆಯ ಶಕ್ತಿಯನ್ನು ಗಳಿಸಲು ಸಮರ್ಥನಾದವನು ಮಾತ್ರ ಆತ್ಮಾಭಿವೃದ್ಧಿಯನ್ನು ಸಂಪಾದಿಸಲು ಅರ್ಹನಾಗುವನು. ಆತ್ಮೋನ್ನತಿಯನ್ನು ಗಳಿಸಿದ ಸಿದ್ಧ ಪುರುಷರೂ ಪ್ರವಾದಿಗಳೂ ಅವರ ಆತ್ಮಸಿದ್ಧಿಗೆ ಮೊದಲು ಉಪವಾಸ ವ್ರತ ಆಚರಿಸಿರುವರು. ಈ ಅನುಷ್ಠಾನದ ಪ್ರಾಧಾನ್ಯತೆಯ ಕಾರಣದಿಂದಲೇ ಎಲ್ಲಾ ಮತಗಳಲ್ಲಿಯೂ ಉಪವಾಸವನ್ನು ಒಂದು ಅನಿವಾರ್ಯ ಮತಕರ್ಮವನ್ನಾಗಿ ಸ್ವೀಕರಿಸಲಾಗಿದೆ.

ಇಚ್ಛಾಧೀನನಾಗಿ ಭೋಗಾಸಕ್ತಿಯಲ್ಲಿ ಮಗ್ನನಾಗುವ ಮನುಷ್ಯನಿಗೆ ಅದರಿಂದ ಹಿಂದೆ ಸರಿಯುವುದು ಅಷ್ಟು ಸುಲಭವಲ್ಲ. ಆದರೆ ವ್ರತದ ಜೀವನಾಡಿ ದೇವರ ಆಜ್ಞೆಗಳಿಗೆ ತಲೆಬಾಗಿ ಅವನ್ನು ಆಚರಿಸುವುದಾ

ಗಿದೆ. ತನಗೆ ಎಲ್ಲಾ ಸಮಯಂಗಳಲ್ಲಿ ಇಷ್ಟಾನುಸಾರವಾಗಿ ಅನುಭವಿಸಲು ಸಮ್ಮತಿ ದೊರೆತಿರುವ ವಸ್ತುಗಳನ್ನೆಲ್ಲಾ "ದೇವರಾಜ್ಞೆಯನ್ನು ಪಾಲಿಸಬೇಕು" ಎಂಬ ಒಂದೇ ಉದ್ದೇಶದಿಂದ ಒಬ್ಬನು ಪ್ರತಿದಿನ ನಿರ್ದಿಷ್ಟ ಸಮಯಾವಧಿಯಲ್ಲಿ ಒಂದು ತಿಂಗಳಷ್ಟು ಕಾಲ ವರ್ಜಿಸಿ ತನಗೆ ಎಷ್ಟು ಆಶೆಯೂ ಉತ್ಸಾಹವೂ ತೋರಿದರೂ ಸರ್ವವನ್ನೂ ಕಾಣುವ ದೇವರ ಮುಂಭಾಗದಲ್ಲಿ ಸಂಕೋಚಗೊಂಡವನಾಗಿ ಅವುಗಳನ್ನು ಅನುಭವಿಸದೆ ತನ್ನ ಇಚ್ಛೆಗಳನ್ನೆಲ್ಲಾ ಸ್ವಾಧೀನಪಡಿಸಿ ನಿಲ್ಲಿಸುವಾಗ ಆತನ ಆತ್ಮಕ್ಕೆ ಒಂದು ಪವಿತ್ರತೆಯು ಅನುಭವಕ್ಕೆ ಬರುವುದು. ಈ ಪವಿತ್ರತೆ ಆತನ ಅಂತಃಕರಣದಿಂದ ಕರ್ಮೇಂದ್ರಿಯಂಗಳ ದಾರಿಯಾಗಿ ಪ್ರಕಾಶಿಸುವುದು. ಇದರ ಫಲವಾಗಿ ಇಚ್ಛಾ ನಿರೋಧವೂ ಅದರ ಮೇಲಿರುವ ಸ್ವಾಧೀನ ಶಕ್ತಿಯೂ ಆತನಲ್ಲಿ ಒಂದು ಸ್ಥಿರಗುಣವಾಗಿ ಉಳಿಯುವುದು. ಇದರ ಪರಿಣಾಮವಾಗಿ ಬೇರೆ ಸಮಯಗಳಲ್ಲೂ ದೇವರಿಗೆ ವಿರೋಧವಾದುದನ್ನೇನೂ ಮಾಡದೆಯೂ ದೇವರ ಇಷ್ಟಕ್ಕೆ ವಿರೋಧವಾಗಿರುವುದನ್ನೇನೂ ಇಚ್ಛಿಸದೆಯೂ ಇರುವಂತಹ ಆತ್ಮಶಕ್ತಿಯನ್ನು ಆತನು ಗಳಿಸಲು ಸಮರ್ಥನಾಗುವನು. ಈ ಪ್ರಕಾರ ಉಪವಾಸವು ವಿಶ್ವಾಸಿಗಳನ್ನು ಪಾಪಕೃತ್ಯದಿಂದ ತಡೆಯುತ್ತದೆ.

ಉಪವಾಸದ ಕಾಲದಲ್ಲಿ ಲೌಕಿಕ ಕಾರ್ಯಗಳಲ್ಲಿ ಹೆಚ್ಚಿನ ಮಗ್ನತೆಯನ್ನು ತೋರಿಸದೆ ದೇವರ ಧ್ಯಾನದಲ್ಲಿಯೂ ಸದಾಚಾರ ನಿಷ್ಠೆಯಲ್ಲಿಯೂ ತನ್ನ ಹಗಲು ಸಮಯವನ್ನೆಲ್ಲಾ ಕಳೆದು ರಾತ್ರಿಯ ಒಂದು ಭಾಗವನ್ನೂ ವಿಶಿಷ್ಟ ಪ್ರಾರ್ಥನೆಗಳಿಗಾಗಿ ವಿನಿಯೋಗ ಮಾಡುವುದರಿಂದ ಆತ್ಮಶುದ್ಧಿಯನ್ನು ಪ್ರಾಪಿಸುವ ವ್ರತಾನುಷ್ಠಾನಿ ಖಂಡಿತವಾಗಿಯೂ ದೇವರ ಸಾಮಿಪ್ಯವನ್ನು ಗಳಿಸುವನು. ಈ ಭಕ್ತದಾಸನ ಪ್ರವೃತ್ತಿಗಳಿಂದ ಸಂತುಷ್ಟನಾದ ದೇವರು ಆತನ ಸಮೀಪಕ್ಕೆ ಬರುವನು. ಇಂತಹ ಒಂದು ಆತ್ಮೋನ್ನತಿಗೆ ವ್ರತ ಮಾಡುವವನು ಮುನ್ನೇರುವನು.

ಇಂತಹ ಮಹೋನ್ನತ ಸಿದ್ಧಿಯನ್ನು ಗಳಿಸಿಕೊಡುವ ಉಪವಾಸದ ಪವಿತ್ರತೆಯನ್ನು ಕಾಪಾಡಲಿಕ್ಕಾಗಿ ಇಸ್ಲಾಮಿನ ಸ್ಥಾಪಕರು ಈ ರೀತಿ ಹೇಳಿರುವರು:—

"ಸುಳ್ಳನ್ನೂ, ಅದರ ಜೊತೆಗಿರುವ ಪ್ರವೃತ್ತಿಗಳನ್ನೂ ತ್ಯಜಿಸದವನು ಭಕ್ಷ್ಯಪೇಯಂಗಳನ್ನು ಉಪೇಕ್ಷಿಸುವುದು ದೇವರಿಗೆ ಬೇಕಾಗಿಲ್ಲ."

"ವ್ರತಾನುಷ್ಠಾನಿ ಅನಾವಶ್ಯ ಪ್ರವರ್ತಿಸುವುದಾಗಲೀ ಅನ್ಯಾಯವಾಗಿ ನಡೆಯುವುದಾಗಲೀ ಕೂಡದು. ಯಾರಾದರೂ ನಿಮ್ಮನ್ನು ಬೈದರೆ ಅಥವಾ ಆಕ್ರಮಿಸಲು ಯತ್ನಿಸಿದರೆ 'ನಾನು ಉಪವಾಸ ಮಾಡುತ್ತಿದ್ದೇನೆ' ಎಂದು ಹೇಳಿ ದೂರಸರಿಯಿರಿ."

ಹೀಗೆ ಸ್ವೇಚ್ಛೆಗಳಿಗೆ ವಿಧೇಯನಾಗದೆ ಆತ್ಮನಿಯಂತ್ರಣವನ್ನು ಪಾಲಿಸಿ ದೇವರ ಭಕ್ತಿಯಲ್ಲಿ ವಿಹರಿಸುವ ಯಥಾರ್ಥ ವ್ರತಸ್ಥನು ಲೌಕಿಕವಾದ ಪೈಶಾಚಿಕ ಬಾಧೆಗಳಿಂದ ಮುಕ್ತನಾಗಿ ದೈವಿಕವಾದ ಪಾವನತೆಯನ್ನೂ ಆತ್ಮಾನಂದವನ್ನೂ ಅನುಭವಿಸುವಂತಾಗುವನು.

—o—o—


ಈಗಾಗಲೇ ಮುದ್ರಣದಿಂದ ಹೊರಬಂದಿದೆ

# ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

ಗ್ರಂಥಕರ್ತ: **ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್**

ಅನುವಾದಕ: **M. P. ಇಬ್ರಾಹಿಂ**

ಪುಟ: **60** ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: The Editor, YUGARASHMI Kannada Qurterly,
23/1008, Ansari Road, Bunder, Mangalore-575001.

# ಹೆಚ್ಚು ಹೆಚ್ಚಾಗಿ ಮರಗಳನ್ನು ಬೆಳೆಸಿರಿ

—ಹಜ್ರತ್ ಮಿರ್ಜಾ ನಾಸಿರ್ ಅಹ್ಮದ್, ಖಲೀಫತುಲ್ ಮಸೀಹ್ III

(3-6-76ರ "ಬದರ್" ಉರ್ದು ವಾರ ಪತ್ರಿಕೆಯಿಂದ ಆಯ್ದ ಕೆಲವು ಭಾಗಗಳು—ಸಂ.)

ಜನರ ಏಳಿಗೆಗಾಗಿ ಸರಕಾರ ಮಾಡುವ ಆದರೆ ಜನತೆಯ ಸಹಕಾರ ಆವಶ್ಯವಿರುವ ಕಾರ್ಯಗಳಲ್ಲಿ ಮರಗಳನ್ನು ನೆಡುವುದು ಸಹ ಸೇರಿದೆ. ಇಂತಹ ಕೆಲಸಗಳಲ್ಲಿ ನಮ್ಮ ಸಂಘಟನೆಗೆ ಸೇರಿದವರು ಇತರರಿಗಿಂತ ಹೆಚ್ಚಿನ ಉತ್ಸಾಹದಿಂದ ಭಾಗವಹಿಸಬೇಕಾಗಿದೆ. ಮರಗಳಿಂದ ಹಲವಾರು ಪ್ರಯೋಜನಗಳಿವೆ. ನಾವು ನಮ್ಮ ಮನೆ ಹಿತ್ತಿಲಲ್ಲಿ ಬೆಳೆಸುವ ಮರಗಳಿಂದ ನಮಗೆ ಬಹಳ ಪ್ರಯೋಜನವಿದೆ. ನಮಗೆ ಅತ್ಯಾವಶ್ಯಕವಾಗಿರುವ ಆಮ್ಲಜನಕವನ್ನು ಮರದೆಲೆಗಳು ಶುದ್ಧೀಕರಿಸುತ್ತವೆ. ಮರಗಳ ಕಾರಣದಿಂದಲೇ ಆಮ್ಲಜನಕದ ಪ್ರಮಾಣ ವಾತಾವರಣದಲ್ಲಿ ಹೆಚ್ಚುತ್ತದೆ. ಮರಗಳ ಕಾರಣದಿಂದಲೇ ಭೂಮಿಯ ಕೃಷಿಯುತ್ಪನ್ನವು ವರ್ಧಿಸುತ್ತದೆ. ಮರಗಳು ಹೆಚ್ಚಿರುವಲ್ಲಿ ಹವೆಯು ಪ್ರಭಾವಿತವಾಗುತ್ತದೆ ಮತ್ತು ಹೆಚ್ಚು ಮಳೆ ಸುರಿಯುತ್ತದೆ.

ಕೃಷಿಕರು ತಮ್ಮ ಆವಶ್ಯಕ್ಕಾಗಿ ನೆಡುವ ಮರದಿಂದ ಆರ್ಥಿಕವಾಗಿ ಬಹಳ ಪ್ರಯೋಜನವಿದೆ. ಆದರೆ ಕೃಷಿ ಮಾಡುವ ಗದ್ದೆಗಳ ಮಧ್ಯದಲ್ಲಿ ತಾವಾಗಿ ಬೆಳೆದ ಮರಗಳನ್ನು ಕಡಿಯದೆ ಬಿಡಬಾರದು. ಇಂತಹ ಮರಗಳಿಂದ ಕೃಷಿಗೆ ಹಾನಿಯಿದೆ. ಕೃಷಿಗೆ ತಡೆಯಾಗಿರುವ ಇಂತಹ ಹತ್ತು ಮರಗಳನ್ನು ಕಡಿದ ಕೃಷಿಕನು ಯೋಗ್ಯವಾದ ಸ್ಥಳಗಳಲ್ಲಿ ನೂರು ಮರಗಳ ಸಸಿಗಳನ್ನಾದರೂ ನೆಡಲೇಬೇಕು. ಮರಗಳನ್ನು ನೆಡುವುದರಿಂದ ನೆಡುವವನಿಗೆ ಮಾತ್ರವಲ್ಲದೆ ರಾಷ್ಟ್ರಕ್ಕೂ ಲಾಭವಿದೆ.

ಮನುಷ್ಯನಿಗೆ ಯಾವಾಗಲೂ ಮರಗಳ ಆವಶ್ಯಕತೆ ಇದೆ. ಕೆಲವು ವಾರಗಳ ಮೊದಲು ಒಂದು ಜಾಗತಿಕ ಸಂಸ್ಥೆಯಿಂದ, "ಲೋಕದಲ್ಲೆಲ್ಲಾ ಮರಗಳ ಕೊರತೆ ಉಂಟಾಗುತ್ತಿದೆ; ಮನುಷ್ಯರು ಇದರ ಕಡೆಗೆ ಗಮನ ಹರಿಸದಿದ್ದರೆ ಪ್ರಪಂಚದಲ್ಲೆಲ್ಲಾ ಮರಗಳ ಕೊರತೆಯುಂಟಾಗಿ ಅವರಿಗೆ ತೊಂದರೆಯುಂಟಾದೀತು" ಎಂಬರ್ಥದ ಪ್ರಕಟಣೆ ಹೊರಟಿದ್ದಿತು. ಆದರೆ ಅಹ್ಮದಿಯರು ಮರ ನೆಡುವುದು ಸಮಾರಂಭಗಳನ್ನು ಏರ್ಪಡಿಸಿ ಮರಗಳನ್ನು ನೆಟ್ಟು ಮಾದರಿಯಲ್ಲಾಗಬಾರದು. ನೆಟ್ಟ ಮರಗಳನ್ನು ರಕ್ಷಿಸುವುದು ಅತ್ಯಗತ್ಯವಾಗಿದೆ.

ಇಂದಿನ ಕಾಲದಲ್ಲಿ ಮರಗಳ ಕುರಿತು ಬಹಳ ಸಂಶೋಧನೆಗಳನ್ನು ಮಾಡಲಾಗಿದೆ. ಆದರೆ ಸ್ಪೈನಿನಲ್ಲಿ ಮುಸ್ಲಿಮರು ಆಳುತ್ತಿದ್ದಾಗ ತೋಟಗಾರಿಕೆಯಲ್ಲಿ ಸಾಧಿಸಿದ ಅಭಿವೃದ್ಧಿಯನ್ನು ಮೀರಲು ಇನ್ನೂ ಸಾಧ್ಯವಾಗಿಲ್ಲ. ಪ್ರಪಂಚವು ಅವರು ಸಾಧಿಸಿದ ಕಾರ್ಯಗಳನ್ನು ಮರೆತಿವೆಯಾದರೂ ಅವರು ಮಾಡಿದ ಕೆಲಸಗಳು ಆಶ್ಚರ್ಯಜನಕವಾಗಿವೆ. ಉದಾಹರಣೆಗಾಗಿ, ಸ್ಪೈನಿನ ಮುಸ್ಲಿಂ ತೋಟಗಾರರು ಬಾದಾಮ್ ಅಥವಾ ಬೇರೆ ಯಾವುದೋ ಒಂದು ಜಾತಿಯ ಮರಕ್ಕೆ ಗುಲಾಬಿಯ ಗಿಡದ ಕಸಿಕಟ್ಟಿ ಗುಲಾಬಿಯ ಮರಗಳನ್ನೇ ಬೆಳೆಸಿದ್ದರು. ನಮ್ಮಲ್ಲಿಯಾದರೋ ಗುಲಾಬಿಯ ಗಿಡಗಳೋ ಪೊದೆಗಳೋ ಮಾತ್ರ ಕಾಣಸಿಗುತ್ತವೆ. ಇದೇರೀತಿಯಲ್ಲಿ ಅವರು ಕಸಿಕಟ್ಟಿ ಬೇಗ ಫಲಕೊಡುವ ಅನೇಕ ವೃಕ್ಷಗಳನ್ನೂ ಬೆಳೆಸಿದ್ದರು. ನಮ್ಮ ಹಿಂದುಸ್ಥಾನದಲ್ಲಿ ಮೊಗಲ್ ಬಾದಶಹರು ಸಹ ರುಚಿಕರವಾದ ಫಲಗಳ ಮಾವಿನ ತೋಪುಗಳನ್ನು ಬೆಳೆಸಿದ್ದರು. ಫಲಕೊಡುವ ದೊಡ್ಡ ಮಾವಿನ ಮರಗಳನ್ನು ಅವರು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸಿ ಬೆಳೆಸುವುದಕ್ಕೆ ಸಹ ಸಮರ್ಥರಾಗಿದ್ದರು. ಇವೆಲ್ಲಾ ಮರೆತುಹೋದ ಸಂಗತಿಗಳಾಗಿವೆ. ಮೆಲ್ಲ ಮೆಲ್ಲಗೆ ಇವುಗಳೆಲ್ಲಾ ಲೋಕದ ನೆನಪಿಗೆ ಬರುವುವು. ನಾವು ಸಹ ಫಲವೃಕ್ಷಗಳನ್ನೂ ನೆರಳು-ಮರಗಳನ್ನೂ ಇನ್ನಿತರ ಎಲ್ಲಾ ವಿಧದ ವೃಕ್ಷಗಳನ್ನೂ ನೆಡಲು ಶ್ರಮಿಸಬೇಕಾಗಿದೆ.

ಕೊನೆಯದಾಗಿ, ಮರಗಳನ್ನು ನೆಡುವುದರಲ್ಲಿಯೂ ಅವುಗಳ ರಕ್ಷಣೆಗಾಗಿಯೂ ಅತ್ಯಂತ ಗಮನ ಹರಿಸಬೇಕೆಂದು ಅಪೇಕ್ಷಿಸುತ್ತೇನೆ.

—೦—೦—೦—

# ಆಧುನಿಕ ವೈಜ್ಞಾನಿಕ ಪ್ರಗತಿ ಮತ್ತು ಇಸ್ಲಾಂ

**ಡಾಕ್ಟರ್ ಹಾಫಿಝ್ ಸಾಲಿಹ್ ಮುಹಮ್ಮದ್ ಅಲಾದೀನ್ Ph. D.**

(ಹೈದರಾಬಾದಿನ ಉಸ್ಮಾನಿಯಾ ಯುನಿವರ್ಸಿಟಿಯ ಎಸ್ಟ್ರೋನಮಿ ವಿಭಾಗದ ಮುಖ್ಯಸ್ಥನೂ ಭಾರತದ ಪ್ರಮುಖ ಜ್ಯೋತಿಶ್ಶಾಸ್ತ್ರಜ್ಞರಲ್ಲಿ ಓರ್ವನೂ ಆದ ಡಾ। ಸಾಲಿಹ್ ಮುಹಮ್ಮದ್‌ರವರು ಜಾಗತಿಕ ಜ್ಯೋತಿಶ್ಶಾಸ್ತ್ರ ಸಮ್ಮೇಳನದಲ್ಲಿ ಭಾರತೀಯ ಪ್ರತಿನಿಧಿ ಸಂಘದ ನಾಯಕರಾಗಿದ್ದರು. ಇವರು ಖುರ್‌ಆನನ್ನು ಕಂಠಪಾಠ ಮಾಡಿದವರಾಗಿದ್ದಾರೆ. —ಸಂ)

"ಆಕಾಶ ಭೂಮಿಗಳ ಸೃಷ್ಟಿಯಲ್ಲಿಯೂ, ರಾತ್ರಿ ಹಗಲುಗಳ ವ್ಯತ್ಯಾಸದಲ್ಲಿಯೂ ಬುದ್ಧಿವಂತರಿಗೆ ಖಂಡಿತ ವಾಗಿಯೂ ಸ್ಪಷ್ಟ ಸೂಚನೆಗಳಿವೆ. ಅವರು ನಿಂತಿರು ವಾಗಲೂ ಕುಳಿತಿರುವಾಗಲೂ ಮಲಗಿರುವಾಗಲೂ ದೇವರನ್ನು ಜ್ಞಾಪಿಸಿಕೊಳ್ಳುತ್ತಾ ಆಕಾಶ ಭೂಮಿಗಳ ಸೃಷ್ಟಿಯ ಕುರಿತು ಚಿಂತಿಸುತ್ತಾ ಪ್ರಾರ್ಥಿಸುವರು: ನಮ್ಮ ದೇವರೇ, ನೀನು ಇವುಗಳನ್ನು ವ್ಯರ್ಥವಾಗಿ ಸೃಷ್ಟಿಸಿಲ್ಲ. ನೀನು ಪರಮ ಪೂಜ್ಯನು. ನಮ್ಮನ್ನು ನರಕಾಗ್ನಿಯಿಂದ ರಕ್ಷಿಸು.''

(ಪವಿತ್ರ ಖುರ್‌ಆನ್ 3 : 191, 192)

## ವೈಜ್ಞಾನಿಕ ಪಠನದ ಕುರಿತು ಪವಿತ್ರ ಖುರ್‌ಆನಿನ ನಿರ್ದೇಶ

ಮಾನವರು ದೇವರ ಪ್ರೇಮದಲ್ಲಿ ಲಯ ಹೊಂದ ಬೇಕೆಂದು ಇಸ್ಲಾಮ್ ಉಪದೇಶಿಸಿರುವ ಜೊತೆಯಲ್ಲಿಯೇ ಅವರನ್ನು ದೇವರ ಸೃಷ್ಟಿಯ ಕುರಿತು ಚಿಂತಿಸುವುದನ್ನೂ ಪ್ರೇರೇಪಿಸಿದೆ. ಈ ವಿಷಯದ ಕುರಿತು ಅಹ್ಮದಿಯಾ ಸಂಘಟನೆಯ ಸ್ಥಾಪಕರು ಈ ರೀತಿ ಹೇಳಿರುವರು:

"ಪವಿತ್ರ ಖುರ್-ಆನ್ ಮುಸ್ಲಿಮರನ್ನು ಚಿಂತಾ ಶೀಲರಾಗಲು ಪ್ರೋತ್ಸಾಹಿಸುತ್ತಾ ಅವರು ಆಕಾಶ ಭೂಮಿಗಳಲ್ಲಿರುವ ಅದ್ಭುತ ಸೃಷ್ಟಿ ವೈಚಿತ್ರ್ಯಗಳನ್ನು ಅಧ್ಯಯನ ಮಾಡಲು ಪ್ರೇರೇಪಿಸುತ್ತಿದೆ. ಅಲ್ಲಾಹು ವಿಶ್ವಾಸಿಗಳ ಗುಣಗಳನ್ನು ಹೀಗೆ ವರ್ಣಿಸಿರುವನು: ಅವರು ನಿಂತಿರುವಾಗಲೂ, ಕುಳಿತಿರುವಾಗಲೂ, ಮಲಗಿರುವಾ ಗಲೂ ದೇವರನ್ನು ಜ್ಞಾಪಿಸುತ್ತಾ ಆಕಾಶ ಭೂಮಿಗಳ ಅದ್ಭುತ ಸೃಷ್ಟಿ ವೈಚಿತ್ರ್ಯಗಳ ಕುರಿತು ಚಿಂತಿಸುವರು. ಅವರಿಗೆ ದೇವರು ಸೃಷ್ಟಿಸಿದ ವಸ್ತುಗಳ ರಹಸ್ಯಗಳು ತಿಳಿ ದಾಗ ಅವರು 'ನಮ್ಮ ದೇವರೇ, ನೀನು ಇವುಗಳನ್ನು ವ್ಯರ್ಥವಾಗಿ ಸೃಷ್ಟಿಸಿಲ್ಲ' ಎಂದೆನ್ನುವರು.

ಎಂದರೆ ಯಥಾರ್ಥ ವಿಶ್ವಾಸಿಗಳು ಇತರ ಜನ ರಂತೆ ಕೇವಲ ಸೃಷ್ಟಿಯ ವಸ್ತುಗಳ ನಿರ್ಮಾಣ ಮತ್ತು ಅವುಗಳ ಗುಣಗಳ ಪರಿಚಯಗೊಳ್ಳುವಿಕೆಗೆ ಜ್ಞಾನ ವನ್ನು ಸೀಮಿತಗೊಳಿಸದೆ ಈ ಎಲ್ಲಾ ವಸ್ತುಗಳ ಸೃಷ್ಟಿ ಕರ್ತನ ಕಡೆಗೆ ತಮ್ಮ ಗಮನ ಹರಿಯಿಸುವರು. ಉದಾ ಹರಣೆಗೆ ಹೇಳುವುದಾದರೆ ಯಥಾರ್ಥ ವಿಶ್ವಾಸಿಗಳು ಭೂಮಿಯ ಗಾತ್ರ ಈ ರೀತಿ ಇದೆ; ಅದರ ವ್ಯಾಸ ಇಷ್ಟಿದೆ; ಅದರ ಗುರುತ್ವಾಕರ್ಷಣ ಈ ರೀತಿಯಾಗಿದೆ; ಸೂರ್ಯ, ಚಂದ್ರ ಮತ್ತು ನಕ್ಷತ್ರಗಳಿಗೆ ಅದರೊಂ ದಿಗೆ ಈ ರೀತಿಯ ಸಂಬಂಧವಿದೆ ಎಂಬುದನ್ನು ತಿಳಿ ಯುವುದರಲ್ಲಿಯೇ ತಮ್ಮ ಅನ್ವೇಷಣೆಯನ್ನು ಪರಿ ಮಿತಗೊಳಿಸಲಾರರು. ಅವರು ಸೃಷ್ಟಿಯ ನಿರ್ಮಾಣದ ಪರಿಪೂರ್ಣತೆಯ ಪರಿಚಯಗೊಂಡ ನಂತರ ಅದರ ನಿರ್ಮಾತೃವಿನ ಕಡೆಗೆ ಗಮನ ಹರಿಯಿಸಿ ತಮ್ಮ ವಿಶ್ವಾಸ ವನ್ನು ಭದ್ರಗೊಳಿಸುವರು. ಪವಿತ್ರ ಖುರ್-ಆನಿನಲ್ಲಿ ದೇವರು ನುಡಿದ ಇನ್ನೊಂದು ವಚನದ ಆಶಯ ಈ ರೀತಿಯಾಗಿದೆ: 'ದೇವರು ತಾನಿಚ್ಛಿಸುವವರಿಗೆ ಜ್ಞಾನ ವನ್ನು ಕೊಡುತ್ತಾನೆ. ಯಾರಿಗೆ ಜ್ಞಾನವು ನೀಡಲ್ಪಟ್ಟಿ ದೆಯೋ ಅವರಿಗೆ ಅತ್ಯಧಿಕ ಶುಭವು ನೀಡಲ್ಪಟ್ಟಿದೆ.' ಈ ವಚನಗಳಲ್ಲಿ ದೇವರು ವಿದ್ಯೆ ಮತ್ತು ಜ್ಞಾನವನ್ನು ಗಳಿಸುವ ಅವಶ್ಯಕತೆಯನ್ನು ಒತ್ತಿ ಹೇಳಿರುವನು. ಮುಹ ಮ್ಮದ್ ಪೈಗಂಬರರು ಈ ರೀತಿ ಹೇಳಿರುವರು: 'ವಿದ್ಯೆ ಯನ್ನು ಗಳಿಸುವುದು ಪ್ರತಿಯೊಬ್ಬ ಮುಸ್ಲಿಮ್ ಪುರುಷ ನಿಗೂ ಸ್ತ್ರೀಗೂ ನಿರ್ಬಂಧವಾಗಿದೆ.' (ಅಹ್ಮದಿಯಾ ಸಂಘಟನೆಯ ಸ್ಥಾಪಕರ ಗ್ರಂಥವಾದ 'ಸುರ್ಮಾ ಚಷ್ಮ ಆರ್ಯಾ' ಪುಟ 143-144).

ಅಹ್ಮದಿಯಾ ಜಮಾಅತಿನ ಈಗಿನ ಇಮಾಮರು 1970ನೇ ಇಸ್ವಿಯಲ್ಲಿ ಕುಮಾಸಿಯ "ಯೂನಿವರ್ಸಿಟಿ

ಆಫ್ ಸಯನ್ಸ್ ಏಂಡ್ ಟೆಕ್ನಾಲಜಿ''ಯಲ್ಲಿ ವಿದ್ವಾಂಸರ ಸಭೆಯೊಂದನ್ನು ಸಂಬೋಧಿಸಿ ಮಾಡಿದ ಭಾಷಣದಲ್ಲಿ ವಿಜ್ಞಾನಿಯು ಕೇವಲ ವಸ್ತುಗಳ ಗುಣ ವಿಶೇಷಗಳನ್ನು ತಿಳಿಯುವುದಕ್ಕೆ ಮಾತ್ರ ತನ್ನ ಯತ್ನಗಳನ್ನು ಪರಿಮಿತಗೊಳಿಸದೆ ಅವನು ಸರ್ವಜ್ಞಾನಗಳ ಉದ್ಭವ ಕೇಂದ್ರವಾದ ದೇವರೊಡನೆ ಸಂಬಂಧ ಸ್ಥಾಪಿಸುವುದು ಸಹ ಅತ್ಯಗತ್ಯವೆಂದೂ ತನ್ನ ಸಂಶೋಧನೆಗಳ ಜೊತೆಯಲ್ಲಿ ಪ್ರಾರ್ಥನೆ ಮಾಡುವುದು ಸಹ ಅತ್ಯಾವಶ್ಯಕವೆಂದೂ ಹೇಳಿರುವರು. ಭೌತಿಕ ಜ್ಞಾನವು ಮನುಷ್ಯನಿಗೆ ಶಕ್ತಿ ಮತ್ತು ಅಧಿಕಾರವನ್ನು ನೀಡುತ್ತಿರುವಾಗ ಪ್ರಾರ್ಥನೆಯು ಆತನ ಶಕ್ತಿ ಸಾಮರ್ಥ್ಯಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುವ ಯೋಗ್ಯತೆಯನ್ನು ದಯಪಾಲಿಸುತ್ತದೆ.

ಸ್ಥಿತಿಯಲ್ಲಿರುವ ವಸ್ತುಗಳ ಸಂಶೋಧನೆ ನಡೆಸಿ ಆ ವಸ್ತುಗಳೊಂದಿಗೆ ಸಮೀಪಬಂಧ ಸ್ಥಾಪಿಸುವುದರೊಂದಿಗೆ ಆ ವಸ್ತುಗಳ ಸೃಷ್ಟಿಕರ್ತನೊಂದಿಗೆ ಸಹ ಸಂಬಂಧ ಸ್ಥಾಪಿಸುವುದರಿಂದಲೇ ಯಥಾರ್ಥ ಜ್ಞಾನವು ಕರಗತವಾಗುವುದು. ನಾವು ಜ್ಞಾನದ ಈ ಉದ್ಭವ ಕೇಂದ್ರವನ್ನು ತಲುಪಿದರೆ ನಮಗೆ ಅತ್ಯಂತ ಸಾಮೀಪ್ಯದ ಶಾಶ್ವತವಾದ ಸಂಬಂಧವು ಅನುಗ್ರಹಿಸಲ್ಪಡುತ್ತದೆ. ಆಗ ಉಂಟಾಗುವ ದ್ವಿಮುಖ ಸಂಬಂಧದಿಂದ ಮಾತ್ರ ನಾವು ವಿಜ್ಞಾನಿಗಳೆಂದೂ ವಿದ್ವಾಂಸರೆಂದೂ ಕರೆಯಲು ಯೋಗ್ಯರಾಗುವೆವು.'' ( ಉರ್ದು ವಾರಪತ್ರಿಕೆ "ಬದರ್" 14–5–70ರ ಸಂಚಿಕೆ. )

ದೇವರ ಮಾತು ಮತ್ತು ಕೃತಿಯಲ್ಲಿ ಯಾವುದೇ ವಿರೋಧವು ಇಲ್ಲವೆಂದು ಇಸ್ಲಾಮ್ ನಮಗೆ ಕಲಿಸುತ್ತದೆ. ದೇವರ ಮಾತುಗಳನ್ನು ಸರಿಯಾಗಿ ಮನದಟ್ಟಾಗಿ ಮಾಡಲು ಅವನ ಕ್ರಿಯೆಗಳನ್ನು ಅಧ್ಯಯನ ಮಾಡಬೇಕೆಂದೂ, ಅವನ ಕೃತ್ಯಗಳ ಉದ್ದೇಶಗಳನ್ನು ತಿಳಿಯಲು ಅವನ ವಚನಗಳನ್ನು ಅಧ್ಯಯನ ಮಾಡಬೇಕೆಂದೂ ಇಸ್ಲಾಮ್ ಬೋಧಿಸುತ್ತದೆ. ಈ ರೀತಿ ಇಸ್ಲಾಮ್, ಮತ ಮತ್ತು ವಿಜ್ಞಾನಗಳ ಮಧ್ಯವಿರುವ ವಿರೋಧವನ್ನು ದೂರೀಕರಿಸುತ್ತದೆ.

ನಾವಿರುವುದು ವಿಜ್ಞಾನ ಮತ್ತು ಯಾಂತ್ರಿಕ ಶಾಸ್ತ್ರದ ಅಸಾಧಾರಣ ಬೆಳವಣಿಗೆಯ ಕಾಲದಲ್ಲಿಯಾಗಿದೆ. ಪ್ರಪಂಚದ ಸೃಷ್ಟಿಗಳ ಕುರಿತು ಹಿಂದೆ ತಿಳಿಯದ ಎಷ್ಟೋ ರಹಸ್ಯಗಳು ಇಂದು ತಿಳಿದುಬರುತ್ತಿವೆ. ಒಂದು ನೂರು ವರ್ಷಗಳ ಮೊದಲಿನ ಪ್ರಪಂಚದ ಸ್ಥಿತಿಯನ್ನೂ ಇಂದಿನ ಪ್ರಪಂಚದ ಸ್ಥಿತಿಯನ್ನೂ ನಾವು ತಾರತಮ್ಯಗೊಳಿಸಿ ನೋಡಿದರೆ ಪ್ರಪಂಚವೇ ಪೂರ್ಣವಾಗಿ ಬದಲಾಗಿದೆಯೆಂದು ಭಾಸವಾಗುತ್ತದೆ. ನಾವು ಪವಿತ್ರ ಖುರ್ ಆನಿನ ವಚನ ಮತ್ತು ಪೈಗಂಬರರ ನುಡಿಗಳ ಪ್ರಕಾಶದಲ್ಲಿ ಇಂದಿನ ಪ್ರಪಂಚದ ಸ್ಥಿತಿಗಳನ್ನು ನೋಡಿದರೆ ಹಲವಾರು ಭವಿಷ್ಯವಾಣಿಗಳು ಈ ಕಾಲದಲ್ಲಿಯೇ ಪೂರ್ತಿಗೊಂಡುದು ಕಂಡುಬಂದು ನಮ್ಮ ವಿಶ್ವಾಸವು ವೃದ್ಧಿಗೊಳ್ಳುತ್ತದೆ. ಪ್ರಪಂಚದಲ್ಲಿರುವ ವಸ್ತುಗಳೆಲ್ಲಾ ದೇವರ ಸೃಷ್ಟಿಯಾಗಿರುವುದರಿಂದಲೂ ಸೃಷ್ಟಿಗಳ ರಹಸ್ಯಗಳು ವಿಜ್ಞಾನದ ಮೂಲಕ ಬಹಿರಂಗಗೊಳ್ಳುತ್ತಿರುವುದರಿಂದಲೂ ಪವಿತ್ರ ಖುರ್‌ಆನಿನ ವ್ಯಾಖ್ಯಾನದ ವಲಯವು ಸಹ ವಿಸ್ತಾರಗೊಳ್ಳುತ್ತಾ ಹೋಗುತ್ತದೆ. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹು ಈರೀತಿ ಹೇಳಿರುವನು: –

"ನಮ್ಮ ಬಳಿಯಲ್ಲಿ ಎಲ್ಲಾ ವಸ್ತುಗಳ ಅಪಾರವಾದ ನಿಕ್ಷೇಪವಿದೆ. ಆದರೆ ನಾವು ಅವುಗಳನ್ನು ನಿಶ್ಚಿತ ಮಿತಿಯಲ್ಲಿ ಮಾತ್ರ ಹೊರಗೆಡಹುವೆವು.'' (ಸೂರತುಲ್ ಹಜರ್:22.)

ಪವಿತ್ರ ಖುರ್-ಆನಿನ ಅವತೀರ್ಣದ ಸಂದರ್ಭದಲ್ಲಿ ಪ್ರಪಂಚವು ಕಠಿಣವಾದ ಮೌಢ್ಯದಿಂದ ತುಂಬಿದ್ದಿತು. ಆ ಸಮಯದಲ್ಲಿ ಹಿರಾ ಗುಹೆಯಲ್ಲಿ ಧ್ಯಾನ್ಯಮಗ್ನರಾಗಿದ್ದ ಇಸ್ಲಾಮಿನ ಸ್ಥಾಪಕರಿಗೆ ದೇವರು ಈರೀತಿ ಸಂದೇಶ ಕಳುಹಿಸಿದನು:

''ಸರ್ವವನ್ನು ಸೃಷ್ಟಿಸಿದ ದೇವರ ನಾಮದಿಂದ ಓದು. ಮನುಷ್ಯನನ್ನು ರಕ್ತದ ಮುದ್ದೆಯಿಂದ ಆತನು ಸೃಷ್ಟಿಸಿದನು. ನೀನು ಓದು. ಲೇಖನಿಯ ಸಹಾಯದಿಂದ ಕಲಿಸಿದ ದೇವರು ಮಹಾ ದಯಾಳುವಾಗಿರುವನು ಆತನು ಮನುಷ್ಯನಿಗೆ ತಿಳಿಯದುದನ್ನು ಕಲಿಸಿದನು ಮತ್ತು ಇನ್ನು ಮುಂದೆಯೂ ಕಲಿಸುವನು..''
(ಸೂರತುಲ್ ಅಲಕ್: 2–6)

ಇದು ಇಸ್ಲಾಮಿನ ಸ್ಥಾಪಕರಿಗೆ ದೇವರಿಂದ ಲಭಿಸಿದ ಪ್ರಥಮ ವಾಣಿಯಾಗಿತ್ತು. ಈ ರೀತಿಯಲ್ಲಿ ಪವಿತ್ರ ಖುರ್‌ಆನಿನ ಅವತೀರ್ಣದ ಜೊತೆಯಲ್ಲಿಯೇ, ಪರಮಾತ್ಮನು ವಿದ್ಯೆಯ ಅಭಿವೃದ್ಧಿಯ ಭವಿಷ್ಯವನ್ನು ನುಡಿದಿರುವನು. ಪವಿತ್ರ ಖುರ್‌ಆನ್ ಬರೆಯಲ್ಪಡುವು

ದೆಂಬ ಭವಿಷ್ಯವಾಣಿಯು ''ಓದು'' ಎಂದು ಉಪಯೋಗಿಸಿದ ಈ ಪದದಲ್ಲಿ ಅಡಗಿದೆ. ಬರೆಯದೆ ಓದಲು ಹೇಗೆ ತಾನೇ ಸಾಧ್ಯ? ಇದೊಂದೇ ದೈವಿಕ ಗ್ರಂಥ ಅದರ ಅವತೀರ್ಣದ ಪ್ರಾರಂಭದೆಸೆಯಲ್ಲಿಯೇ ಬರೆಯಲ್ಪಡಲು ತೊಡಗಿತೆಂದು ಇಸ್ಲಾಮಿನ ವಿರೋಧಿಗಳು ಸಹ ಸಮ್ಮತಿಸಿರುವರು.

ಪವಿತ್ರ ಖುರ್‌ಆನ್ ಅವತೀರ್ಣಗೊಳ್ಳುವಾಗ ಅರಬ ಸ್ಥಾನವು ಬರೇ ಮೌಢ್ಯದಿಂದ ತುಂಬಿದ್ದಿತು. ಪವಿತ್ರ ಖುರ್‌ಆನಿನ ಅನುಗ್ರಹದಿಂದ ಅರಬಿಗಳು ಪ್ರಾಪಂಚಿಕ ಮತ್ತು ಆಧ್ಯಾತ್ಮಿಕ ವಿದ್ಯೆಗಳನ್ನು ಕಲಿತರು. ಅವರಿಂದ ಸ್ಪೈನ್ ದೇಶದವರು ಕಲಿತರು. ಸ್ಪೈನ್‌ನವರಿಂದ ಯುರೋಪಿನ ಇನ್ನಿತರ ದೇಶಗಳವರು ಕಲಿತು ಅವುಗಳನ್ನು ಅಭಿವೃದ್ಧಿಗೊಳಿಸಿದರು.

## ವಿಜ್ಞಾನದ ಅಭಿವೃದ್ಧಿಯ ಕುರಿತು ಪವಿತ್ರ ಖುರ್-ಆನಿನ ಭವಿಷ್ಯವಾಣಿಗಳು

### 1. ಎರಡು ಪೂರ್ವಗಳು ಎರಡು ಪಶ್ಚಿಮಗಳು:

ಅಮೇರಿಕ ಈಗಿನ ಕಾಲದ ರಾಜ್ಯಗಳಲ್ಲಿ ಅತ್ಯಧಿಕ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿದೆ. ಅಲ್ಲಿನ ಮಾನವರು ಮೊತ್ತ ಮೊದಲು ಚಂದ್ರನಲ್ಲಿ ಕಾಲೂರಿದರು. ಪವಿತ್ರ ಖುರ್‌ಆನ್ ಅವತೀರ್ಣವಾದಾಗ ಅಮೇರಿಕವೆಂಬ ಒಂದು ರಾಜ್ಯವಿದೆಯೆಂದು ಯಾರಿಗೂ ಗೊತ್ತಿರಲಿಲ್ಲ. ಆ ಕಾಲದಲ್ಲಿ ಅರಬಸ್ಥಾನದವರಿಗೆ ಗೊತ್ತಿದ್ದ ರಾಜ್ಯಗಳಲ್ಲಿ ಚೀನವು ಅತ್ಯಧಿಕ ದೂರವಿರುವುದಾಗಿತ್ತು. ಅಲ್ಲಿಗೆ ತಲುಪಲು ಅತ್ಯಧಿಕ ಖರ್ಚು, ಅಪಾರವಾದ ಪರಿಶ್ರಮ ಮತ್ತು ಲೆಕ್ಕವಿಲ್ಲದಷ್ಟು ಅಪಾಯಗಳನ್ನು ಸಹಿಸಬೇಕಾಗಿದ್ದಿತು. ಇದೇ ಕಾರಣದಿಂದ ಇಸ್ಲಾಮಿನ ಸ್ಥಾಪಕರು ವಿದ್ಯೆಗಳಿಸುವ ಮಹತ್ವವನ್ನು ಸ್ಪಷ್ಟಗೊಳಿಸಲಿಕ್ಕಾಗಿ ಈರೀತಿ ಹೇಳಿದರು: "ಚೀನಕ್ಕೆ ಹೋಗಿಯಾದರೂ ವಿದ್ಯೆಯನ್ನು ಕಲಿಯಿರಿ.'' ಆಗಿನ ಕಾಲದಲ್ಲಿ ಚೀನವೇ ಬಹಳ ದೂರವಿರುವ ದೇಶವೆಂದು ಅರಬಸ್ಥಾನದಲ್ಲಿ ಪ್ರಸಿದ್ಧಿಯಿದ್ದಿತು. ಮುಂದೆ ವಿಜ್ಞಾನದ ಅಭಿವೃದ್ಧಿಗೆ ಕಾರಣವಾಗಲಿರುವ ಅಮೇರಿಕ ದೇಶವು ಅವರಿಗೆ ತಿಳಿದಿರಲಿಲ್ಲ. ಆದರೆ ಆ ಕಾಲದಲ್ಲಿ ಪವಿತ್ರ ಖುರ್‌ಆನಿನಲ್ಲಿ ದೇವರನ್ನು ಈರೀತಿ ವರ್ಣಿಸಲಾಗಿದೆ: ''ಎರಡು ಪೂರ್ವಗಳ ಮತ್ತು ಎರಡು ಪಶ್ಚಿಮಗಳ ಪಾಲಕ....'' (ಸೂರತ್ ಅರ್ರಹ್ಮಾನ್: 18)

ಎರಡು ಪಶ್ಚಿಮ ಮತ್ತು ಎರಡು ಪೂರ್ವಗಳ ಪಾಲಕನೆಂದು ದೇವರನ್ನು ವರ್ಣಿಸಿ ಪವಿತ್ರ ಖುರ್‌ಆನ್ ಒಂದು ಹೊಸ ಜಗತ್ತಿನ ಇರುವಿಕೆಯನ್ನು ಪ್ರಕಟಿಸಿತು. ನಾವು ಭೂಮಿಯನ್ನು ಚೆಂಡಾಕೃತಿಯಲ್ಲಿದೆಯೆಂದು ತಿಳಿದು ಅದರ ಒಂದು ಅರ್ಧ ಗೋಲವು ಪೂರ್ವವೆಂದೂ ಇನ್ನೊಂದು ಅರ್ಧ ಗೋಲವು ಪಶ್ಚಿಮವೆಂದೂ ಪರಿಗಣಿಸಿದರೆ ಮಾತ್ರ ಎರಡು ಪಶ್ಚಿಮ ಮತ್ತು ಎರಡು ಪೂರ್ವಗಳು ಇವೆ ಎಂಬುದು ಸ್ಪಷ್ಟವಾದೀತು. ನಮಗೆ ಜಪಾನು ಪೂರ್ವದಲ್ಲಿದೆ, ಯುರೋಪು ಪಶ್ಚಿಮದಲ್ಲಿದೆ. ಅಮೇರಿಕದವರಿಗೆ ಜಪಾನು ಪಶ್ಚಿಮದಲ್ಲಿಯೂ ಯುರೋಪು ಪೂರ್ವದಲ್ಲಿಯೂ ಇದೆ. ಈರೀತಿ ಎರಡು ಪೂರ್ವಗಳೂ ಎರಡು ಪಶ್ಚಿಮಗಳೂ ಉಂಟಾಗುವುವು. ಅಮೇರಿಕವು ಕಂಡುಹಿಡಿಯಲ್ಪಟ್ಟ ನಂತರ ಈ ಭವಿಷ್ಯವಾಣಿ ಪೂರ್ಣಗೊಂಡಿತು. ದೇವರ ಅನುಗ್ರಹದಿಂದ ಮುಸಲ್ಮಾನರೇ ಇನ್ನೊಂದು ಹೊಸ ಜಗತ್ತಿನ ಇರುವಿಕೆಯ ಸೂಚನೆಯಿತ್ತರು. ಅಮೇರಿಕ ಖಂಡವನ್ನು ಕಂಡುಹಿಡಿದ ಕೊಲಂಬಸನು ಒಬ್ಬ ಮುಸ್ಲಿಮನ ಶಿಷ್ಯನಾಗಿದ್ದನೆಂದೂ ಆ ಮುಸ್ಲಿಮ್ ವ್ಯಕ್ತಿ ಹಝ್ರತ್ ಮುಹಿಯುದ್ದೀನ್ ಇಬ್ನು ಅರಬಿ ಎಂಬ ಸಂತರ ಶಿಷ್ಯರಾಗಿದ್ದರೆಂದೂ ಆ ಸಂತರು ತಮ್ಮ ಕೆಲವು ದರ್ಶನಗಳ ಫಲವಾಗಿ ತಮ್ಮ ಗ್ರಂಥಗಳಲ್ಲಿ ಸ್ಪೈನ್ ದೇಶದ ಪಶ್ಚಿಮಕ್ಕೆ ಒಂದು ದೊಡ್ಡ ರಾಜ್ಯವಿದೆ ಎಂದು ಬರೆದಿದ್ದರೆಂಬುದು ಕುತೂಹಲಕಾರಿಯಾದ ಸಂಗತಿಯಾಗಿದೆ. (ಹೆಚ್ಚಿನ ವಿವರಗಳಿಗೆ ಹಝ್ರತ್ ಇರ್‌ಫಾನೀಯುಲ್ ಕಬೀರ್ ರಚಿಸಿದ "ಈಜಾಝುಲ್ ಖುರ್‌ಆನ್" ಎಂಬ ಗ್ರಂಥದ 178ನೇ ಪುಟ ನೋಡಿರಿ.)

### 2. ಹೊಸ ಸಂಚಾರ ಸಾಧನಗಳು:

ಇಸ್ಲಾಮಿನ ಸ್ಥಾಪಕರ ಕಾಲದಲ್ಲಿ ಸಂಚಾರ ವ್ಯವಸ್ಥೆಗಳು ಬಹಳ ಸೀಮಿತವಾಗಿದ್ದುವು. ಜನರು ಕುದುರೆ, ಹೇಸರಗತ್ತೆ, ಕತ್ತೆ ಮತ್ತು ಒಂಟೆಗಳ ಮೇಲೆ ಕುಳಿತು ಸಂಚರಿಸುತ್ತಿದ್ದರು. ದೋಣಿಗಳಲ್ಲಿ ಸಮುದ್ರ ಪ್ರಯಾಣ ಮಾಡುತ್ತಿದ್ದರು. ಪವಿತ್ರ ಖುರ್‌ಆನಿನಲ್ಲಿ ದೇವರು ಇದರ ಕುರಿತು ಈ ಪ್ರಕಾರ ಹೇಳಿರುವನು:—"ದೇವರು ಕುದುರೆಗಳನ್ನೂ, ಹೇಸರಗತ್ತೆಗಳನ್ನೂ, ಕತ್ತೆಗಳನ್ನೂ

ನಿಮಗೆ ಸಂಚಾರಕ್ಕಾಗಿಯೂ ನಿಮ್ಮ ಗೌರವಕ್ಕಾಗಿಯೂ ಸೃಷ್ಟಿಸಿರುವನು. ಇನ್ನು ಮುಂದೆ ನಿಮಗೆ ಈಗ ತಿಳಿಯದ ಸಂಚಾರ ಸಾಧನಗಳನ್ನು ಸೃಷ್ಟಿಸುವನು.'' (ಸೂರತ್ ನಹ್ಲ್: 9)

ಈ ವಚನದಲ್ಲಿ ಆಧುನಿಕ ಸಂಚಾರ ವಾಹನಗಳಾದ ರೈಲು, ಉಗಿ ಹಡಗ, ಮೋಟಾರ್ ವಾಹನಗಳು ಮತ್ತು ವಿಮಾನಗಳ ಕುರಿತು ವ್ಯಕ್ತವಾದ ಭವಿಷ್ಯವಾಣಿಯಿದೆ.

ಒಂದು ಕಾಲದಲ್ಲಿ ಒಂಟೆ ಸವಾರಿ ಪೂರ್ಣವಾಗಿ ತೊರೆಯಲ್ಪಡುವ ಸಂಗತಿಯು ಕುರಿತು ಪವಿತ್ರ ಖುರ್‌–ಆನಿನಲ್ಲಿ ಸ್ಪಷ್ಟವಾದ ಭವಿಷ್ಯವಾಣಿಯಿದೆ. ಪವಿತ್ರ ಖುರ್‌–ಆನಿನಲ್ಲಿ ದೇವರು ಈರೀತಿ ಹೇಳಿರುವನು:— ''ಆ ಕಾಲದಲ್ಲಿ ದಶಮಾಸಗರ್ಭದ ಒಂಟೆಗಳು ತ್ಯಜಿಸಲ್ಪಡುವುವು.'' (ಸೂರತ್ ತಕ್‌ವೀರ್, ವಚನ 5). ಎಂದರೆ ಆಧುನಿಕ ಸಂಚಾರ ವಾಹನಗಳು ಉಪಯೋಗಕ್ಕೆ ಬರುವುದರಿಂದ ಅರಬಸ್ತಾನದಲ್ಲಿ ಒಂಟೆಗಳಲ್ಲಿ ಸವಾರಿಮಾಡುವ ಆವಶ್ಯಕತೆ ಅತ್ಯಲ್ಪವಾಗುವುದು. "ದಶಮಾಸ ಗರ್ಭದ ಒಂಟೆ'' ಎಂಬ ಪದವು ಪೂರ್ಣ ಗರ್ಭಿಣಿಯಾಗಿರುವಾಗ ಅದರ ಬಹುಮೂಲ್ಯವನ್ನು ಸೂಚಿಸುತ್ತದೆ.

ಇಸ್ಲಾಮಿನ ಸ್ಥಾಪಕರು ಭವಿಷ್ಯ ನುಡಿಯುತ್ತಾ ''ಒಂದು ಕಾಲದಲ್ಲಿ ಒಂಟೆಗಳಲ್ಲಿ ಸವಾರಿಮಾಡುವುದನ್ನು ಬಿಡಲಾಗುವುದು'' ಎಂದು ಹೇಳಿರುವುದು ಮೇಲಿನ ಪವಿತ್ರ ಖುರ್‌ಆನ್ ವಚನದ ವ್ಯಾಖ್ಯಾನ ರೂಪದಲ್ಲಿದೆ.

**3. ಸಮುದ್ರಗಳ ಜೋಡಿಸುವಿಕೆಗಾಗಿ ಕಾಲುವೆಗಳ ನಿರ್ಮಾಣ:**

ಪವಿತ್ರ ಖುರ್-ಆನಿನ ಇನ್ನೊಂದು ಭವಿಷ್ಯವಾಣಿ ಎರಡು ಸಮುದ್ರಗಳು ಒಂದನ್ನೊಂದು ಸೇರದಂತೆ ತಡೆಯಲ್ಪಟ್ಟಿವೆಯೆಂದೂ ಅವುಗಳು ಮುಂದೆ ಒಂದನ್ನೊಂದು ಸೇರುವುವೆಂದೂ ಆ ಸಮುದ್ರಗಳಲ್ಲಿ ಮುತ್ತುಗಳು ದೊರೆಯುವುವೆಂದೂ ಸೂಚಿಸುತ್ತದೆ. (ಸೂರತ್ ಅರ್ರಹ್ಮಾನ್: 20–23). ಸುಯೇಝ್ ಕಾಲುವೆ ಮತ್ತು ಪನಾಮ ಕಾಲುವೆಗಳ ನಿರ್ಮಾಣದಿಂದ ಸಮುದ್ರಗಳು ಜೋಡಿಸಲ್ಪಟ್ಟು ಈ ಭವಿಷ್ಯವಾಣಿಯನ್ನು ಸತ್ಯವಾಗಿಸಿದೆ.

**4. ದೊಡ್ಡ ದೊಡ್ಡ ಹಡಗುಗಳು:**

ಸಮುದ್ರದಲ್ಲಿ ಪರ್ವತಗಳಂತೆ ಕಾಣುವ ಹಡಗುಗಳು ನಿರ್ಮಿಸಲ್ಪಡುವುವೆಂದು ಇನ್ನೊಂದು ಭವಿಷ್ಯವಾಣಿ ಸಾರುತ್ತಿದೆ (ಸೂರತ್ ಅರ್ರಹ್ಮಾನ್: 25). ಈ ಭವಿಷ್ಯವಾಣಿ ನಮ್ಮ ಕಾಲದಲ್ಲಿ ಅದ್ಭುತಕರವಾಗಿ ಪೂರ್ತಿಗೊಂಡಿದೆ. ಈಗಿನ ಕಾಲದ ಸಮುದ್ರ ಸಂಚಾರಿಗಳು ಈ ಭವಿಷ್ಯವಾಣಿಯ ಯಥಾರ್ಥತೆಯನ್ನು ಚೆನ್ನಾಗಿ ಗ್ರಹಿಸಬಲ್ಲರು.

**5 ಅಂತಾರಾಷ್ಟ್ರೀಯ ಸಮ್ಮೇಳನಗಳು:**

ಸಂಚಾರ ಸಾಧನಗಳ ಅಭಿವೃದ್ಧಿಯ ಪರಿಣಾಮವಾಗಿ ಪ್ರಪಂಚದ ಜನರೆಲ್ಲರೂ ಪರಸ್ಪರ ಸಾಮಿಪ್ಯ ಪ್ರಾಪಿಸುವರು. ಇದರ ಪರಿಣಾಮವಾಗಿ ಪ್ರಪಂಚವು ಒಂದು ದೇಶದಂತಾಗುವುದು. ಇದನ್ನೇ ಸೂಚಿಸುತ್ತಾ ಪವಿತ್ರ ಖುರ್-ಆನ್, "ಜನರೆಲ್ಲರೂ ಒಂದುಗೂಡಿಸಲ್ಪಡುವರು'' ಎಂದು ಭವಿಷ್ಯ ನುಡಿದಿದೆ. (ಸೂರತ್ ತಕ್‌ವೀರ್, ವಚನ 8). ನೋಡಿರಿ, ಸಂಚಾರದ ಎಂತಹ ಸುವ್ಯವಸ್ಥೆ ಸ್ಥಾಪಿತವಾಗಿದೆ! ಭಾರತೀಯರು ಅಮೇರಿಕದಲ್ಲೂ ಅಮೇರಿಕನರು ಭಾರತದಲ್ಲೂ ಕಾಣಸಿಗುವುದು ಸಾಮಾನ್ಯವಾಗಿ ಬಿಟ್ಟಿದೆ. ಇದಲ್ಲದೆ ತಂತಿ, ರೇಡಿಯೋ ಟೆಲಿಫೋನ್, ಟೆಲಿವಿಜನ್‌ಗಳು ಮೇಲಿನ ಭವಿಷ್ಯವಾಣಿಯನ್ನು ಸುಸ್ಪಷ್ಟವಾಗಿ ಪೂರ್ತಿಗೊಳಿಸಿದೆ. ನಾವು ಮನೆಯಲ್ಲೇ ಇದ್ದುಕೊಂಡು ಒಮ್ಮೆ ಇಂಗ್ಲೆಂಡಿನಿಂದ ಬಿತ್ತರಿಸಲಾಗುವ ಸುದ್ದಿಗಳನ್ನೂ ಇನ್ನೊಮ್ಮೆ ಅಮೇರಿಕ ಮತ್ತು ರಶ್ಯದ ಸುದ್ದಿಗಳನ್ನೂ ಕೇಳಲು ಸಮರ್ಥರಾಗಿದ್ದೇವೆ. ಇದಲ್ಲದೆ ಹಲವಾರು ಅಂತಾರಾಷ್ಟ್ರೀಯ ಸಮ್ಮೇಳನಗಳು ಜರುಗುತ್ತಾ ಇರುತ್ತವೆ ಮತ್ತು ವಿವಿಧ ದೇಶಗಳ ಜನರು ಒಟ್ಟಿಗೆ ಕುಳಿತು ಅಭಿಪ್ರಾಯ ವಿನಿಮಯ ನಡೆಸುತ್ತಾರೆ. ಇಸ್ಲಾಮಿನ ಎರಡನೆಯ ಖಲೀಫರಾದ ಹಝ್ರತ್ ಉಮರ್‌ರವರು ಈ ಭವಿಷ್ಯವಾಣಿಯನ್ನು ವ್ಯಾಖ್ಯಾನಿಸುತ್ತಾ "ಒಂದೇ ಅಭಿಪ್ರಾಯ ಹೊಂದಿರುವ ಅಥವಾ ವೃತ್ತಿ ಹೊಂದಿರುವವರು ಸಂಘಗಳನ್ನು ಸ್ಥಾಪಿಸುವರು'' ಎಂದು ನುಡಿದಿರುವರು. ಈ ಎಲ್ಲಾ ವಿವರಣೆಗಳು ಈ ಕಾಲವನ್ನೇ ಸೂಚಿಸುತ್ತವೆ. ಈ ಭವಿಷ್ಯವಾಣಿಗಳು ಈ ಕಾಲದಲ್ಲಿಯೇ ಪೂರ್ಣಗೊಂಡುವು

**6. ಗ್ರಂಥಗಳ ಪ್ರಚಾರ:**

ಪುಸ್ತಕಗಳು ಎಲ್ಲೆಡೆಗಳಲ್ಲೂ ಹಬ್ಬುವ ಒಂದು ಕಾಲವನ್ನು ಪವಿತ್ರ ಖುರ್–ಆನ್ ಸೂಚಿಸುತ್ತದೆ. (ಸೂರತ್ ತಕ್‌ವೀರ್, ವಚನ 11). ಈ ಭವಿಷ್ಯವಾಣಿ ಸಹ ಈ ಕಾಲದಲ್ಲಿ ಪೂರ್ಣಗೊಂಡುದು ಸುವ್ಯಕ್ತವಾ

ಗಿದೆ. ಗ್ರಂಥ ಮತ್ತು ಪತ್ರಿಕೆಗಳ ಪ್ರಸಾರ ಈಗಿನ ಕಾಲದಲ್ಲಿ ಅತ್ಯಧಿಕವಾಗಿದೆ. ಬಹಳ ದೊಡ್ಡ ದೊಡ್ಡ ಗ್ರಂಥಾಲಯಗಳು ನಿರ್ಮಾಣಗೊಂಡಿವೆ. ಪುಸ್ತಕವನ್ನೋದುವ ಹವ್ಯಾಸ ಅಧಿಕವಾಗುತ್ತಾ ಇದೆ. ದೊಡ್ಡ ದೊಡ್ಡ ಮುದ್ರಣಾಲಯಗಳು ಸ್ಥಾಪಿತವಾಗಿದ್ದು ಬಹಳ ವೇಗವಾಗಿ ಅಸಂಖ್ಯಾತ ಪುಸ್ತಕಗಳು ಪ್ರಕಟವಾಗುತ್ತವೆ.

**7. ಅಧ್ಯಾತ್ಮಿಕ ವಿಜ್ಞಾನದ ಮೇಲಿರುವ ಪರದೆ ಸರಿಯುವುದು:**

ಪವಿತ್ರ ಖುರ್-ಆನಿನ ಒಂದು ವಚನವು "ಒಂದು ಕಾಲದಲ್ಲಿ ಆಕಾಶದ ಚರ್ಮವು ಸುಲಿಯಲ್ಪಡುವುದು." (ಸೂರತ್ ತಕ್‌ವೀರ್: 12) ಎಂದಿದೆ. ಅಧ್ಯಾತ್ಮಿಕ ಜ್ಞಾನದ ಮೇಲೆ ಪರದೆಯು ಬಿದ್ದಿರುವ ಒಂದು ಕಾಲದಲ್ಲಿ ದೇವರಿಂದ ಈ ಪರದೆಯನ್ನು ಸರಿಸುವ ಒಬ್ಬ ಮಹಾನ್ ವ್ಯಕ್ತಿ ನಿಯುಕ್ತರಾಗುವರೆಂದೂ ಅವರು ಅಧ್ಯಾತ್ಮಿಕ ಜ್ಞಾನದ ಮೇಲೆ ಬಿದ್ದಿರುವ ಪರದೆಯನ್ನು ಸರಿಸಿ ಪವಿತ್ರ ಖುರ್-ಆನ್ ಮತ್ತು ಪವಿತ್ರ ಪ್ರವಾದಿಗಳ ವಚನಗಳ ರಹಸ್ಯಗಳನ್ನು ಪ್ರಕಟಿಸುವರೆಂಬುದನ್ನು ಈ ವಚನ ಸೂಚಿಸುತ್ತದೆ.

**8. ಖಗೋಳ ಶಾಸ್ತ್ರದ ಪ್ರಗತಿಯ ಭವಿಷ್ಯವಾಣಿ:**

"ಆಕಾಶದ ಚರ್ಮವು ಸುಲಿಯಲ್ಪಡುವುದು" ಎಂಬ ಪವಿತ್ರ ಖುರ್-ಆನಿನ ವಚನವು ಖಗೋಳ ಶಾಸ್ತ್ರದ ಆಶ್ಚರ್ಯಕರವಾದ ಅಭಿವೃದ್ಧಿಯನ್ನು ಸಹ ಸೂಚಿಸುತ್ತದೆ. ಈ ಕಾಲಘಟ್ಟದಲ್ಲಿ ಆಧುನಿಕ ವಿಜ್ಞಾನಿಗಳು ಬಾಹ್ಯಾಕಾಶ ಸಂಶೋಧನೆಯಲ್ಲಿ ಅದ್ಭುತಕರವಾದ ಪ್ರಗತಿಯನ್ನು ಪಡೆದಿದ್ದಾರೆ. ನಕ್ಷತ್ರಗಳ ಚಲನೆ, ಪ್ರಪಂಚದ ವಿಸ್ತಾರ, ಪ್ರಪಂಚದ ಉದ್ಭವ, ಆಕಾಶ ಗೋಳಗಳ ಅಸ್ತಿತ್ವ ಮೊದಲಾದ ವಿಷಯಗಳ ಕುರಿತು ಮನುಷ್ಯನು ಇಂದು ಅಭೂತಪೂರ್ವವಾದ ಪ್ರಗತಿಯನ್ನು ಗಳಿಸಿದ್ದಾನೆ. ಕಳೆದ ಒಂದು ಸಾವಿರ ವರ್ಷಗಳಲ್ಲಿ ತಿಳಿಯದ ಅನೇಕ ವಿಷಯಗಳು ಇತ್ತೀಚಿಗಿನ ಕೆಲವು ವರ್ಷಗಳಲ್ಲಿ ವಿಜ್ಞಾನಿಯು ತಿಳಿದುಕೊಂಡನು.

**ಕೊಪರ್ನಿಕಸನ ತತ್ವ:**

ಪವಿತ್ರ ಖುರ್‌ಆನಿನ ಅವತೀರ್ಣದ ಕಾಲದಲ್ಲಿ ಆಕಾಶ ಭೂಮಿಗಳ ಕುರಿತಿದ್ದ ಅಭಿಪ್ರಾಯಗಳಿಗೂ ಈಗ ತಿಳಿದು ಬಂದಿರುವ ಸಂಗತಿಗಳಿಗೂ ಬಹಳ ವ್ಯತ್ಯಾಸವಿದೆ. ಪ್ರಪಂಚದ ಕೇಂದ್ರವು ಭೂಮಿಯೆಂದೂ ವಿಶಾಲವಾದ ಒಂದು ಗೋಳದೊಳಗೆ ನಕ್ಷತ್ರಗಳು ತೂಗುತ್ತಿವೆಯೆಂದೂ ನಕ್ಷತ್ರಗಳ ಸಹಿತ ಈ ಗೋಳವು ತಿರುಗುತ್ತಿವೆಯೆಂದೂ ಭೂಮಿಗೂ ನಕ್ಷತ್ರಗಳಿಗೂ ಮಧ್ಯೆ ಸೂರ್ಯನೂ, ಚಂದ್ರನೂ, ಪಂಚನಕ್ಷತ್ರಗಳೂ (ಬುಧ, ಶುಕ್ರ, ಮಂಗಳ ಗುರು, ಶನಿ) ಸುತ್ತುತ್ತವೆಯೆಂದೂ ಮೊದಲ ನಂಬಿಕೆಯಾಗಿತ್ತು. 15ನೇ ಶತಮಾನದಲ್ಲಿ ಕೊಪರ್ನಿಕಸ್ (Copernicus) ಈ ಅಭಿಪ್ರಾಯಕ್ಕೆದುಶಬ್ದವೆತ್ತಿದನು. ಸೂರ್ಯನು ಭೂಮಿಯನ್ನು ಸುತ್ತುವುದಿಲ್ಲ; ಭೂಮಿಯು ಸೂರ್ಯನನ್ನು ಸುತ್ತುತ್ತದೆಯೆಂದೂ ಹಾಗೆಯೇ ಇನ್ನಿತರ ಕೆಲವು ನಕ್ಷತ್ರಗಳು ಸಹ ಸೂರ್ಯನನ್ನು ಸುತ್ತುತ್ತವೆಯೆಂದೂ ಆತನು ಸಿದ್ಧಾಂತಿಸಿದನು. ಹಲವು ಕಾಲದವರೆಗೆ ಈ ಸಿದ್ಧಾಂತವು ಸರಿಯಲ್ಲವೆಂದು ತರ್ಕವಿತ್ತು. ಆದರೆ ನಂತರಕಾಲದಲ್ಲಿ ಉಂಟಾದ ಸಂಶೋಧನೆಗಳು ಕೊಪರ್ನಿಕಸ್‌ನ ತತ್ವವು ಸರಿಯೆಂದು ರುಜುಪಡಿಸಿದುವು. ಮೇಲೆ ಹೇಳಿದ ಐದು ನಕ್ಷತ್ರಗಳಲ್ಲದೆ ನೆಪ್ಚ್ಯೂನ್, ಪ್ಲೂಟೋ, ಯುರೇನಸ್ ಎಂಬೀ ನಕ್ಷತ್ರಗಳೂ ಆಸ್ಟರೋಯ್ಡ್ಸ್ (Asteriods) ಎಂದು ಹೇಳಲ್ಪಡುವ ಅಸಂಖ್ಯಾತ ಕಿರುಭೂಮಿಗಳೂ* ಸೂರ್ಯನನ್ನು ಸುತ್ತುತ್ತವೆಯೆಂದೂ ನಾವೀಗ ತಿಳಿದುಕೊಂಡಿದ್ದೇವೆ. ಇವುಗಳಲ್ಲದೆ ಕೆಲವೊಮ್ಮೆ ದೂರದೃಷ್ಟಿಯ ಸಹಾಯವಿಲ್ಲದೆಯೂ ಗೋಚರವಾಗುವ ಧೂಮಕೇತುಗಳು ಸಹ ಸೂರ್ಯನನ್ನು ಪ್ರದಕ್ಷಿಣೆ ಮಾಡುತ್ತಿವೆ.

ಹದಿನಾಲ್ಕು ನೂರು ವರ್ಷಗಳಿಗೆ ಮೊದಲು "ಒಂದು ಕಾಲದಲ್ಲಿ ಭೂಮಿಯು ವಿಶಾಲಗೊಳಿಸಲ್ಪಡುವುದು" ಎಂದು ಸಹ ಖುರ್‌ಆನ್ ಹೇಳಿರುತ್ತದೆ. ಆಕಾಶದಲ್ಲಿರುವ ಹಲವು ಗೋಳಗಳು ಭೂಮಿಯ ಭಾಗಗಳಾಗಿವೆಯೆಂಬುದು ಆಧುನಿಕ ಕಾಲದಲ್ಲಿ ತಿಳಿದು ಬಂದಿರುವ ಸಂಗತಿಯಾಗಿದೆ. ಉದಾಹರಣೆಗೆ ಚಂದ್ರ, ಮಂಗಳ ಮೊದಲಾದ ಗೋಳಗಳು. ಚಂದ್ರನ ಮೇಲೆ ಮನುಷ್ಯನು ಈಗಾಗಲೇ ಪಾದಾರ್ಪಣೆ ಮಾಡಿರುವನು. ಇತರ ಗ್ರಹಗಳನ್ನು ತಲುಪುವ ಸಿದ್ಧತೆಗಳು ನಡೆಯುತ್ತಿವೆ.

**ಹತ್ತು ಸಾವಿರ ಕೋಟಿ ಸೂರ್ಯ ಗೋಳಗಳು:**

ನಮ್ಮ ಸೂರ್ಯ ಗೋಳವು ಒಂದು ವಿಶಾಲವಾದ ಆಕಾಶಗಂಗೆ (MilkyWay) ಯ ಒಂದು ಅಂಗ ಮಾತ್ರ

*ಇಂತಹ ಗೋಳಗಳು ಸುಮಾರು 1500 ಇವೆಯೆಂದು ವಿಜ್ಞಾನಿಗಳು ಹೇಳುತ್ತಾರೆ.

ವಾಗಿದೆ. ಈ ಸೂರ್ಯನಂತಹ ಹೆಚ್ಚು ಕಮ್ಮಿ ಹತ್ತು ಸಾವಿರ ಕೋಟಿ ಸೂರ್ಯ ಗೋಳಗಳು ನಮ್ಮ ಈ ಆಕಾಶಗಂಗೆಯಲ್ಲಿವೆ. ಬಹಳ ದೂರವಿರುವ ಕಾರಣ ಈ ಸೂರ್ಯ ಗೋಳಗಳು ನಮಗೆ ನಕ್ಷತ್ರಗಳಂತೆ ಕಾಣಿಸುತ್ತವೆ. ಈ ಆಕಾಶಗಂಗೆಯ ಉದ್ದವೆಷ್ಟಿದೆಯೆಂದರೆ ಅದರ ಒಂದು ತುದಿಯಿಂದ ಇನ್ನೊಂದು ತುದಿಗೆ ಪ್ರಕಾಶವು ತಲುಪಲು ಅಂದಾಜು ಒಂದು ಲಕ್ಷ ವರ್ಷ ಬೇಕಾಗುತ್ತದೆ. ಬೆಳಕು ಒಂದು ಸೆಕೆಂಡಿಗೆ 1,86,000 ಮೈಲುವೇಗದಲ್ಲಿ ಚಲಿಸುತ್ತದೆ. ಆಕಾಶಗಂಗೆಯ ಕೇಂದ್ರದಿಂದ ನಮ್ಮ ಸೂರ್ಯನಿಗಿರುವ ದೂರ 30,000 ಜ್ಯೋತಿರ್ವರ್ಷಗಳು.

ಇಪ್ಪತ್ತನೆಯ ಶತಮಾನದ ಆರಂಭದ ವರೆಗೆ ಸೌರ ಮಂಡಲದ ಸಂಶೋಧನೆಯಲ್ಲೇ ವಿಜ್ಞಾನಿಗಳು ಮಗ್ನರಾಗಿದ್ದರು. ಇಪ್ಪತ್ತನೆಯ ಶತಮಾನದಲ್ಲಿ ಬಾಹ್ಯಾಕಾಶ ಜ್ಞಾನದಲ್ಲಿ ಅಸಾಧಾರಣವಾದ ಪ್ರಗತಿಯು ಪ್ರಾಪ್ತವಾಯಿತು. ಅಸಂಖ್ಯಾತ ಸೂರ್ಯ ಗೋಳಗಳು ಹೇಗಿವೆ, ಆಕಾಶ ಗಂಗೆಯಲ್ಲಿ ಅವು ಸುತ್ತುವುದು ಹೇಗೆ ಎಂಬ ಪ್ರಶ್ನೆಗಳಿಗೆ ಮೊದಲ ಪ್ರಾಧಾನ್ಯತೆ ಕಲ್ಪಿಸಲ್ಪಟ್ಟಿತ್ತು. ಪ್ರಕಾಶ ಕಿರಣಗಳನ್ನು, ಅವು ಯಾವ್ಯಾವ ನಕ್ಷತ್ರಗಳದ್ದೆಂದು ಗುರುತು ಹಚ್ಚಲು ಮತ್ತು ಕಿರಣಗಳ ಸೂಕ್ಷ್ಮ ಘಟಕಗಳು ಯಾವ್ಯಾವೆಂದೂ ತಿಳಿಯಲು ಸಹಾಯಕವಾದ ಉಪಕರಣಗಳು ಇಂದು ಕಂಡುಹಿಡಿಯಲ್ಪಟ್ಟಿವೆ. ಪ್ರತಿಯೊಂದು ಕಿರಣದ ತಾಪ ಎಷ್ಟೆಂದು ಕಂಡುಹಿಡಿಯಲು ಇಂದು ಸಾಧ್ಯವಿದೆ. ಹೀಗೆ ನಮ್ಮ ಸೂರ್ಯ ಸಹ ಒಂದು ನಕ್ಷತ್ರವೆಂದು ನಮಗೆ ತಿಳಿಯಲು ಸಾಧ್ಯವಾಗಿದೆ. ಕೆಲವು ನಕ್ಷತ್ರಗಳ ತಾಪ ಸೂರ್ಯನಿಗಿಂತ ಅಧಿಕವಾಗಿದೆ. ಕೆಲವು ನಕ್ಷತ್ರಗಳ ತಾಪ ಸೂರ್ಯನಿಗಿಂತ ಕಮ್ಮಿ ಇದೆ. ಈ ಎಲ್ಲಾ ನಕ್ಷತ್ರಗಳು ಒಂದು ಕ್ರಮವನ್ನನುಸರಿಸಿ ಆಕಾಶಗಂಗೆಯ ಕೇಂದ್ರಕ್ಕೆ ಸುತ್ತ 20 ಕೋಟಿ ವರ್ಷಗಳಿಗೆ ಒಮ್ಮೆ ಪ್ರದಕ್ಷಿಣೆ ಮಾಡುತ್ತವೆ. ಸೂರ್ಯನು ಒಂದು ಸೆಕೆಂಡಿಗೆ 250 ಕಿಲೋ ಮೀಟರ್ ವೇಗದಲ್ಲಿ ಆಕಾಶಗಂಗೆಯಲ್ಲಿ ಚಲಿಸುತ್ತಾನೆಯೆಂದು ಆಧುನಿಕ ಸಂಶೋಧನೆಗಳಿಂದ ತಿಳಿದುಬಂದಿರುತ್ತದೆ. ಸೂರ್ಯನ ಚಲನೆಯ ಕುರಿತು ಖುರ್‌ಆನಿನಲ್ಲಿ ಪ್ರಸ್ತಾಪಿಸಲಾದ ವಿಷಯವನ್ನು ಈ ಸಂಶೋಧನೆ ಸತ್ಯಪಡಿಸಿರುತ್ತದೆ. ಖುರ್‌ಆನ್ ಈರೀತಿ ಹೇಳಿರುತ್ತದೆ: "ಸೂರ್ಯನು ಒಂದು ನಿಶ್ಚಿತ ಸ್ಥಳದ ಕಡೆಗೆ ಚಲಿಸುತ್ತಿರುವನು. ಇದು ಸರ್ವಶಕ್ತ ಮತ್ತು ಸರ್ವಜ್ಞನಾದ ದೇವರ ನಿಯಮವಾಗಿದೆ.'' (ಸೂರತ್ ಯಾಸೀನ್, ವಚನ 39).

ಎಲ್ಲಾ ಆಕಾಶಗೋಳಗಳು ಖುರ್‌ಆನಿನಲ್ಲಿ ಪ್ರಸ್ತಾಪಿಸಲ್ಪಟ್ಟ ರೀತಿಯಲ್ಲಿ ಚಲಿಸುತ್ತಿವೆಯೆಂಬುದು ಸತ್ಯ. ಖುರ್‌ಆನ್ ಈರೀತಿ ಹೇಳಿರುತ್ತದೆ: ''ಎಲ್ಲವೂ ಒಂದು ನಿಶ್ಚಿತ ಸ್ಥಾನವನ್ನು ಲಕ್ಷ್ಯವಾಗಿಟ್ಟುಕೊಂಡು ಚಲಿಸುತ್ತಿವೆ'' (ಸೂರತ್ ರಅದ್, ವಚನ 3.)

### ಕೋಟಿಗಟ್ಟಲೆ ಆಕಾಶಗಂಗೆಗಳು

ಪ್ರಪಂಚವೆಂದರೆ ಹತ್ತುಸಾವಿರ ಕೋಟಿ ನಕ್ಷತ್ರಗಳನ್ನು ಅಥವಾ ಸೂರ್ಯಗೋಳಗಳನ್ನು ಒಳಗೊಂಡಿರುವ ನಮ್ಮ ಈ ಕ್ಷೀರಪಥ ಮಾತ್ರವಾಗಿದೆಯೋ ಎಂಬ ವಿಷಯದಲ್ಲಿ 1920ರ ನಂತರ ವಿಜ್ಞಾನಿಗಳು ಸಂಶೋಧಿಸಲು ತೊಡಗಿದರು. ಆ ಕಾಲದಲ್ಲಿ ಎರಡು ಅಭಿಪ್ರಾಯಗಳಿದ್ದುವು. ಎಲ್ಲಾ ಗೋಳಗಳೂ ಅವುಗಳೆಡೆಯಲ್ಲಿರುವ ಎಲ್ಲಾ ವಸ್ತುಗಳೂ ನಮ್ಮ ಆಕಾಶಗಂಗೆಯ ಅಂಶವಾಗಿದೆಯೆಂಬುದು ಒಂದು ಅಭಿಪ್ರಾಯ. ಬೇರೆಯೂ ಆಕಾಶಗಂಗೆಗಳಿವೆಯೆಂಬುದು ಇನ್ನೊಂದು ಅಭಿಪ್ರಾಯ. ನಂತರದ ಸಂಶೋಧನೆಗಳಿಂದ ಅನೇಕ ಆಕಾಶಗಂಗೆಗಳಿವೆಯೆಂಬುದು ತಿಳಿದುಬಂತು. ಅವುಗಳೆಷ್ಟು? ಸಾವಿರವೋ ಲಕ್ಷವೋ, ಕೋಟಿಯೋ ಅಲ್ಲ, ಕೋಟಾನುಕೋಟಿ ಇವೆ* ಹತ್ತುಕೋಟಿಗಿಂತ ಹೆಚ್ಚು ಜ್ಯೋತಿರ್ವರ್ಷ ದೂರವಿರುವ ನಕ್ಷತ್ರಗಳನ್ನು ದೂರದರ್ಶಿನಿಯ ಮೂಲಕ ನಮಗೆ ಇಂದು ನೋಡಲು ಸಾಧ್ಯವಿದೆ.

ನೋಡಿರಿ, "ಆಕಾಶದ ಸಿಪ್ಪೆಯು ಒಂದು ಕಾಲದಲ್ಲಿ ಸುಲಿಯಲ್ಪಡುವುದು" ಎಂದು ಖುರ್‌ಆನ್ ಹದಿನಾಲ್ಕುನೂರು ವರ್ಷಗಳ ಮೊದಲು ಭವಿಷ್ಯನುಡಿದದ್ದು ಎಷ್ಟು ಅದ್ಭುತಕರವಾದ ರೀತಿಯಲ್ಲಿ ಈ ಕಾಲದಲ್ಲಿ ಪೂರ್ತಿಯಾಗಿದೆ!

### ಎಲ್ಲಾ ನಾಶಗೊಳ್ಳುವುವು

ಖುರ್‌ಆನಿನಲ್ಲಿ ಒಂದು ವಚನವು ಈರೀತಿ ಇದೆ: "ಸಕಲ ವಸ್ತುಗಳು ನಾಶವಾಗುವುವು. ಪ್ರತಾಪಶಾಲಿಯೂ ಎಲ್ಲಾ ಗೌರವಗಳಿಗೆ ಅರ್ಹನೂ ಆಗಿರುವ ಪರ

---

*10,000 ಕೋಟಿ ಇವೆಯೆಂದು ವಿಜ್ಞಾನಿಗಳು ಹೇಳುತ್ತಾರೆ. —ಸಂ.

ಮಾತ್ಮನ ಸತ್ತೆ ಮಾತ್ರ ಬಾಕಿಯುಳಿದೀತು'' (ಸೂರತ್ ಅರ್ರಹ್ಮಾನ್, ವಚನ 27, 28). ಈ ಪವಿತ್ರ ವಾಕ್ಯವನ್ನು ಅಹ್ಮದಿಯಾ ಸಂಘಟನೆಯ ಸ್ಥಾಪಕರು ''ಇಸ್ಲಾಮೀ ಅಸೂಲ್ ಕಿ ಫಿಲಾಸಫಿ'' ಎಂಬ ತನ್ನ ಗ್ರಂಥದಲ್ಲಿ ದೈವಾಸ್ತಿತ್ವಕ್ಕೆ ಒಂದು ಪುರಾವೆಯನ್ನಾಗಿ ಉದ್ಧರಿಸಿವರು.

ಆಕಾಶಗೋಳಗಳು ಒಂದು ಕ್ಲಿಪ್ತಕಾಲದ ವರೆಗೆ ಚಲಿಸುಕೊಂಡಿರುವುವೆಂದೂ ಅವು ನಿತ್ಯವಲ್ಲವೆಂದೂ ಖುರ್‌ಆನಿನಿಂದ ತಿಳಿದುಬರುತ್ತದೆ (13:3).

ಖುರ್‌ಆನಿನ ಈ ವಿವರಣೆಯಲ್ಲಿ ಅಡಕವಾಗಿರುವ ಯಥಾರ್ಥತೆಯನ್ನು ಅಧುನಿಕ ವಿಜ್ಞಾನ ವ್ಯಕ್ತಪಡಿಸಿರುತ್ತದೆ. ಎಲ್ಲಾ ವಸ್ತುಗಳೂ ನಶ್ವರವೆಂದೂ ಯಾವುದಾದರೊಂದು ದಿನ ಅವು ಅಂತ್ಯಹೊಂದುವುದೆಂದೂ ವಿಜ್ಞಾನವು ಸಿದ್ಧಾಂತಿಸುತ್ತದೆ.

ಮನುಷ್ಯನು ಹುಟ್ಟಿ, ಬೆಳೆದು, ವೃದ್ಧನಾಗಿ ಕಡೆಗೆ ಮೃತಿಹೊಂದುವನು. ಇದೇ ಅವಸ್ಥೆ ಮೃಗಗಳಲ್ಲೂ ಸಸ್ಯಗಳಲ್ಲೂ ಕಾಣಬಹುದು. ಹಾಗೆಯೇ ಭೂಮಿಗೂ ಇನ್ನಿತರ ಆಕಾಶಗೋಳಗಳಿಗೂ ಅಂತ್ಯವು ಉಂಟಾಗುವುದೆಂದು ಆಧುನಿಕ ವಿಜ್ಞಾನಿಗಳು ಗೊತ್ತುಹಚ್ಚಿದ್ದಾರೆ. ಈಗ ಭೂಮಿಯ ವಯಸ್ಸು 450 ಕೋಟಿ ವರ್ಷಗಳೆಂದು ಲೆಕ್ಕ ಹಾಕಲಾಗಿದೆ. ಸೂರ್ಯನ ವಯಸ್ಸು ಸುಮಾರು 500 ಕೋಟಿ ವರ್ಷಗಳು. ಸೂರ್ಯನ ಜ್ವಲಿಸುತ್ತಿರುವ ಹೈಡ್ರೋಜನ್ (Hydrogen) ಹೀಲಿಯಂ (Helium) ಆಗಿ ಪರಿವರ್ತನೆಗೊಳ್ಳುತ್ತಿದೆ. ಇದು ಸುಮಾರು 500 ಕೋಟಿ ವರ್ಷಗಳಲ್ಲಿ ಪೂರ್ಣಗೊಳ್ಳುವುದೆಂದು ವಿಜ್ಞಾನಿಗಳ ಅಭಿಪ್ರಾಯ. ಇದರ ನಂತರ ಸೂರ್ಯನ ಪರಿಮಾಣ (Mass) ಬಹಳ ವರ್ಧಿಸುವುದೆಂದೂ ಬುಧಗ್ರಹದ ವರೆಗೆ ಅದು ವಿಕಾಸಗೊಳ್ಳುವುದೆಂದೂ ಆಗ ನಮ್ಮ ಭೂಮಿಯಲ್ಲಿರುವ ಸಮುದ್ರಗಳ ನೀರು ಕುದಿಯಲು ತೊಡಗುವುದೆಂದೂ ಅವರು ಹೇಳುತ್ತಾರೆ. ಇದರೊಂದಿಗೆ ಭೂಮಿಯಲ್ಲಿ ಜೀವವಾಸವು ಕೊನೆಗೊಳ್ಳುವುದು. ಇದರ ನಂತರ ಸೂರ್ಯನು ಶೋಷಿತನಾಗುವನು. ಸೂರ್ಯನ ಗಾತ್ರ ಒಂದು ಉಪಗ್ರಹದಷ್ಟು ಕಿರಿದಾಗುವುದು. ಸೂರ್ಯನ ಬೆಳಕು ಬಹಳ ಕಮ್ಮಿಯಾಗುವುದು. ಇದನ್ನು ಸೂರ್ಯನ ವಾರ್ಧಕ್ಯಕಾಲವೆಂದು ಹೇಳಬಹುದು. (Abell ಬರೆದ Exploration of the Universe ಎಂಬ ಗ್ರಂಥವನ್ನು ನೋಡಿರಿ.)

ಸೂರ್ಯ ನಮಗೆ ಹಳದಿ ಬಣ್ಣವಾಗಿ ಕಾಣುತ್ತಾನೆ. ನಕ್ಷತ್ರಗಳಿಗೆ ಹಲವು ಬಣ್ಣಗಳಿವೆ. ನೀಲಿ ಬಣ್ಣದ ನಕ್ಷತ್ರಗಳ ವಯಸ್ಸು ತುಂಬಾ ಕಡಿಮೆ. ಕಡಿಮೆ ಎಂದರೆ ಕೋಟಿಗಟ್ಟಲೆ ವರ್ಷಗಳ ವ್ಯತ್ಯಾಸ! ಇಂತಿಷ್ಟು ವರ್ಷಗಳ ನಂತರ ಒಂದು ನಕ್ಷತ್ರಕ್ಕೆ ಅಂತ್ಯ ಸಂಭವಿಸುವುದೆಂದು ಲೆಕ್ಕಮಾಡುವುದೇ ಅದರ ವಯಸ್ಸಿನ ನಿರ್ಧಾರ. ಸಂಕ್ಷಿಪ್ತವಾಗಿ, ಆಕಾರದಲ್ಲಿ ಚಲಿಸುತ್ತಿರುವ ಅಸಂಖ್ಯಾತ ನಕ್ಷತ್ರಗಳು ಅಥವಾ ಸೂರ್ಯಗೋಳಗಳು ಎಲ್ಲವೂ ನಾಶಗೊಳ್ಳುವುವೆಂದು ವಿಜ್ಞಾನಿಗಳು ತಮ್ಮ ಸಂಶೋಧನೆಗಳ ಆಧಾರದಿಂದ ಸಿದ್ಧಾಂತಿಸುತ್ತಾರೆ.

ಈ ವಿಷಯುಕವಾಗಿ ಅಹ್ಮದಿಯಾ ಸಂಘಟನೆಯ ಸ್ಥಾಪಕರು ತನ್ನ ಒಂದು ಕವಿತೆಯಲ್ಲಿ ಈರೀತಿ ಹೇಳಿರುವರು: "ಅವನು (ಅಲ್ಲಾಹು) ಏಕನೂ ಜೊತೆಗಾರನಿಲ್ಲದವನೂ ದಣಿವಿಲ್ಲದವನೂ ಆಗಿರುವನು. ಎಲ್ಲವೂ ಮರಣಕ್ಕೆ ಗುರಿಯಾಗುತ್ತವೆ. ಆದರೆ ಅವನಿಗೆ ನಾಶವಿಲ್ಲ.'' (ದುರ್ರೆ ಸಮೀನ್).

## ಬೇರೆ ಭೂಮಿಗಳು

ಇತರ ಸೂರ್ಯಗೋಳಗಳನ್ನು ಸಹ ಭೂಮಿಗಳು ಪ್ರದಕ್ಷಿಣೆ ಮಾಡುತ್ತಿವೆಯೇ? ಅವುಗಳಲ್ಲಿಯೂ ಜೀವಿಗಳು ವಾಸಿಸುತ್ತವೆಯೇ? ಎಂಬೀ ಪ್ರಶ್ನೆಗಳು ಸ್ವಾಭಾವಿಕವಾಗಿ ಇಲ್ಲಿ ಉದ್ಭವಿಸುತ್ತವೆ. ಸೂರ್ಯನಿಗಿಂತ ಭೂಮಿ ಬಹಳ ಕಿರಿದು. ಸೂರ್ಯನು ನಮ್ಮ ಭೂಮಿಗಿಂತ 3ಲಕ್ಷ ಪಾಲು ದೊಡ್ಡದು. ಈಗ ಇರುವ ದೂರದರ್ಶಿನಿಗಳ ಮುಖಾಂತರ ಇತರ ಸೂರ್ಯಗೋಳಗಳನ್ನು ಸುತ್ತುವ ಭೂಮಿಗಳನ್ನು ಕಾಣಲು ಸಾಧ್ಯವಿಲ್ಲ. ಆದರೆ ಹಲವು ಸೂರ್ಯಗೋಳಗಳನ್ನು ಭೂಮಿಗಳು ಭ್ರಮಣ ಮಾಡುತ್ತಿರಬಹುದೆಂದೂ ಆ ಭೂಮಿಗಳಲ್ಲಿ ಜೀವಿಗಳು ಇರಬಹುದೆಂದೂ ವಿಜ್ಞಾನಿಗಳು ಊಹಿಸುತ್ತಾರೆ. ನಮ್ಮಂಥ ಮನುಷ್ಯರು ಇನ್ನೆಲ್ಲಿಯೂ ಇರಲಾರರೆಂದು ಹೇಳಲು ಸಾಧ್ಯವಿಲ್ಲದಷ್ಟು ಪ್ರಪಂಚವು ವಿಸ್ತಾರವಾಗಿದೆ. ಮಂಗಳನಲ್ಲಿ ಜೀವಿಗಳಿವೆಯೇ ಎಂದು ವಿಜ್ಞಾನಿಗಳು ಶೋಧಿಸುತ್ತಿದ್ದಾರೆ.

## ಖುರ್‌ಆನ್ ಏನು ಹೇಳುತ್ತದೆ?

ಈ ವಿಷಯದಲ್ಲಿ ಖುರ್‌ಆನ್ ಏನು ಹೇಳುತ್ತದೆಯೆಂದು ನೋಡುವಾ. ಅದು ಈರೀತಿ ಹೇಳುತ್ತದೆ: "ಆಕಾಶದಲ್ಲಿ ಮತ್ತು ಭೂಮಿಯಲ್ಲಿರುವ ಎಲ್ಲವೂ ಅವನೊಡನೆ (ಪರಮಾತ್ಮನೊಡನೆ) ಅಭಯವನ್ನು ಯಾಚಿಸುತ್ತವೆ. ಒಂದೊಂದು ಕ್ಷಣದಲ್ಲಿ ಅವನು ಒಂದೊಂದು ಹೊಸ ಅವಸ್ಥೆಯನ್ನು ಹೊಂದುತ್ತಾನೆ.'' (ಸೂರತ್ ಅರ್ರಹ್ಮಾನ್, ವಚನ 30)

ಒಂದೊಂದು ಕ್ಷಣದಲ್ಲಿ ಒಂದೊಂದು ಹೊಸ ಅವಸ್ಥೆಯನ್ನು ಪ್ರಕಟಗೊಳಿಸುವಷ್ಟರ ಮಟ್ಟಿಗೆ ಅಲ್ಲಾಹುವಿನ ಗುಣ ವಿಶೇಷತೆಗಳು ಅನಂತವೆಂದೂ, ಮನುಷ್ಯನ ಹಾಗೆ ಪರಮಾತ್ಮನ ಗುಣಗಳು ಪರಿಮಿತವಲ್ಲವೆಂದೂ ಇದರ ಅರ್ಥ.

ಪವಿತ್ರ ಖುರ್‌ಆನಿನ ಈ ವಾಕ್ಯದಿಂದಲೂ ಇನ್ನಿತರ ವಾಕ್ಯಗಳಿಂದಲೂ ಆಕಾಶ ಮಂಡಲದಲ್ಲಿ ಜೀವಿಗಳಿವೆಯೆಂದೂ ಪರಮಾತ್ಮನು ನಮ್ಮ ಅಸಂಖ್ಯಾತ ಜೀವನಾವಶ್ಯಕತೆಗಳನ್ನು ಒದಗಿಸಿಕೊಡುವ ಹಾಗೆ ಆಕಾಶಗೋಳಗಳಲ್ಲಿ ವಾಸಿಸುವ ಇತರ ಜೀವರಾಶಿಗಳ ಆವಶ್ಯಕತೆಗಳನ್ನು ಸಹ ಪೂರೈಸುತ್ತಿರುವನೆಂದು ವ್ಯಕ್ತವಾಗುತ್ತದೆ.

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಅಹ್ಮದರು "ಇಸ್ಲಾಮೀ ಆಸೂಲ್ ಕಿ ಫಿಲಾಸಫಿ'' ಎಂಬ ಗ್ರಂಥದಲ್ಲಿ "ಯುಸಬ್ಬಿಹು ಲಹು ಮಾ ಫಿಸ್ಸಮಾವಾತಿ ವಲ್ ಅರ್ಝಿ ವಹುವಲ್ ಅಜೀಜುಲ್ ಹಕೀಂ'' (59:25) ಎಂಬ ವಚನವನ್ನು ಈರೀತಿ ವ್ಯಾಖ್ಯಾನಿಸಿರುವರು: "ಆಕಾಶಮಂಡಲಗಳಲ್ಲೂ ಭೂಮಿಯಲ್ಲೂ ಇರುವವರು ಅವನ (ಪರಮಾತ್ಮನ) ಮಹತ್ವವನ್ನೂ ಅವನ ಪಾವನತೆಯನ್ನೂ ಕೊಂಡಾಡುತ್ತಾರೆ. ಅವನು ಸರ್ವವಲ್ಲಭನೂ ಸರ್ವಜ್ಞನೂ ಆಗಿದ್ದಾನೆ.''

ಇದಲ್ಲದೆ, ಖುರ್‌ಆನಿನ ಪ್ರಥಮ ಅಧ್ಯಾಯವಾದ ಸೂರಫಾತಿಹಾವನ್ನು ವ್ಯಾಖ್ಯಾನಿಸುತ್ತಾ ಅವರು ಈರೀತಿ ಹೇಳಿರುವರು:

"ನಮ್ಮ ಪವಿತ್ರನಾದ ಅಲ್ಲಾಹು ಸೂರ ಫಾತಿಹಾದಲ್ಲಿ ಆಕಾಶದ ಅಥವಾ ಭೂಮಿಯ ಹೆಸರೆತ್ತಿ ಹೇಳದೆ ಅವನು 'ರಬ್ಬಿಲ್ ಆಲಮೀನ್'—ಸಕಲ ಲೋಕಗಳ ನಾಥ-ಎಂದು ಹೇಳಿದ್ದಾನೆ. ಎಂದರೆ ಎಲ್ಲಿಯೆಲ್ಲಾ ಜೀವವಾಸವಿದೆಯೋ, ಸ್ಥೂಲ ಅಥವಾ ಸೂಕ್ಷ್ಮ ರೂಪದ ಯಾವೆಲ್ಲಾ ತರದ ಸೃಷ್ಟಿಗಳು ಜೀವಿಸುತ್ತಿವೆಯೋ ಅಲ್ಲೆಲ್ಲಾ ಸೃಷ್ಟಿಕರ್ತನೂ ರಕ್ಷಕನೂ ಅಲ್ಲಾಹುವೇ ಆಗಿದ್ದಾನೆ; ಅವನು ಸದಾಕಾಲವೂ ಅವುಗಳ ಪರಿಪಾಲಕನಾಗಿರುವನು; ಅವುಗಳಲ್ಲಿ ಪ್ರತಿಯೊಂದರ ಸ್ಥಿತಿಗನುಸರಿಸಿದ ವ್ಯವಸ್ಥೆಗಳನ್ನು ಅವನು ಮಾಡುತ್ತಾನೆ. ಎಲ್ಲಾ ಲೋಕಗಳ ಮೇಲೆ ಎಲ್ಲಾ ಸಮಯಗಳಲ್ಲೂ ಎಲ್ಲಾ ಕ್ಷಣಗಳಲ್ಲೂ ಅವನ ಸರ್ವವಲ್ಲಭತನವೂ ಕಾರುಣ್ಯವೂ ದಯಾಪರತೆಯೂ ಶಿಕ್ಷಾರಕ್ಷೆಗಳೂ ಪ್ರವರ್ತಿಸುತ್ತಿವೆ.'' (ಕಿಶ್ತೀನೂಹ್)

## ಗೋಳಾಂತರ ಯಾತ್ರೆ

ಭೂಮಿಯಿಂದ ಬೇರೆ ಗ್ರಹಗಳಿಗೆ ಹೋಗುವ ಪ್ರಯತ್ನ ಪ್ರಪಂಚದ ಎರಡು ಸುಶಕ್ತ ರಾಷ್ಟ್ರಗಳಿಂದ ನಡೆಯುವುದೆಂದೂ ಆದರೆ ಅತ್ಯಂತ ವೇಗ, ಅತ್ಯಧಿಕ ಶಕ್ತಿ ಮತ್ತು ಪೂರ್ಣ ಸಾಮರ್ಥ್ಯವನ್ನು ಗಳಿಸದೆ ಇದು ಅಸಾಧ್ಯವೆಂದೂ ಖುರ್‌ಆನಿನಲ್ಲಿ ಹೇಳಲಾಗಿದೆ. (55:34). ಭೂಮಿಯ ಗುರುತ್ವಾಕರ್ಷಣಶಕ್ತಿಯ ಪರಿಧಿಯಿಂದ ಹೊರಗೆಹೋಗಲು ಒಂದು ಸೆಕೆಂಡಿಗೆ ಹನ್ನೊಂದು ಕಿಲೋಮೀಟರ್ ವೇಗದಲ್ಲಿ (ಎಂದರೆ ಒಂದು ಗಂಟೆಗೆ 40 ಸಾವಿರ ಕಿಲೋಮೀಟರ್ ವೇಗದಲ್ಲಿ) ಚಲಿಸಬೇಕಾಗುತ್ತದೆ. ಆಧುನಿಕ ವೈಜ್ಞಾನಿಕ ಪ್ರಗತಿಯು ಖುರ್‌ಆನ್ ಹೇಳಿದುದರ ಉದ್ದೇಶವನ್ನು ಗ್ರಹಿಸಲು ನೆರವಾಗುತ್ತದೆ.

ಹದಿನಾಲ್ಕು ನೂರು ವರ್ಷಗಳ ಮೊದಲು ಅರಬಸ್ಥಾನದಿಂದ ಚೀನಕ್ಕೆ ಹೋಗುವುದೇ ಅತ್ಯಧಿಕ ಕಷ್ಟವಾಗಿರುವ ಕಾಲದಲ್ಲಿ, ವಿವಿಧ ಆಕಾಶಗೋಳಗಳಿಗೆ ಹೋಗುವ ಸಾಧ್ಯತೆಯನ್ನು ಖುರ್‌ಆನ್ ಹೇಳಿರುವುದು ನಮ್ಮ ವಿಶ್ವಾಸವನ್ನು ದೃಢೀಕರಿಸಲು ಸಹಕಾರಿಯಾಗಿದೆ.

ಇನ್ನೊಂದು ಕಡೆಯಲ್ಲಿ ಖುರ್‌ಆನ್ ಆಕಾಶಮಂಡಲದ ಜೀವಿಗಳ ಕುರಿತು ಮತ್ತು ಅವುಗಳ ಒಟ್ಟುಗೂಡುವಿಕೆಯ ಕುರಿತು ಈರೀತಿ ಹೇಳುತ್ತದೆ: "ಅವನ (ಪರಮಾತ್ಮನ) ದೃಷ್ಟಾಂತಗಳಲ್ಲಿ ಒಂದು, ಆಕಾಶಗಳ ಮತ್ತು ಭೂಮಿಯ ಸೃಷ್ಟಿ ಹಾಗೂ ಅವುಗಳಲ್ಲಿ ವ್ಯಾಪಿಸಲ್ಪಟ್ಟಿರುವ ಜೀವಜಂತುಗಳು; ತನ್ನ ಇಚ್ಛಾನುಸಾರ ಅವುಗಳನ್ನೆಲ್ಲಾ ಒಟ್ಟುಗೂಡಿಸಲು ಅವನು ಶಕ್ತನು. (42:30)

ಕಳೆದ ಒಂದುನೂರು ವರ್ಷಗಳಲ್ಲಿ ನಾವು ವೈಜ್ಞಾನಿಕವಾಗಿ ಗಳಿಸಿದ ಪ್ರಗತಿಯನ್ನು ಹಿಂದಿನ ಶತಮಾನಗಳ ಪ್ರಗತಿಯೊಂದಿಗೆ ತಾರತಮ್ಯಪಡಿಸಿ ನೋಡಿದರೆ ಹಿಂದಿನ ಪ್ರಗತಿ ನಿಸ್ಸಾರವೆಂದು ತೋರುತ್ತದೆ. ಆದರೆ ನಮಗೆ ತಿಳಿದಿರುವ ಜ್ಞಾನವನ್ನು ನಮಗೆ ತಿಳಿಯದೆ ಇರುವ ಜ್ಞಾನದೊಡನೆ ತಾರತಮ್ಯಪಡಿಸಿದರೆ ನಮಗೆ ತಿಳಿದಿರುವುದು ನಿಸ್ಸಾರವೆಂದೇ ಹೇಳಬಹುದು. ದೊಡ್ಡ ದೊಡ್ಡ ವಿಜ್ಞಾನಿಗಳು ಸಹ ಹೀಗೆಯೇ ಹೇಳುತ್ತಾರೆ. ಪವಿತ್ರ ಖುರ್-ಆನಿನ ಸೂರತುಲ್ ಕಹಫ್ ವಚನ 110 ಇದನ್ನೇ ಸೂಚಿಸುತ್ತದೆ. ಜ್ಞಾನದ ಮೈದಾನವು ಅತ್ಯಂತ ವಿಶಾಲವಾಗಿದೆಯೆಂದೂ ಸೃಷ್ಟಿಯ ರಹಸ್ಯಗಳ ಕುರಿತು ಸಂಶೋಧನೆ ನಡೆಸಲಿಚ್ಛಿಸುವವನಿಗೆ ಧಾರಾಳ ಅವಕಾಶಗಳಿವೆಯೆಂದೂ ಈ ವಚನ ಸ್ಪಷ್ಟಗೊಳಿಸುತ್ತದೆ. ಅಹ್ಮದಿಯಾ ಸಂಘಟನೆಯ ಸ್ಥಾಪಕರು ತನ್ನ ಒಂದು ಕವಿತೆಯಲ್ಲಿ ಎಷ್ಟು ಸುಂದರವಾಗಿ ಈ ಯಥಾರ್ಥವನ್ನು ವಿವರಿಸಿದ್ದಾರೆ ನೋಡಿರಿ:

“ಪ್ರತಿಯೊಂದು ಅಣುವಿನ ಒಳಗೆ ನೀನು ಆದರದೇ ಆದ ಸಂವಿಧಾನವನ್ನು ಇಟ್ಟಿರುವುದು ಎಷ್ಟು ಅದ್ಭುತಕರವಾಗಿದೆ! ಆ ರಹಸ್ಯ ಜ್ಞಾನಗಳ ಎಲ್ಲಾ ರೇಖೆಗಳನ್ನು ಯಾರಿಗೆ ತಾನೆ ಓದಿ ತಿಳಿಯಲು ಸಾಧ್ಯ? ನಿನ್ನ ಅದ್ಭುತ ಶಕ್ತಿಗಳನ್ನು ಲೆಕ್ಕಮಾಡಲು ಯಾರೂ ಶಕ್ತನಲ್ಲ. ಆ ರಹಸ್ಯದ ಸುರುಳಿಯನ್ನು ಬಿಡಿಸಲು ಯಾರಿಗೆ ತಾನೆ ಸಾಧ್ಯ?”

— o — o —

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ
ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

# ಮೈತ್ರಿ ಸಂದೇಶ

“... ...... ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದುಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು... ....” —ಉದಯವಾಣಿ

“......... ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸಯುಬಲ್ಲ ಲೇಖನ.......” —ನವಭಾರತ.

ಪುಟಗಳು: 48

ಬೆಲೆ: ಒಂದು ರೂಪಾಯಿ

ಬರೆಯಿರಿ: The Editor, YUGARASHMI Kannada Qurterly,
23/1008, Ansari Road, Bunder, Mangalore-575001.

# ಸಂಪಾದಕರಿಗೆ ಪತ್ರ

ಪ್ರಿಯ ಸಂಪಾದಕರಿಗೆ,

ನಮಸ್ಕಾರಗಳು. ನೀವು ಪ್ರೀತಿಯಿಂದ ಕಳಿಸಿದ 'ಯುಗರಶ್ಮಿ'ಯ ಮಾರ್ಚ್, ಜೂನ್ ಅಂಕಗಳು ಕೈಸೇರಿವೆ.

ಎಲ್ಲ ಧರ್ಮಗಳ ಒಳತಿರುಳು ಒಂದೇ. ಅದು ಆ ಪರಮಾತ್ಮನ ಮಹಾತ್ಮೆಯನ್ನು ಸಾರಿ ಜನತೆಯನ್ನು ಸನ್ಮಾರ್ಗದತ್ತ ಒಯ್ಯುವುದು. 'ಯುಗರಶ್ಮಿ' ಈ ದಿಸೆಯಲ್ಲಿ ತನ್ನ 'ಅಳಿಲ ಸೇವೆ' ಗೈಯುತ್ತಿರುವುದು ಸಂತಸ. ಇಸ್ಲಾಮ್ ಧರ್ಮದ ಕುರಿತು ಕೂಲಂಕುಷ ಅರಿಯುವಲ್ಲಿ 'ಯುಗರಶ್ಮಿ'ಯು ಬೆಳಕನ್ನು ಸರ್ವತ್ರ ಚೆಲ್ಲಲಿ ಎಂದೇ ನನ್ನ ಹಾರೈಕೆ. ಸ್ವಧರ್ಮವನ್ನು ಅರಿಯುವುದರೊಂದಿಗೆ, ಅನ್ಯಧರ್ಮದ ಕುರಿತೂ 'ಯುಗರಶ್ಮಿ' ಲೇಖನಗಳನ್ನು ಪ್ರಕಟಿಸಲಿ. ತನ್ಮೂಲಕ ಮೂಢ, ಸಂಕುಚಿತ ದೃಷ್ಟಿಕೋನದಿಂದ ಮುಕ್ತವಾಗಿ ಮಾನವಧರ್ಮದತ್ತ ಜನತೆ ಸಾಗುವಂತಾದೀತು.

ಯುಗರಶ್ಮಿಗೆ ನನ್ನ ಶುಭ ಹಾರೈಕೆಗಳು.

**B. ನರಸಿಂಗ ರಾವ್,** B. Sc.
Free Lance Jounalist

ಕಾಸರಗೋಡು

++++++++++

ಪ್ರಿಯ ಸಂಪಾದಕರೇ,

ತಾವು ಕೃಪೆಯಿಟ್ಟು ಕಳುಹಿಸಿದ 'ಯುಗರಶ್ಮಿ'ಯ ಪ್ರತಿ ದೊರಕಿತು. ಕೃತಜ್ಞತೆಗಳು.

ಇಪ್ಪತ್ತನೇ ಶತಮಾನದ ಈ ಉತ್ತರಾರ್ಧದಲ್ಲೂ ಜಾತೀಯತೆ, ಧರ್ಮಾಂಧತೆ, ವಿದ್ವೇಷಗಳು ಮನುಷ್ಯನ ಬದುಕನ್ನು ಕಲಕುತ್ತಿರುವುದು ನಿಷ್ಠುರ ಸತ್ಯ. ಭಾವೈಕ್ಯದ, ಮತೀಯ ಸಾಮರಸ್ಯದ ಮಾತಾಡುತ್ತಾ ಅದರ ಹಿಂದೆ ತದ್ವಿರುದ್ಧವಾಗಿ ನಾವು ವರ್ತಿಸುತ್ತಿರುವುದು ಮನುಷ್ಯ ಜನಾಂಗದ ದುರಂತಗಳಲ್ಲೊಂದು. ಬಹುಶಃ ಇದಕ್ಕೆಲ್ಲ ಕಾರಣ ಪರಸ್ಪರ ತಿಳುವಳಿಕೆಯ ಅಭಾವ.

'ಯುಗರಶ್ಮಿ' ಇವನ್ನೆಲ್ಲಾ ಹೊಡೆದೋಡಿಸಿ ರಾಷ್ಟ್ರೀಯ ಭಾವೈಕ್ಯಕ್ಕೆ ಕಾರಣವಾಗುತ್ತದೆ ಎಂಬ ಭ್ರಮೆಯೇನೂ ನನಗಿಲ್ಲ. ಆದರೆ ಇದು ಆ ನಿಟ್ಟಿನಲ್ಲಿ ಕೈಕೊಂಡ ಒಂದು ಪುಟ್ಟ ಪ್ರಯತ್ನ ಎಂಬುದಂತೂ ಖಂಡಿತ. ಆದ್ದರಿಂದಲೇ ಇಂತಹ ಪತ್ರಿಕೆಗಳು ಸ್ವಾಗತಾರ್ಹ. ನಿಮ್ಮ ಇತಿಮಿತಿಯೊಳಗೆ ಅಚ್ಚುಕಟ್ಟಾಗಿ ಮಾಡಿದ ಈ ಕಾರ್ಯ ಖಂಡಿತ ಕನ್ನಡಿಗರ ಕೃತಜ್ಞತೆಗೆ ಪಾತ್ರವಾಗುತ್ತದೆ. ಮುಸ್ಲಿಂ ಬಂಧುಗಳ, ಅವರ ನಂಬುಗೆ, ಶ್ರದ್ಧೆ ವಿಶ್ವಾಸಗಳ ಕುರಿತು ಸ್ಪಷ್ಟ ಅರಿವನ್ನು 'ಯುಗರಶ್ಮಿ' ಇತರರಲ್ಲಿ ಮೂಡಿಸಲಿ ಅದರೊಂದಿಗೇ ಮುಸ್ಲಿಮ್ ಜನಾಂಗದ ಏಳಿಗೆಗೂ ಕಾರಣವಾಗಲಿ ಎಂದು ಹಾರೈಸುತ್ತೇನೆ.

ಸಂಪೂರ್ಣ ಸಹಕಾರದ ಭರವಸೆಯೊಂದಿಗೆ —

ನಿಮ್ಮ ಬಂಧು,

**B. ವೇಣುಗೋಪಾಲ ಭಟ್,** M.A.
Lecturer in Kannada
(ಕವಿತೆಗಾಗಿ 1973ರ ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ ವಿಜೇತ)

ಕಾಸರಗೋಡು

++++++++++

ಅಲ್ಲಾಹೊ ಅಕ್‌ಬರ್

ಜನಾಬ್ ಮುಹಮ್ಮದ್ ಯೂಸುಫ್, ಸಂಪಾದಕ ಯುಗರಶ್ಮಿ, ಇವರಿಗೆ ಸಲಾಂ ಅಲೈಕುಂ.

ನೀವು ಪ್ರೀತಿಪೂರ್ವಕವಾಗಿ ಕಳಿಸಿದ ಯುಗರಶ್ಮಿಯ ಎರಡು ಸಂಚಿಕೆಗಳು ನಿನ್ನೆ ಕೈಸೇರಿದವು. ಉಳಿದೆಲ್ಲ ಕೆಲಸಗಳನ್ನು ಬಿಟ್ಟು ಅವುಗಳನ್ನು ಅಮೂಲಾಗ್ರವಾಗಿ ಓದಿದೆ.

ನಿಮ್ಮ ಪ್ರಯತ್ನ ಸ್ತುತ್ಯ ಹಾಗೂ ಸ್ವಾಗತಾರ್ಹ. ನಿಮ್ಮ ತ್ರೈಮಾಸಿಕದಲ್ಲಿ ಪ್ರಕಟವಾಗುವ ಇಸ್ಲಾಮ್ ಧರ್ಮದ ತತ್ವಗಳನ್ನು ಮುಸ್ಲಿಮ್ ಸಮಾಜವು ಆಚರಣೆಯಲ್ಲಿ ತಂದದ್ದೇ ಆದರೆ ಹಿಂದು ಮುಸ್ಲಿಮರಲ್ಲಿ ಮೇಲಿಂದ ಮೇಲೆ ಕಂಡುಬರುವ ಘರ್ಷಣೆಗಳು ಮಾಯವಾಗಿ ನಿಜವಾದ ರಾಷ್ಟ್ರೀಯ ಏಕಾತ್ಮತೆಯು ಸಾಧ್ಯವಾಗುವುದರಲ್ಲಿ ಸಂದೇಹವಿಲ್ಲ.

ನಿಮ್ಮ ಪ್ರಯತ್ನ ಯಶಸ್ವಿಯಾಗಲೆಂದೂ ಮುಸ್ಲಿಮ್ ಜನತೆ ನಿಮಗೆ ಪ್ರೋತ್ಸಾಹ, ಸಹಕಾರಗಳನ್ನು ನೀಡಲೆಂದೂ ಸರ್ವಶಕ್ತನಾದ ಅಲ್ಲಾನಲ್ಲಿ ಪ್ರಾರ್ಥಿಸುತ್ತೇನೆ.

ರಂಗರಾವ ತಲಚೇರಕರ,
Advocate

ಬೆಳಗಾವಿ

:::::::::::::::::::::::

ಪ್ರಿಯ ಮಾನ್ಯ ಸಂಪಾದಕರೇ,

ತಾವು ಪ್ರೀತಿವಾತ್ಸಲ್ಯದಿಂದ ಕಳುಹಿಸುವ ಯುಗರಶ್ಮಿಯು ತಪ್ಪದೆ ಸಕಾಲಕ್ಕೆ ನನಗೆ ತಲುಪುತ್ತವೆ. ಆಬಗ್ಗೆ ನಾನು ತಮಗೆ ಚಿರಋಣಿ. ಅನಂತಕೋಟಿ ಅಭಿನಂದನೆಗಳು ..

ತಮ್ಮ ಯುಗರಶ್ಮಿಯಲ್ಲಿ ದೇವರೊಬ್ಬನಿದ್ದಾನೆ ಎಂಬುದನ್ನು ಪ್ರತಿಪಾದಿಸಲು ಕೊಟ್ಟ ಆಧಾರಗಳನ್ನು ಓದಿ ನನಗೆ ಪರಮಾನಂದವಾಯಿತು. ಆತ್ಮತೃಪ್ತಿಯೂ ಆಯಿತು.

ವಿಶ್ವೇಶ್ವರಪುರಂ

—ಓರ್ವ ಹಿಂದೂ ಅಧ್ಯಾಪಿಕೆ

:::::::::::::::::::::::

ಮಾನ್ಯರೆ,

ನೀವು ಕಳುಹಿಸಿ ಕೊಟ್ಟ ಯುಗರಶ್ಮಿ ತಲುಪಿದೆ. ನಿಮ್ಮ ಈ ಪತ್ರಿಕೆ ಮುಹಮ್ಮದ್ ಪೈಗಂಬರರ ಶಾಂತಿ ಸಂದೇಶವನ್ನು ಎಲ್ಲ ಕಡೆಯೂ ಪ್ರಸರಿಸಿ ಎಲ್ಲ ಮತಗಳ ನಡುವೆ ಸೌಹಾರ್ದವನ್ನುಂಟುಮಾಡಲಿ ಎಂದು ಹಾರೈಸುತ್ತೇನೆ.

ಮೈಸೂರು

ಬಿ ಶಾಮಸುಂದರ,
ಉಪ ಸಂಪಾದಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ.

:::::::::::::::::::::::

ಸಂಪಾದಕರಾದ ಶ್ರೀ ಮುಹಮ್ಮದ್ ಯೂಸುಫ್‌ರವರಿಗೆ,

ಸ್ನೇಹಪೂರ್ವಕ ವಂದನೆಗಳು. ನಿಮ್ಮ ಪತ್ರಿಕೆ ನಿಜವಾಗಿಯೂ ಒಳ್ಳೆಯ ಸಂದೇಶಗಳಿಂದ ತುಂಬಿದೆ. "ಅಲ್ಲಾ ಎಂಬುವ ಅವ ಬೇರಲ್ಲ, ಎಲ್ಲಪ ಬಲ್ಲವಗೆ ಜಗದಲಿ ಜಗಳವೇ ಇಲ್ಲ" ಎಂದು ನುಡಿದು ಹಿಂದೂ ಮುಸ್ಲಿಮ್ ಭಾವೈಕ್ಯತೆಗೆ ನಾಂದಿಹಾಕಿದ ಶ್ರೀ ಸಂತ ಶಿಶುನಾಳ ಷರೀಫ್ ಸಾಹೇಬರ ದಿವ್ಯ ಸಂದೇಶದಂತೆ ಯುಗರಶ್ಮಿ ಕನ್ನಡ ತಾಯಿಯ ಸಾರಸ್ವತ ಲೋಕದಲ್ಲಿ ಪರಮಾತ್ಮನ ದಿವ್ಯ ಸಂದೇಶವನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಜನತೆಗೆ ನೀಡುವಂತಾಗಲಿ. ಕರ್ನಾಟಕ ಜನತೆಗೆ ಪವಿತ್ರ ಖುರಾನಿನ ಸೂಕ್ತಿಗಳು ಸಿಗುವಂತೆ ನಿಮಗೆ ಭಗವಂತನು ಸೂಕ್ತ ಸಹಕಾರವನ್ನು ನೀಡಲಿ ಎಂಬುದೇ ನಮ್ಮ ಆಕಾಂಕ್ಷೆ.

ಕೊ. ಗ. ಅಡವೀಶಪ್ಪ,
ಸಂಪಾದಕ, "ಅಮರ ಸಂದೇಶ'' ಕನ್ನಡ ವಾರ ಪತ್ರಿಕೆ.
(ಕನ್ನಡ ಪಕ್ಷದ ಮತ್ತು ಕರ್ನಾಟಕ ಸೇವಾ ಸಮಿತಿ ಅಧ್ಯಕ್ಷ)

ತುಮಕೂರು

## ಯುಗರಶ್ಮಿ ಚಿರಾಯುವಾಗಲಿ

ಸನ್ಮಾನ್ಯ ಸಂಪಾದಕರೇ,

ತಾವು ಅಭಿಮಾನವಿಟ್ಟು ಕಳುಹಿಸಿರುವ "ಯುಗರಶ್ಮಿ"ಯ 1976ನೇ ಮಾರ್ಚ್ ಮತ್ತು ಜೂನ್ ತಿಂಗಳುಗಳ ಸಂಚಿಕೆಗಳು ತಲುಪಿದ್ದು, ಅವನ್ನು ಕಂಡೊಡನೆ ಕುತೂಹಲದಿಂದ ಪುಟಗಳನ್ನು ತಿರುವಿ ಹಾಕಿದಾಗ, ಅವುಗಳಲ್ಲಿ ಕಂಡ– ಇಂದಿನ ಜನಾಂಗಕ್ಕೆ ಉಪಯುಕ್ತವಾದ ಲೇಖನಗಳನ್ನು ಓದಿ ತುಂಬಾ ಸಂತೋಷವಾಯಿತು. ಪವಿತ್ರವಾದ ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ಹಾಗೂ ಏಸುಕ್ರಿಸ್ತರ ಬಗ್ಗೆಯು ವಿಚಾರಾತ್ಮಕ ಲೇಖನಗಳು ನಿಜವಾಗಿಯೂ ಮಾನವನ ಮೇಲೆ ಪರಿಣಾಮವನ್ನು ಬೀರುವ ಅಸ್ತ್ರಗಳಾಗಿವೆ. ಜೀವನದಲ್ಲಿ ಅಶಾಂತಿಯನ್ನೇ ಕಾಣುತ್ತಿರುವ ಇಂದಿನ ಮಾನವಕುಲಕ್ಕೆ ಏನಾದರೂ ಸ್ವಲ್ಪ ನೆಮ್ಮದಿ ದೊರಕಬೇಕಾದರೆ ಇಂತಹ "ಯುಗರಶ್ಮಿ"ಯಂತಹ ಆಧ್ಯಾತ್ಮಿಕ ಚಿಂತನೆಯನ್ನು ವೃದ್ಧಿಗೊಳಿಸುವಂತಹ ಕೃತಿರತ್ನಗಳಿಂದ ಮಾತ್ರ ಸಾಧ್ಯ.

ಜನಜೀವನದಲ್ಲಿ ಜ್ಞಾನದ ಜ್ಯೋತಿಯನ್ನು ಪ್ರಜ್ವಲಿಸಲು ಹೊರಟಿರುವ ಜಾತ್ಯಾತೀತ "ಯುಗರಶ್ಮಿ"ಗೆ ಹಾಗೂ ಲಾಭದಾಯಕ ವೃತ್ತಿ ಇದಲ್ಲವೆಂದು ತಿಳಿದಿದ್ದೂ, ಜ್ಞಾನ ಪ್ರಚಾರ ಕಾರ್ಯಕ್ಕೆ ಧೈರ್ಯದಿಂದ ಕೈಹಾಕಿರುವ ತಮಗೂ "ಅಲ್ಲಾ"ನು ಯಶಸ್ಸನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ಎಂ. ಕೆ. ಗೋಪಾಲ್ ಸಿಂಗ್,
ಸಂಪಾದಕ, "ಗಿರಿವಾರ್ತಾ"

ಚಿಕ್ಕಮಗಳೂರು

ಪ್ರಿಯರೇ,

ತಾವು ವಿಶ್ವಾಸದಿಂದ ಕಳುಹಿಸಿದ್ದ 'ಯುಗರಶ್ಮಿ'ಯ ಮೂರು ಅಮೂಲ್ಯ ಪ್ರತಿಗಳು ದೊರಕಿದುವು ಇಸ್ಲಾಮಿನ ಬಗ್ಗೆ ತಿಳಿಗನ್ನಡದಲ್ಲಿ ಇಷ್ಟೊಂದು ನಿಖರವಾಗಿ ಬರೆಯುವ ಪತ್ರಿಕೆಯೊಂದು ನನ್ನ ನೆರೆಯೂರಿನಲ್ಲಿಯೇ ಇರುವುದು, ಇದಿಷ್ಟು ದಿನ ನನಗೆ ತಿಳಿದಿರಲಿಲ್ಲ ..........

ಪುತ್ತೂರು

ಬೊಳುವಾರು ಮುಹಮ್ಮದ್ ಕುಂಞಿ.

ಮಾನ್ಯ ಸಂಪಾದಕರ ಸ॥ಕ್ಕೆ

ಇಸ್ಲಾಂ ಧರ್ಮದ ಅಭ್ಯಾಸಕ್ಕೆ ಕನ್ನಡದಲ್ಲಿ ಹೊತ್ತಿಗೆಗಳೇ ದುರ್ಲಭವೆನ್ನುವಾಗ, ಇಸ್ಲಾಮಿನ ಸತ್ಯ ಸಂದೇಶವನ್ನು ಬೀರುತ್ತ ನಿಯತಕಾಲಿಕ ಪತ್ರಿಕೆಯೊಂದು 'ಯುಗರಶ್ಮಿ'ಯಾಗಿ ಬರುತ್ತಿರುವುದು, ಕನ್ನಡ ಮಣ್ಣಲ್ಲಿ ಬೆಳೆದ ಅಸಂಖ್ಯ ಮುಸ್ಲಿಂ ಹಾಗೂ ಮುಸ್ಲಿಮೇತರ ಧರ್ಮಜಿಜ್ಞಾಸುಗಳಿಗೆ ಒಂದು ವರಪ್ರಸಾದವೇ ಎನ್ನಬೇಕು. ಈ ಅತ್ಯವಶ್ಯ ಹೆಮ್ಮೆಯ ಏಕೈಕ ಪತ್ರಿಕೆ ಉತ್ತರೋತ್ತರ ಅಭಿವೃದ್ಧಿ ಹೊಂದಲಿ ಎಂದು ಆ ಸರ್ವನಿಯಾಮಕನಲ್ಲಿ ಬೇಡುವೆ. ಅಹ್ಮದಿಯೇತರ ಮುಸ್ಲಿಮರ ಅಂಧತೆಗೂ ಇದು ರಶ್ಮಿಯಾಗಲಿ ಎಂಬುದೇ ನನ್ನ ಹಾರೈಕೆ.

............'ಯುಗರಶ್ಮಿ'ಯ ರಶ್ಮಿ ಕನ್ನಡದ ಮೂಲೆ-ಮೂಲೆಗಳನ್ನೂ ಬೆಳಗಲಿ.

ರಾಣೇಬೆನ್ನೂರು

ಬಿ. ಮುಹ್ಮದ್ ಶಹಾಬುದ್ದೀನ್.

ಅಹ್ಮದಿಯಾ ವಾರ್ತೆಗಳು

# ಖಲೀಫತುಲ್ ಮಸೀಹ್ ಅಮೇರಿಕದಲ್ಲಿ

ಅಹ್ಮದಿಯಾ ಸಂಘಟನೆಯ ಈಗಿನ ಖಲೀಫ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೆಬರು ಇತ್ತೀಚೆಗೆ ಅಮೇರಿಕದ ಪರ್ಯಟನೆಯನ್ನು ನಡೆಸಿದರು.

ಜುಲಾಯಿ 21ನೇ ದಿನಾಂಕದಂದು ಅವರು ಲಂಡನ್ ತಲುಪಿದರು. ಮೂರು ದಿನಗಳ ನಂತರ 24ನೇ ದಿನಾಂಕದಂದು ಅಮೇರಿಕಕ್ಕೆ ಹೊರಟರು. ಯು. ಎಸ್. ಎ. ಮತ್ತು ಕೆನಡಾದಲ್ಲಿ ಮೂರು ವಾರಗಳ ಪರ್ಯಟನೆ ನಡೆಸಿದರು. ಅಮೇರಿಕದ ಪ್ರವಾಸ ಮುಗಿಸಿ ಯುರೋಪಿಗೆ ಹಿಂತಿರುಗಿದ ನಂತರ ಆಗಸ್ಟ್ 20ನೇ ತಾರೀಕಿನಂದು ಹಝ್ರತ್ ಸಾಹೆಬರು ಸ್ವೀಡನಿನ ಗೋಟನ್‌ಬರ್ಗ್‌ನಲ್ಲಿ ಹೊಸದಾಗಿ ನಿರ್ಮಿಸಿದ ಮಸೀದಿಯ ಉದ್ಘಾಟನೆಯನ್ನು ನೆರವೇರಿಸಿದರು. ಎರಡು ವಾರಗಳ ಬಳಿಕ ಅವರು ಲಂಡನಿಗೆ ಮರಳಿಬರುವರು.

ಹಝ್ರತ್ ಖಲೀಫತುಲ್ ಮಸೀಹರ ಅಮೇರಿಕದ ಯಾತ್ರೆ ಚರಿತ್ರಾರ್ಹವಾಗಿದೆ. ಇಸ್ಲಾಮಿನ ಖಲೀಫ ಅಮೇರಿಕ ಭೂಖಂಡಕ್ಕೆ ಪ್ರಯಾಣಮಾಡುವುದು ಲೋಕ ಚರಿತ್ರೆಯಲ್ಲಿ ಇದು ಮೊತ್ತಮೊದಲಾಗಿದೆ.

ಅಮೇರಿಕ ಖಂಡದಿಂದ ಪ್ರಥಮವಾಗಿ ಇಸ್ಲಾಂ ಮತವನ್ನವಲಂಬಿಸಿದ ಅಲೆಕ್ಸಾಂಡರ್ ವೆಬ್ ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಅಹ್ಮದರ ಓರ್ವ ಭಕ್ತಾನುಯಾಯಿಯಾಗಿದ್ದರೆಂಬುದು ಇಲ್ಲಿ ಸ್ಮರಣಾರ್ಹವಾಗಿದೆ.

# ಪೋಲೇಂಡಿನ 400 ಅನುಯಾಯಿಗಳ ಇಮಾಂ ಅಹ್ಮದಿಯತ್ ಸ್ವೀಕರಿಸಿದರು

ಪೋಲೇಂಡಿನ 400ರಷ್ಟು ವ್ಯಕ್ತಿಗಳನ್ನೊಳಗೊಂಡಿರುವ ಒಂದು ಮುಸ್ಲಿಂ ಜಮಾತಿನ ಇಮಾಂ ಮಹಮೂದ್ ತಾಹಾ ಬಿಗ್‌ನೀವ್ ಜುಕ್ ಅಹ್ಮದಿಯಾ ಜಮಾತಿಗೆ ಪ್ರವೇಶಿಸಿರುವುದಾಗಿ "ಲಂಡನ್ ಬುಲೆಟಿನ್" ವರದಿಮಾಡಿದೆ.

ಪೋಲೇಂಡಿಗೆ ಮಿಶನರಿಗಳು ಹೋಗಲು ಸಾಧ್ಯವಿಲ್ಲದ ಒಂದು ಪರಿಸ್ಥಿತಿಯಿದ್ದರೂ ಅಲ್ಲಿಗೆ ಒಂದು ಪ್ರತ್ಯೇಕ ವಿಧಾನದಿಂದ ಅಹ್ಮದಿಯತ್ ತಲಪಿತು. ಇಂಗ್ಲೇಂಡಿನಿಂದ ಅಹ್ಮದಿಯಾ ಸಂಘಟನೆಯು ಪ್ರಕಟಿಸುತ್ತಿರುವ "ಮುಸ್ಲಿಂ ಹೆರಾಲ್ಡ್" (Muslim Herald) ಮಾಸ ಪತ್ರಿಕೆಯ ಒಂದು ಪ್ರತಿಯು ಎರಡು ವರ್ಷಗಳ ಮೊದಲು ಹೇಗೋ ಇಮಾಂ ಜುಕ್ ಅವರಿಗೆ ಕಾಣಲೆಡೆಯಾಯಿತು. ಲಂಡನ್ ಮಸೀದಿಯ ಇಮಾಂ ಆಗಿರುವ ಮೌಲಾನಾ ಬಿ. ಎ. ರಫೀಕ್ ಸಾಹೆಬ್ ಅವರ ಹೆಸರನ್ನು ಈ ಮಾಸಪತ್ರಿಕೆಯಲ್ಲಿ ಕಂಡಾಗ ಅವರೊಡನೆ ಸಂಪರ್ಕ ಬೆಳೆಸಬೇಕೆಂದು ಇಮಾಂ ಜುಕ್ ಅವರಿಗೆ ಇಚ್ಛೆಯುಂಟಾಯಿತು. ಇಮಾಂ ಜುಕ್ ಅವರ ಜಿಜ್ಞಾಸೆ ವರ್ಧಿಸುತ್ತಾ ಬಂದು ಅವರು ಇಮಾಂ ರಫೀಕ್ ಸಾಹೆಬರನ್ನು ನೇರವಾಗಿ ಕಂಡು ಮಾತನಾಡಲು ಅಪೇಕ್ಷಿಸುತ್ತಾ ಪೋಲೇಂಡಿನ ರಾಜಧಾನಿಯಾದ ವಾರ್‌ಸಾಕ್ಕೆ ಆಮಂತ್ರಿಸಿದರು.

ಈ ಆಮಂತ್ರಣ ಪ್ರಕಾರ 1976ರ ಮೇ 20ಕ್ಕೆ ಇಮಾಂ ರಫೀಕ್ ಪೋಲೇಂಡಿಗೆ ತೆರಳಿದರು. ವಾರ್‌ಸಾದಲ್ಲಿ ಅವರಿಗೆ ಅನೇಕ ಮುಸ್ಲಿಮರನ್ನು ಭೇಟಿಯಾಗಲು ಸಾಧ್ಯವಾಯಿತು. ಅಹ್ಮದಿಯಾ ಸಂಘಟನೆಯ ಕುರಿತಿರುವ ಅನೇಕ ಸಂಶಯಗಳಿಗೆ ಇಮಾಂ ರಫೀಕ್ ಅವರು ವಿವರವಾಗಿ ಉತ್ತರಿಸಿದರು. ದೀರ್ಘವಾದ ವಿವಾದ ಸಂವಾದಗಳ ನಂತರ ಅಲ್ಲಾಹುವಿನ ಅನುಗ್ರಹದಿಂದ ಇಮಾಂ ರಫೀಕ್ ಲಂಡನಿಗೆ ಮರಳುವ ಮೊದಲೇ ಇಮಾಂ ಜುಕ್ ಅಹ್ಮದಿಯಾ ಜಮಾತಿನಲ್ಲಿ ಪ್ರವೇಶಿಸಿದರು.

ಪೋಲೇಂಡಿನ 6 ಇಮಾಂಗಳಲ್ಲಿ ಒಬ್ಬರಾಗಿರುವರು ಇಮಾಂ ಜುಕ್. ವಾರ್‌ಸಾದ 400ರಷ್ಟು ಅನುಯಾಯಿಗಳಿರುವ ಮುಸ್ಲಿಂ ಸಮೂಹದ ನಾಯಕ. ಅವರಿಗೆ 34 ವರ್ಷ ಪ್ರಾಯ; ಉತ್ತಮ ಬರಹಗಾರ.

ವಾರ್ಸಾದ ವಾರ್ತಾ ಪತ್ರಿಕೆಗಳಲ್ಲಿ ಇವರ ಲೇಖನಗಳು ಪ್ರಕಟಿಸಲ್ಪಡುತ್ತಿವೆ. ಒಳ್ಳೆಯ ಸ್ವಾಧೀನತೆಯಿರುವ ವ್ಯಕ್ತಿಯಾಗಿರುವರು ಇವರು.

ಇಸ್ಲಾಂ ಮತ ಸಾಹಿತ್ಯದ ಕುರಿತು ವಾರ್ಸಾದಲ್ಲಿ ತಾನು ಒಂದು ಪ್ರದರ್ಶನವನ್ನು ಏರ್ಪಡಿಸಲು ಶ್ರಮಿಸುತ್ತಿರುವುದಾಗಿ ಇಮಾಂ ರಫೀಕ್‌ರವರಿಗೆ ಬರೆದ ಒಂದು ಪತ್ರದಲ್ಲಿ ಅವರು ತಿಳಿಸಿರುವರು. ಬೋಕೋನಿಕಿ ಕೌಸಿನಿಯೊನಿ ಎಂಬಲ್ಲಿ ಇಸ್ಲಾಮಿನ 300ನೇ ವಾರ್ಷಿಕ ಸಮ್ಮೇಳನವನ್ನು ಆಚರಿಸಲು ಸೇರಲಿರುವ ಶಾಸ್ತ್ರೀಯ ಸಿಂಪೋಸಿಯಂನಲ್ಲಿ ತಾನು ಭಾಷಣ ಮಾಡಲಿರುವೆನೆಂದೂ ಅವರು ತಿಳಿಸಿರುವರು. ಪೋಲೇಂಡಿನ ಅನೇಕ ಪೌರ್ವಾತ್ಯ ವಿದ್ವಾಂಸರೂ ಅದರಲ್ಲಿ ಭಾಗವಹಿಸಲಿರುವರು.

# ನೈಜೀರಿಯದಲ್ಲಿ ಅಹ್ಮದಿಯಾ ಸೆಕೆಂಡರಿ ಸ್ಕೂಲ್

ಅಹ್ಮದಿಯಾ ಸಂಘಟನೆಯ ವತಿಯಿಂದ ನೈಜೀರಿಯದಲ್ಲಿ ಹೊಸದಾಗಿ ನಿರ್ಮಿಸಲು ತೀರ್ಮಾನಿಸಿರುವ ಎರಡು ಸೆಕೆಂಡರಿ ಶಾಲೆಗಳಲ್ಲಿ ಒಂದರ ಶಿಲಾನ್ಯಾಸವನ್ನು ನೈಜೀರಿಯದ ಅಹ್ಮದಿಯಾ ಮಿಶನರಿ ಮೌಲಾನಾ ಮುಹಮ್ಮದ್ ಅಜ್ಮಲ್ ಶಾಹಿದ್ ಅವರು ಉಮ್ಮೈಶ್ ಎಂಬ ಸ್ಥಳದಲ್ಲಿ ಮೇ 23ಕ್ಕೆ ನಿರ್ವಹಿಸಿದರು. ಇನ್ನೊಂದು ಶಾಲೆಯನ್ನು ಉಗ್‌ಬಾಗಿಯಲ್ಲಿ ನಿರ್ಮಿಸಲು ತೀರ್ಮಾನಿಸಲಾಗಿದೆ.

ಉಮ್ಮೈಶ್ ಎಂಬುದು ಪ್ಲೋಟಿಯಾನಾ ಸ್ಟೇಟಿನಲ್ಲಿರುವ ಒಂದು ಗ್ರಾಮವಾಗಿದೆ. ನೈಜೀರಿಯದ ಅತ್ಯಂತ ಹಿಂದುಳಿದಿರುವ ಈ ಗ್ರಾಮದಲ್ಲಿ ಒಂದು ವಿದ್ಯಾಸಂಸ್ಥೆಯನ್ನು ಸ್ಥಾಪಿಸಲು ಅಹ್ಮದಿಯಾ ಸಂಘಟನೆಯಲ್ಲದೆ ಮತ್ತಾವ ಸಂಘವೂ ಮುಂದೆ ಬಂದಿಲ್ಲ. ಮುಸ್ಲಿಮರು ಬಹುಸಂಖ್ಯಾತರಿರುವ ಈ ಗ್ರಾಮದಲ್ಲಿ ಅಲ್ಲಿನ ಜನರನ್ನು ವಿದ್ಯಾಸಂಪನ್ನರನ್ನಾಗಿ ಮಾಡಲು ಕೈಗೊಂಡ ಎಲ್ಲಾ ಶ್ರಮಗಳೂ ವಿಫಲಗೊಂಡಿದ್ದವು. ಅಲ್ಲಿನ ಪ್ರಾದೇಶಿಕ ಅಧಿಕೃತರು ಇದರ ಕುರಿತು ಹಲವು ಸಂಘಗಳೊಡನೆ ವಿಚಾರಿಸಿದ್ದರೂ ಏನೂ ಪ್ರಯೋಜನವಾಗಲಿಲ್ಲ. ಕೊನೆಗೆ ಒಂದು ತಾತ್ಕಾಲಿಕ ಕಟ್ಟಡದಲ್ಲಿ ಅಹ್ಮದಿಯಾ ಸಂಘಟನೆಯ ವತಿಯಿಂದ ಸೆಕೆಂಡರಿ ಶಾಲೆಯು ಪ್ರಾರಂಭವಾಯಿತು. 90 ಚದರ ಮೈಲು ಪ್ರದೇಶದಲ್ಲಿ ಎಲ್ಲಿಯೂ ಮತ್ತೊಂದು ಶಾಲೆಯಾಗಲಿ ವಿದ್ಯಾಸಂಸ್ಥೆಯಾಗಲಿ ಇಲ್ಲ.

ತಾತ್ಕಾಲಿಕ ಕಟ್ಟಡದಲ್ಲಿ ಶಾಲೆಯು ಆರಂಭಗೊಂಡ ನಂತರ ಮೇಲಿಂದ ಮೇಲೆ ವಿದ್ಯಾರ್ಥಿಗಳು ಅಧಿಕಗೊಳ್ಳುತ್ತಿರುವುದರಿಂದ ಒಂದು ಪ್ರತ್ಯೇಕ ಕಟ್ಟಡವನ್ನು ಹೊಸದಾಗಿ ನಿರ್ಮಿಸಲು ಅಹ್ಮದಿಯಾ ಖಲೀಫ ಅನುಮತಿಯಿತ್ತರು. ಇದರ ಶಿಲಾನ್ಯಾಸ ಸಭೆಯ ಅಧ್ಯಕ್ಷತೆಯನ್ನು ಅಲ್ಲಿನ ಡಿವಿಜನಲ್ ಚೀಫ್ ವಹಿಸಿದರು.

ನೈಜೀರಿಯದ ಈ ಹಿಂದುಳಿದ ಗ್ರಾಮದ ಜನರ ವಿದ್ಯಾಭ್ಯಾಸ ಪರವೂ ಸಾಂಸ್ಕೃತಿಕವೂ ಆದ ಅಭಿವೃದ್ಧಿಗೆ ಈ ಶಾಲೆಯು ಸಹಾಯಕವಾಗಲಿ ಎಂದೂ ಮುಹಮ್ಮದ್ ಪೈಗಂಬರರ ಮಹತ್ವವನ್ನು ಘೋಷಿಸುವ ಒಂದು ಮಹಾ ವಿದ್ಯಾಭ್ಯಾಸ ಕೇಂದ್ರವಾಗಿ ಈ ಶಾಲೆಯು ಮಾರ್ಪಡಲಿ ಎಂದೂ ಮೌಲಾನಾ ಮುಹಮ್ಮದ್ ಅಜ್ಮಲ್ ಶಾಹಿದ್ ತನ್ನ ಭಾಷಣ ವೇಳೆಯಲ್ಲಿ ಆಶಂಸಿಸಿದರು.

ಈ ಪ್ರದೇಶದಲ್ಲಿ ಒಂದು ಆಸ್ಪತ್ರೆಯನ್ನು ಸ್ಥಾಪಿಸಲು ಉಮ್ಮೈಶ್ ಚೀಫ್ ಅಹ್ಮದಿಯಾ ಮಿಶನರಿಯೊಡನೆ ಅಭ್ಯರ್ಥಿಸಿದರು. ಅಹ್ಮದಿಯಾ ಸಂಘಟನೆಯ ಸೇವೆಗಳನ್ನು ಅವರು ಮುಕ್ತಕಂಠವಾಗಿ ಪ್ರಶಂಸಿಸಿ, ಶಾಲೆಗಳನ್ನೂ, ಆಸ್ಪತ್ರೆಗಳನ್ನೂ ಸ್ಥಾಪಿಸುವ ಕಾರ್ಯದಲ್ಲಿ ಅಹ್ಮದಿಯಾ ಸಂಘಟನೆಗೆ ಜನರಿಂದಲೂ ಸರಕಾರದಿಂದಲೂ ಪರಮಾವಧಿ ಸಹಾಯ ಸಹಕಾರಗಳು ಲಭಿಸುವುದೆಂದೂ ತಿಳಿಸಿದರು.

---

## ನೈಜೀರಿಯಾದ ಮಿನಾದಲ್ಲಿ ಅಹ್ಮದಿಯಾ ಮಸೀದಿ

ನೈಜೀರಿಯಾದ ರಾಜಧಾನಿಯಾದ ಮಿನಾದಲ್ಲಿ ಕಳೆದ ಜುಲಾಯಿ 10ನೇ ತಾರೀಕಿನಂದು ಅಹ್ಮದಿಯಾ ಸಂಘಟನೆಯ ಒಂದು ಮಸೀದಿಯು ಉದ್ಘಾಟಿಸಲ್ಪಟ್ಟಿತು. ಈ ಸಮಾರಂಭದಲ್ಲಿ ಅಹ್ಮದಿಯಾ ಮಿಶನರಿಗಳ ಸಹಿತ ಹಲವಾರು ಅಹ್ಮದಿಯರು ಪಾಲುಗೊಂಡರು. ಈ ಸಂದರ್ಭದಲ್ಲಿ ನೈಜೀರಿಯಾದ ಉತ್ತರಭಾಗದ ಸಂಸ್ಥಾನಗಳಲ್ಲಿರುವ ಜಮಾಅತುಗಳ ಸಮ್ಮೇಳನ ಸಹ ಜರಗಿತು. ಮುಂದಿನ ವರ್ಷದಲ್ಲಿ ಇನ್ನೂ ಎರಡು ಸ್ಥಳಗಳಲ್ಲಿ ಮಸೀದಿಗಳನ್ನು ನಿರ್ಮಿಸಲು ನಿರ್ಣಯಿಸಲಾಯಿತು.

(ಹಿಂಬದಿ ಹೊರ ಕವಚದ ಒಳಗಿನ ಪುಟ ನೋಡಿರಿ)

**ಪುಸ್ತಕ ವಿಭಾಗ**

# ಯೇಸು ಕ್ರಿಸ್ತರು ಮೃತರಾದುದು ಎಲ್ಲಿ?

ಲೇಖಕ: ಮೌಲಾನ ಜಲಾಲುದ್ದೀನ್ ಶಮ್ಸ್, ಲಂಡನ್.

ಭಾಷಾಂತರ: ಅಬೂ ತಾಹಿರ್.

## ಅಧ್ಯಾಯ—8

### ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೃತರಾದರೆಂದೂ ಅನಂತರ ಪುನರುತ್ಥಾನಗೊಂಡು ಸ್ವರ್ಗಾರೋಹಣ ಗೈದರೆಂದೂ ನಂಬಿಕೆ ಉಂಟಾಗಲು ಕಾರಣವೇನು?

ನಾವು ಹಿಂದಿನ ಅಧ್ಯಾಯಗಳಲ್ಲಿ ವಿವರಿಸಿದ ಪ್ರಕಾರ ಯೇಸುಕ್ರಿಸ್ತರು ಶಿಲುಬೆಯಿಂದ ಇಳಿಸಿದಾಗ ಜೀವದಿಂದ ಇದ್ದುದು ಸರಿಯಾಗಿದ್ದರೆ ಆದಿಕಾಲದ ಕ್ರೈಸ್ತರಾದ ಸಂತಪೌಲ ಮತ್ತು ಸಂತ ಪೇತ್ರರೇ ಮೊದಲಾದವರು, ಅವರು ಶಿಲುಬೆಯಲ್ಲಿ ಮೃತರಾದರೆಂದು ನಂಬಲು ಕಾರಣವೇನು? ಅವರ ಪತ್ರಿಕೆಗಳಲ್ಲಿ ಯೇಸುಕ್ರಿಸ್ತರು ಶಿಲುಬೆಯಲ್ಲಿ ಮರಣ ಹೊಂದಿದುದು ಮತ್ತು ಪುನರುತ್ಥಾನಗೊಂಡುದುದು (ಈಗಿನ ಹೆಚ್ಚಿನ ಕ್ರೈಸ್ತ ಪಂಥದವರ ವಿಶ್ವಾಸದಂತೆ) ಪ್ರಧಾನ ವಿಷಯವಾಗಿ ನಿರೂಪಿಸಿರುವುದನ್ನು ಕಾಣಬಹುದು.

ಈ ವಿಷಯದಲ್ಲಿ ಸವಿಸ್ತಾರವಾಗಿ ಬರೆಯುವುದು ಆವಶ್ಯವಾಗಿದೆ. ಯೇಸುಕ್ರಿಸ್ತರು ಬಂಧಿಸಲ್ಪಟ್ಟಾಗ ಶಿಷ್ಯರು ಅವರನ್ನು ತ್ಯಜಿಸಿ ಗಾಬರಿಗೊಂಡು ಓಡಿಹೋದರು. ಆದುದರಿಂದ ಯೇಸುಕ್ರಿಸ್ತರು ಶಿಲುಬೆಯಿಂದ ಇಳಿಸಲ್ಪಟ್ಟಾಗಾಗಲೀ ಶವಕುಟೀರದಿಂದ ಹೊರಬಂದಾಗಾಗಲೀ ಪ್ರೇಕ್ಷಕರಾಗಿ ಅವರು ಸಾಕ್ಷ್ಯವಹಿಸಲಿಲ್ಲ. ಪುನರ್ಬಂಧನವನ್ನು ಹೆದರಿ ಯೇಸುಕ್ರಿಸ್ತರು ಬಹಿರಂಗವಾಗಿ ಬರದಿದ್ದರೂ ಶಿಷ್ಯರನ್ನು ಅವರು ಗುಪ್ತವಾಗಿ ಅಥವಾ ದೂರ ದೂರ ಸ್ಥಳಗಳಲ್ಲಿ ಭೇಟಿಯಾದರು. ಯೇಸುಕ್ರಿಸ್ತರು ಶಿಷ್ಯರನ್ನು ಪುನಃ ಭೇಟಿಯಾಗದಿರುತ್ತಿದ್ದರೆ ಮತ್ತು ತಾನು ರಕ್ಷಿತನಾದ ಸಂಗತಿ ಶಿಷ್ಯರಿಗೆ ತಿಳಿಸದಿರುತ್ತಿದ್ದರೆ ಅವರು ಮೆಸ್ಸಾಯರೆಂದು ಶಿಷ್ಯರಿಗಿದ್ದ ವಿಶ್ವಾಸ ಬಲಹೀನಗೊಂಡು ತಾವು ಯಾರನ್ನು ಯಹೂದ್ಯರಿಗೆ ವಾಗ್ದಾನ ಮಾಡಲ್ಪಟ್ಟ ಮೆಸ್ಸಾಯರೆಂದು ತಿಳಿದಿದ್ದರೋ ಆತನು "ಶಾಪಗ್ರಸ್ತ"ವಾದ ಮರಣ ಹೊಂದಿದನೆಂದು ಭಾವಿಸಿ ಆತನಲ್ಲಿ ವಿಶ್ವಾಸ ಕಳೆದುಕೊಳ್ಳುತ್ತಿದ್ದರು. ಹಾಗೆ ಅವರ ಅಲುಗಾಡುತ್ತಿರುವ ವಿಶ್ವಾಸವನ್ನು ಬಲಗೊಳಿಸಲು ಯೇಸುಕ್ರಿಸ್ತರು ಶಿಷ್ಯರಿಗೆ ಕಾಣಿಸಿಕೊಂಡರು. ಅವರು ಮೃತ್ಯುವಿನ ದವಡೆಯಿಂದ ಸುರಕ್ಷಿತರಾದುದು ಅವರ ಪರವಾಗಿ ಅವರ ಸತ್ಯತೆಯನ್ನು ವ್ಯಕ್ತಪಡಿಸುವ ಯೋಗ್ಯ ಆಧಾರವಾಗಿದ್ದಿತು. ಅದು ಶಿಷ್ಯರ ವಿಶ್ವಾಸವನ್ನು ಬಲಗೊಳಿಸಿತು. ಯೋಹಾನನು ಹೇಳುವಂತೆ ಯೇಸುಕ್ರಿಸ್ತರು ಟೈಬೇರಿಯಸ್ ಸಮುದ್ರದ ಸಮೀಪ ಶಿಷ್ಯರನ್ನು ಬೀಳ್ಕೊಟ್ಟ ನಂತರ ಅವರು ದೃಢವಿಶ್ವಾಸದಿಂದಿದ್ದರು. ಶಿಷ್ಯರು ಯಹೂದ್ಯರಿಗೆ ಯೇಸುಕ್ರಿಸ್ತರ ಉಪದೇಶಗಳನ್ನು ತಲುಪಿಸಲು ಯತ್ನಿಸಿದಾಗ ಯಹೂದ್ಯರು ಅವರನ್ನು ಹಿಂಸಿಸಿದರು. ಕೆಲವರನ್ನು ಒಡನೆ ವಧಿಸಿದರು. ಕೆಲವರನ್ನು ಕಲ್ಲು ಹೊಡೆದು ಕೊಂದರು. ಯಹೂದ್ಯರು ಅವರ ವಾದಗಳನ್ನು ತಿರಸ್ಕರಿಸಿ, ಅವರನ್ನು ಬೈದು, ಅವರನ್ನು ಹಾಸ್ಯಮಾಡುತ್ತಾ ಅವರ

ಮೆಸ್ಸಾಯನು ಶಾಪಗ್ರಸ್ತ ಮರಣ ಹೊಂದಿರುವನೆಂಬ ಸಂಗತಿ ಒತ್ತಿ ಹೇಳುತ್ತಿದ್ದರು. ಆದರೆ ಯೇಸುಕ್ರಿಸ್ತರ ಶಿಷ್ಯರು ಅವರು ಸುರಕ್ಷಿತರಾಗಿ ಓಡಿಹೋದ ಸಂಗತಿ, ಯಹೂದಿಗಳ ಹಿಂಸೆಯನ್ನು ಭಯಪಟ್ಟು ಹೇಳಲು ಹಿಂಜರಿದು ಆ ಸಂಗತಿಯನ್ನು ಗುಪ್ತವಾಗಿಟ್ಟು ಯೇಸುಕ್ರಿಸ್ತರು ಸತ್ತವರಿಂದ ಎದ್ದರೆಂದೂ ಅನಂತರ ಸ್ವರ್ಗವನ್ನೇರಿದರೆಂದೂ ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾದರೆಂದು ಮೊದಲೇ ಪ್ರಚಾರಗೊಳಿಸಿದ್ದ ಯಹೂದ್ಯರಿಗೆ ಉತ್ತರರೂಪವಾಗಿ ಹೇಳತೊಡಗಿದರು. ಸ್ವರ್ಗಕ್ಕೆ ಹೋದರೆಂಬುದರಿಂದ ಅವರ ಉದ್ದೇಶ "ಸುರಕ್ಷಿತ ಸ್ಥಳಕ್ಕೆ ಹೋದರು'' ಎಂದಾಗಿತ್ತು.*

ಆದರೆ ಶಿಷ್ಯರ ಉತ್ತರ ಯಹೂದ್ಯರನ್ನು ತೃಪ್ತಿಗೊಳಿಸಲಿಲ್ಲ. ಅವರು ಯೇಸುಕ್ರಿಸ್ತರು ಸ್ವರ್ಗವನ್ನೇರುವುದನ್ನು ಕಂಡಿರಲೂ ಇಲ್ಲ. ಆದುದರಿಂದ ಅವರು ಯೇಸುಕ್ರಿಸ್ತರು "ಶಾಪಗ್ರಸ್ತ ಮರಣ''ವನ್ನನುಭವಿಸಿದರೆಂದು ನಂಬಿದರು.

ಮಾತ್ರವಲ್ಲ, ಶಿಷ್ಯರ ಉಪದೇಶ ಯೇಸುಕ್ರಿಸ್ತರ ಆಜ್ಞೆ ಪ್ರಕಾರ ಯಹೂದ್ಯರನ್ನು ಉದ್ದೇಶಿಸಿ ಮಾತ್ರವಾಗಿತ್ತು. ಯಹೂದ್ಯರನ್ನು ತನ್ನ ಉಪದೇಶ ಸಮ್ಮತಿಸುವಂತೆ ಮಾಡಲು ಯೇಸುಕ್ರಿಸ್ತರು ಶಕ್ತರಾಗಿರಲಿಲ್ಲ. ಯೇಸುಕ್ರಿಸ್ತರ ಶಿಷ್ಯರು ಕೆಳತರಗತಿಯ ವಂಶದವರಾದುದರಿಂದ ಯಹೂದ್ಯರಿಗೆ ಅವರನ್ನು ನಂಬುವುದು ಇನ್ನೂ ಕಷ್ಟವಾಯಿತು. ಯಹೂದ್ಯರಲ್ಲದ ಜನಾಂಗಗಳಿಗೆ ಯೇಸುಕ್ರಿಸ್ತರ ಸಂದೇಶವನ್ನು ತಲುಪಿಸುವುದು ಶಿಷ್ಯರಿಗೆ ಸಾಧ್ಯವಿರಲಿಲ್ಲ. ಏಕೆಂದರೆ, ಮೊದನೆಯದಾಗಿ ಇತರ ಜನಾಂಗದವರು ಮೋಶೆಯ ನಿಯಮಗಳನ್ನು ಸ್ವೀಕರಿಸಲಾರರೆಂದು ಶಿಷ್ಯರಿಗೆ ತಿಳಿದಿದ್ದಿತು. ಎರಡನೆಯದಾಗಿ, ಯಹೂದ್ಯರಲ್ಲದವರಿಗೆ ಉಪದೇಶಿಸುವುದನ್ನು ಯೇಸುಕ್ರಿಸ್ತರು ನಿಷೇಧಿಸಿದ್ದರು. ಈ ನಿರಾಶೆಯ ಪರಿಸ್ಥಿತಿಯಲ್ಲಿ ಸೌಲ ಎಂಬ ವ್ಯಕ್ತಿ (ಅನಂತರ ಪೌಲನೆಂದು ಈತ ಪ್ರಸಿದ್ಧನಾದ.) ಜನರ ಮುಂದೆ ಬಂದು ತಾನು ಅಪೋಸ್ತಲರಲ್ಲಿ ಒಬ್ಬನಲ್ಲವಾದರೂ ತನ್ನ ದರ್ಶನವನ್ನು ಆಸ್ಪದವಾಗಿರಿಸಿ ತಾನು ಸಹ ಅಪೋಸ್ತಲನೆಂದು ಘೋಷಿಸಿದನು. ಈ ರೀತಿ ಘೋಷಿಸದೆ ತನಗೆ ವಿಜಯ ಸಿಗಲಾರದೆಂದು ಆತನು ಗ್ರಹಿಸಿದ್ದನು.

## ಸಂತ ಪೌಲನ ದರ್ಶನ

ಪೌಲನ ದರ್ಶನ "ಅಪೋಸ್ತಲರ ಕೃತ್ಯಗಳು'' ಅಧ್ಯಾಯ 9, 22 ಮತ್ತು 26ರಲ್ಲಿ ವಿವರಿಸಲಾಗಿದೆ. ಈ ವಿವರಣೆಗಳನ್ನು ಗಮನವಿಟ್ಟು ಓದಿದರೆ ಅವುಗಳಲ್ಲಿ ಪರಸ್ಪರ ವಿರುದ್ಧ ನಿರೂಪಣೆಗಳನ್ನು ಕಾಣಬಹುದು.

1. ಉದಾಹರಣೆಗೆ ಅಧ್ಯಾಯ 9ರಲ್ಲಿ ವಚನ 3–7 ನೋಡಿರಿ: ''ಆಕಾಶದೊಳಗಿಂದ ಒಂದು ಬೆಳಕು ಅವನ ಸುತ್ತಲೂ ಮಿಂಚಿತು. ಅವನು ನೆಲಕ್ಕೆ ಬಿದ್ದನು. ಒಂದು ಶಬ್ದ ಆತನಿಗೆ ಕೇಳಿಸಿತು. ''ಸೌಲನೇ, ಸೌಲನೇ ... .... ಅವನ ಜೊತೆ ಪ್ರಯಾಣಮಾಡುತ್ತಿದ್ದವರು ಧ್ವನಿಯನ್ನು ಮಾತ್ರ ಕೇಳಿ ಯಾರನ್ನೂ ಕಾಣದೆ ಮೂಕರಂತೆ ನಿಂತರು.'' ಆದರೆ 22: 9ರಲ್ಲಿ ಈ ಸಂಭವವನ್ನು ವಿವರಿಸುತ್ತಾ "ನನ್ನ ಜೊತೆ ಇದ್ದವರು ಬೆಳಕನ್ನು ಕಂಡರೇ ಹೊರತು ನನ್ನ ಸಂಗಡ ಮಾತಾಡಿದವನ ಶಬ್ದವನ್ನು ಕೇಳಲಿಲ್ಲ'' ಎಂದು ಬರೆಯಲಾಗಿದೆ.

2. ಅಧ್ಯಾಯ 9 ಮತ್ತು 22ರಲ್ಲಿ ದೊಡ್ಡ ಪ್ರಕಾಶ ಆತನ ಸುತ್ತಲೂ ಬೆಳಕು ನೀಡಿತೆಂದು ಬರೆಯಲಾಗಿದೆ. ಅಧ್ಯಾಯ 26ರಲ್ಲಿ ಈ ಪ್ರಕಾಶ ಆತನ ಮತ್ತು ಸಂಗಡಿಗರ ಸುತ್ತಲೂ ಆವರಿಸಿದುದಾಗಿ ಬರೆದಿದೆ.

3. ಅಧ್ಯಾಯ 9ರಲ್ಲಿ ಆತನು ಮಾತ್ರ ನೆಲಕ್ಕೆ ಬಿದ್ದುದಾಗಿಯೂ ಇತರರು ಮೌನವಾಗಿ ನಿಂತುದಾಗಿಯೂ ಬರೆದಿದೆ. ಆದರೆ ಅಧ್ಯಾಯ 26 ವಚನ 14ರಲ್ಲಿ

* "ಸ್ವರ್ಗ"ವೆಂಬ ಪದ ಎತ್ತರವಾದ ಸ್ಥಳದ ಕುರಿತು ಪ್ರಯೋಗಿಸಲ್ಪಡುತ್ತಿತ್ತು. ವಿಮೋಚನಕಾಂಡ 19:20ರಲ್ಲಿ ದೇವರು ಸೀನಾಯಿ ಪರ್ವತದ ತುದಿಗೆ ಬಂದು ಮೋಶೆಯೊಡನೆ ಮಾತಾಡಿದುದಾಗಿ ಬರೆದಿದೆ 20:22ರಲ್ಲಿ "ಸ್ವರ್ಗ" ಅಥವಾ ಆಕಾಶ ಎಂಬ ಪದ ಈ ಪರ್ವತದ ತುದಿಯ ಬದಲಾಗಿ ಉಪಯೋಗಿಸಲ್ಪಟ್ಟಿದೆ "ಮೋಶೆ ಸ್ವರ್ಗವನ್ನೇರುವ ಮೊದಲು ತಾನು 41ನೇ ದಿನದ ಮಧ್ಯಾಹ್ನ ಇಳಿಯುವುದಾಗಿ ಹೇಳಿದ್ದರು" ಎಂದು ಜ್ಯೂಯಿಷ್ ಎನ್‌ಸೈಕ್ಲೋಪೀಡಿಯಾದಲ್ಲಿ "Moses" ಎಂಬ ಶಬ್ದದ ವಿವರಣೆಯಲ್ಲಿ ಬರೆಯಲಾಗಿದೆ ವಿಮೋಚನಕಾಂಡ 24:18ರಲ್ಲಿ ವ್ಯಕ್ತವಾಗಿ ಮೋಶೆ ಮೋಡದೊಳಗೆ ಪ್ರವೇಶಿಸಿ ಪರ್ವತವನ್ನೇರಿದರೆಂದೂ ಅಲ್ಲಿ 40 ರಾತ್ರಿ ಮತ್ತು 40 ಹಗಲು ಇದ್ದರೆಂದು ಬರೆದಿದೆ ಇದೇ ರೀತಿ ಯೇಸುಕ್ರಿಸ್ತರು ಓಲಿವ್ ಪರ್ವತವನ್ನೇರಿದಾಗ ಮೋಡವು ಅವರನ್ನು ಶಿಷ್ಯರಿಂದ ಮರೆಯಾಗಿಸಿತು. ಶಿಷ್ಯರು ಅವರು ಪರ್ವತವನ್ನೇರುವುದನ್ನು ಕಂಡುದರಿಂದ ಮೋಶೆಯ ಕುರಿತು ಉಪಯೋಗಿಸಿದ ಆಗ ಪ್ರಾಬಲ್ಯದಲ್ಲಿದ್ದ ನುಡಿಗಟ್ಟಿನ ಪ್ರಕಾರ ಯೇಸು ಕ್ರಿಸ್ತರು ಸಹ ಸ್ವರ್ಗಾರೋಹಣ ಮಾಡಿದರೆಂದು ಹೇಳತೊಡಗಿದರು.

ಆತನು ಮತ್ತು ಜೊತೆಗಾರರೆಲ್ಲಾ ನೆಲಕ್ಕೆ ಬಿದ್ದುದಾಗಿ ಬರೆಯಲಾಗಿದೆ.

4. ಅಧ್ಯಾಯ 22ರಲ್ಲಿ ತಾನು ಏನು ಮಾಡಬೇಕೆಂದು ಸೌಲನು ಕೇಳಿದಾಗ ಯೇಸುಕ್ರಿಸ್ತರು "ನೀನೆದ್ದು ದಮಾಸ್ಕದೊಳಕ್ಕೆ ಹೋಗು, ಮಾಡುವುದಕ್ಕೆ ನಿನಗೆ ನೇಮಿಸಿರುವದೆಲ್ಲಾ ಅಲ್ಲಿ ತಿಳಿಸಲ್ಪಡುವದು'' ಎಂದು ಹೇಳಿದರೆಂದು ಬರೆದಿದೆ. ದಮಾಸ್ಕಸ್‌ನಲ್ಲಿ ಅನನೀಯ ಎಂಬೊಬ್ಬನು ಸೌಲನೊಡನೆ ಆತನು ಮಾಡಬೇಕಾದ ಕಾರ್ಯಗಳನ್ನು ವಿವರಿಸಿದನೆಂದು ಇದೇ ಅಧ್ಯಾಯದಲ್ಲಿ ಬರೆದಿದೆ. ಆದರೆ ಅಧ್ಯಾಯ 26ರಲ್ಲಿ ಮೇಲಿನ ಸಂಗತಿಗಳ ಕುರಿತು ಏನನ್ನೂ ಹೇಳಲಿಲ್ಲ. ಯೇಸುಕ್ರಿಸ್ತರು ಸ್ವತಃ ಸೌಲನು ಮಾಡಬೇಕಾದ ಸಂಗತಿಗಳನ್ನು ಸೌಲನಿಗೆ ತಿಳಿಸಿದುದಾಗಿ ಬರೆಯಲಾಗಿದೆ.

ಸೌಲನ (ಪೌಲನ) ದರ್ಶನದ ವಿವರಣೆಯಲ್ಲಿ ಕಂಡುಬರುವ ಪರಸ್ಪರ ವಿರುದ್ಧ ನಿರೂಪಣೆಗಳನ್ನು ನೋಡುವಾಗ ಈ ದರ್ಶನದ ಸತ್ಯತೆಯ ಕುರಿತು ನಾವು ಸಂಶಯಿಸುವುದು ಸ್ವಾಭಾವಿಕವಾಗಿದೆ. ಆತನು ಒಂದು ದರ್ಶನವನ್ನು ಕಂಡನೆಂದು ನಾವು ಒಪ್ಪಿದರೂ ಸಹ ಈ ದರ್ಶನ ಮಾತ್ರ ಆತನು ಅಪೋಸ್ತಲನೆಂದು ವಾದಿಸುವುದಕ್ಕೆ ಬೇಕಾದ ಅಡಿಪಾಯವನ್ನು ವಿರಚಿಸಲಾರದು. ಅದೇನೇ ಇರಲಿ ಆತನು ದಮಾಸ್ಕಸ್‌ನಲ್ಲಿ ಕ್ರಿಸ್ತಧರ್ಮ ಸ್ವೀಕರಿಸಿ ಯಹೂದ್ಯರ ದೇವಾಲಯಗಳಲ್ಲಿ ಯೇಸು ಕ್ರಿಸ್ತರು ದೇವಪುತ್ರರೆಂದು ತೀವ್ರವಾಗಿ ವಾದಿಸಿ ಯಹೂದಿಗಳನ್ನು ಉತ್ತರವಿಲ್ಲದವರಾಗಿ ಮಾಡಿದನು. ಆದರೆ ಯಹೂದಿಗಳು ಆತನನ್ನು ಕೊಲ್ಲಲು ತೀರ್ಮಾನಿಸಿದರು. (ಅಪೋಸ್ತಲರ ಕೃತ್ಯಗಳು 9:23.)

ಇದರ ಮೊದಲು ಸ್ತೇಫನನ್ನು ಯಹೂದಿಗಳು ಕಲ್ಲು ಹೊಡೆದು ಕೊಂದಾಗ ಪೌಲನು ಯಹೂದಿಗಳ ಸಮೀಪ ನಿಂತು ಈ ಕೊಲೆಗೆ ಸಮ್ಮತಿಸಿದ್ದನು. (ಅಪೋಸ್ತಲರ ಕೃತ್ಯಗಳು 22:20). ಆಗ ಕ್ರೈಸ್ತರೆಲ್ಲರ ವಿರುದ್ಧವಾಗಿ ಹಿಂಸಾಚಾರ ಯರೋಸಲೇಮಿನಲ್ಲಿ ಜಾರಿಯಲ್ಲಿದ್ದುದರಿಂದ ಅಪೋಸ್ತಲರ ಹೊರತಾಗಿ ಕ್ರೈಸ್ತರೆಲ್ಲರೂ ಯೂದಾಯ, ಸಮಾರ್ಯ ಸೀಮೆಗಳಲ್ಲಿ ಚದರಿ ಹೋದರು. (ಅಪೋಸ್ತಲರ ಕೃತ್ಯಗಳು 8:1.)

### ಸಂತ ಪೌಲ್ ಅನ್ಯ ಜಾತಿಗಳನ್ನು ಮತಾಂತರ ಗೊಳಿಸಿದುದು

ಯಹೂದಿಗಳ ಹಿಂಸಾಚಾರಗಳನ್ನು ಅನುಭವಿಸಿ, ಅವರು ಯೇಸುಕ್ರಿಸ್ತರನ್ನು ಬಲವಾಗಿ ತಿರಸ್ಕರಿಸುವುದನ್ನು ಮನಗಂಡು ಮತ್ತು ಕ್ರೈಸ್ತ ಧರ್ಮದ ನಿಧಾನ ಪ್ರಗತಿಯಲ್ಲಿ ಅತೃಪ್ತಿಗೊಂಡು, ಪೌಲನು ದಮಾಸ್ಕಸ್‌ಗೆ ದಕ್ಷಿಣಕ್ಕಿರುವ ಅರೇಬಿಯಕ್ಕೆ ಹೋಗಿ ತನ್ನ ಕಾರ್ಯವಿಧಿಗಳ ಕುರಿತು ಆಲೋಚಿಸಿದನು. (ಗಲಾತ್ಯದವರಿಗೆ 1:17).

ಆತನ ಆಲೋಚನೆಗಳು ಯೇಸುಕ್ರಿಸ್ತರಿಗೆ ಸಹ ತೋರದ ಕೆಲವು ಭಾವನೆಗಳನ್ನು ಉಂಟುಮಾಡಲು ಸಹಾಯ ಮಾಡಿದುವು. ಕ್ರೈಸ್ತ ಧರ್ಮವನ್ನು ಯಹೂದಿಯರಲ್ಲದ ಜಾತಿಯವರಿಗೆ ಉಪದೇಶಿಸಬೇಕೆಂಬ ತೀರ್ಮಾನವೇ ಈ ದೀರ್ಘಾಲೋಚನೆಯ ಪರಿಣಾಮವಾಗಿತ್ತು. ತನ್ನ ಮತಪರಿವರ್ತನದ ನಂತರ ಮೂರು ವರ್ಷ ಕಳೆದ ಮೇಲೆ ಆತ ಮೊತ್ತ ಮೊದಲು ಯೆರೋಸಲೇಮಿಗೆ ಪೇತ್ರನನ್ನು ಪರಿಚಯ ಮಾಡಿಕೊಳ್ಳಲು ಹೋದನು. (ಗಲಾತ್ಯದವರಿಗೆ 1:18).

ಆತನು ಶಿಷ್ಯ ಸಂಘದವರನ್ನು ಸೇರಲು ಪ್ರಯತ್ನಿಸಿದಾಗ ಅವರು ಮೊದಲು ಆತನನ್ನು ಸ್ವೀಕರಿಸಲಿಲ್ಲ. ಆತನು ಬಾರ್ನಬಾಸನ ಮೂಲಕ ಶಿಷ್ಯರನ್ನು ಭೇಟಿಯಾಗಿ ತನ್ನ ದರ್ಶನವನ್ನು ವಿವರಿಸಿ ಯೆರೋಸಲೇಮಿನಲ್ಲಿ ಧೈರ್ಯದಿಂದ ಪ್ರವಚನಗೈದು ತನ್ನ ನಿಷ್ಕಳಂಕತೆಯನ್ನು ವ್ಯಕ್ತಗೊಳಿಸಿದನು.

ಗಲಾತ್ಯದವರಿಗೆ ಆತನು ಬರೆದ ಪತ್ರದ ಪ್ರಕಾರ ಆತನು ಪೇತ್ರನೊಡನೆ ಹದಿನೈದು ದಿವಸ ವಾಸಿಸಿದುದಾಗಿಯೂ, ಯಾಕೋಬನ ಹೊರತು ಬೇರೆ ಯಾವ ಶಿಷ್ಯನನ್ನೂ ಕಂಡಿಲ್ಲವಾಗಿಯೂ ತಿಳಿಯುತ್ತದೆ. (ಗಲಾತ್ಯದವರಿಗೆ 1:19).

ಈ ಸಮಯದ ವರೆಗೆ, ಸ್ತೇಫನನ ವಧೆಯ ನಂತರ ಯಹೂದಿಗಳ ಹಿಂಸಾಚಾರಕ್ಕೆ ಭಯಗೊಂಡು ಯೆರೂಸಲೇಮಿನಿಂದ ಹೊರಟ ಕ್ರೈಸ್ತರು ಫೀನಿಸ್, ಸೈಪ್ರಸ್, ಅಂತಿಯೋಕ್ಯ ಮೊದಲಾದ ಊರುಗಳನ್ನು ತಲುಪಿದ್ದರು. ಇವರು ಯಹೂದಿಗಳಿಗಲ್ಲದೆ ಬೇರೆ ಯಾರಿಗೂ ಉಪದೇಶ ಮಾಡುತ್ತಿರಲಿಲ್ಲ. (ಅಪೋಸ್ತಲರ ಕೃತ್ಯಗಳು 11:19). ಇಷ್ಟರಲ್ಲೇ ಪೌಲನು ಯಹೂದಿಗಳನ್ನು ಮತಪರಿವರ್ತನಗೊಳಿಸುವ ವಿಷಯದಲ್ಲಿ ನಿರಾಶೆಗೊಂಡಿದ್ದನು. ಆದುದರಿಂದ ಆತನು ಅನ್ಯ ಜಾತಿಯವರಿಗೆ ಬಹಿರಂಗವಾಗಿ ಉಪದೇಶಿಸಲು ನಿಶ್ಚಯಿಸಿದನು. ಇದು ಯೇಸುಕ್ರಿಸ್ತರ ಉಪದೇಶಕ್ಕೆ ವಿರುದ್ಧವಾಗಿದ್ದಿತು. ಅವರು ತನ್ನ

ಶಿಷ್ಯರನ್ನು ಅನ್ಯ ಜಾತಿಯವರಿಗೆ ಉಪದೇಶಿಸುವುದನ್ನು ಕಠಿಣವಾಗಿ ಈ ಕೆಳಗಿನಂತೆ ಹೇಳಿ ತಡೆದಿದ್ದರು:

"ಅನ್ಯ ಜನಗಳ ಕಡೆಗೆ ಹೋಗಬೇಡಿರಿ, ಸಮಾರ್ಯರ ಊರೊಳಗೆ ಕಾಲಿಡಬೇಡಿರಿ. ಇವರನ್ನು ಬಿಟ್ಟು ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲನ ಮನೆತನದವರ ಬಳಿಗೆ ಹೋಗಿರಿ" (ಮತ್ತಾಯ 10:5-6). ಅಲ್ಲದೆ "ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರೆಯೇಲನ ಮನೆತನದವರ ಬಳಿಗೇ ಹೊರತು ಮತ್ತಾರ ಬಳಿಗೂ ನಾನು ಕಳುಹಿಸಲ್ಪಟ್ಟವನಲ್ಲ" ಎಂದೂ "ಮಕ್ಕಳು ತಿನ್ನುವ ರೊಟ್ಟಿಯನ್ನು ತಕ್ಕೊಂಡು ನಾಯಿಮರಿಗಳಿಗೆ ಹಾಕುವುದು ಸರಿಯಲ್ಲ" (ಮತ್ತಾಯ 15:24-26) ಎಂದೂ ಹೇಳಿರುವರು.*

ಯೇಸುಕ್ರಿಸ್ತರ ಶಿಷ್ಯರು ಪೌಲನನ್ನು ಇತರ ಜಾತಿಯವರಿಗೆ ಉಪದೇಶಿಸುವುದರಿಂದ ತಡೆದಾಗ, ಯೇಸುಕ್ರಿಸ್ತರು ಸ್ವತಃ ತನ್ನನ್ನು ದರ್ಶನದ ಮೂಲಕ ಈ ಕೆಳಗಿನಂತೆ ಆಜ್ಞಾಪಿಸಿದುದಾಗಿ ಪೌಲನು ಹೇಳಿದನು: "ನೀನು ತ್ವರೆಪಟ್ಟು ಬೇಗನೆ ಯೆರೂಸಲೇಮಿನಿಂದ ಹೊರಟು ಹೋಗು, ನನ್ನ ವಿಷಯದಲ್ಲಿ ನೀನು ಹೇಳುವ ಸಾಕ್ಷಿಯನ್ನು ಅವರು ಅಂಗೀಕರಿಸುವದಿಲ್ಲ ..... ನೀನು ಹೋಗು, ನಾನು ನಿನ್ನನ್ನು ದೂರಕ್ಕೆ ಅನ್ಯ ಜನರ ಬಳಿಗೆ ಕಳುಹಿಸುತ್ತೇನೆ" (ಅಪೋಸ್ತಲರ ಕೃತ್ಯಗಳು 22:18, 21.)

ಯೇಸುಕ್ರಿಸ್ತರ ಶಿಷ್ಯರು ತಡೆದರೂ ಪೌಲನು ಅನ್ಯ ಜಾತಿಗಳಿಗೆ ಉಪದೇಶಿಸುವುದನ್ನು ಮುಂದುವರಿಸಿ ಜಯಶಾಲಿಯಾದನು. ಕಠಿಣ ಯಾತನೆಗಳಿಗೆ ಗುರಿಯಾದ ಶಿಷ್ಯರು ಕ್ರಮೇಣ ಪೌಲನೊಡನೆ ಸಹಕರಿಸಿ ಅವರು ಯಹೂದಿಗಳಿಗೂ ಪೌಲನು ಅನ್ಯ ಜಾತಿಯವರಿಗೂ ಉಪದೇಶಿಸಲು ಒಪ್ಪಿಕೊಂಡರು.

## ನೋಶೆಯ ನ್ಯಾಯ ಪ್ರಮಾಣದ ಉಲ್ಲಂಘನೆ

ಅನ್ಯ ಜಾತಿಗಳೆಡೆಯಲ್ಲಿ ತಾನು ಜಯಗಳಿಸಬೇಕಾದರೆ ಯೇಸುಕ್ರಿಸ್ತರು ಮತ್ತು ಶಿಷ್ಯರು ಬೋಧಿಸಿ ಆಚರಿಸಿಕೊಂಡಿದ್ದ ಉಪದೇಶಗಳಲ್ಲಿ ಸೂಕ್ತ ಬದಲಾವಣೆ

---

* ಬೇರೆ ಪಲವಾರು ವಚನಗಳು ಯೇಸುಕ್ರಿಸ್ತರು ಇಸ್ರಾಯಿಲ್ ಗೋತ್ರದವರಿಗಲ್ಲದೆ ಬೇರೆ ಯಾರಿಗೂ ಕಳುಹಿಸಲ್ಪಟ್ಟಿಲ್ಲವೆಂದು ತೋರಿಸುತ್ತವೆ. ಉದಾಹರಣೆಗೆ ಯೇಸುಕ್ರಿಸ್ತರ ಮಾತೆ ಮರಿಯಳವರಿಗೆ ದೇವದೂತನು "ಆತನ ಮೂಲಪಿತನಾದ ದಾವೀದನ ಸಿಂಹಾಸನವನ್ನು ಆತನಿಗೆ (ಯೇಸುವಿಗೆ) ಕೊಡುವನು" (ಲೂಕ: 32) ಎಂದು ಹೇಳಿರುವುದನ್ನೂ "ಆತನು ಯಾಕೋಬನ ವಂಶವನ್ನು ಸದಾ ಕಾಲ ಆಳುವನು" (ಲೂಕ 1:33) ಎಂದು ಹೇಳಿರುವುದನ್ನೂ ನೋಡಬಹುದು. ಬೆತ್ಲೆಹೇಮಿನ ಕುರಿತು ಹಿಂದಿನ ಪ್ರವಾದಿಯ ಭವಿಷ್ಯವಾಣಿಯನ್ನು ಉದ್ಧರಿಸುತ್ತಾ "ಒಬ್ಬ ಅಧಿಪತಿ ನಿನ್ನೊಳಗಿಂದಲೇ ಹೊರಡುವನು, ಆತನು ತನ್ನ ಪ್ರಜೆಯಾದ ಇಸ್ರಯೇಲನ್ನು ಆಳತಕ್ಕವನು." (ಮತ್ತಾಯ 2:6) ಎಂದು ಮತ್ತಾಯನು ಬರೆದಿರುವನು. ಪರ್ವತ ಪ್ರಸಂಗವು ಯಹೂದಿಗಳನ್ನು ಮಾತ್ರ ಉದ್ದೇಶಿಸಿ ಉಪದೇಶಿಸಲಾಗಿತ್ತು. ಪಾಲೆಸ್ತೀನ್ ದೇಶದಲ್ಲಿ ಯಹೂದಿಗಳ ಜೊತೆ ಅನ್ಯಜಾತಿಯವರು ವಾಸಿಸುವುದನ್ನು ಕಂಡಿದ್ದರೂ ಯೇಸುಕ್ರಿಸ್ತರು ಅವರಿಗೆ ಉಪದೇಶಿಸಿರಲಿಲ್ಲ. ಯೇಸುಕ್ರಿಸ್ತರು ತನ್ನ ಹನ್ನೆರಡು ಶಿಷ್ಯರಿಗೆ ಭವಿಷ್ಯ ನುಡಿಯುತ್ತಾ "ಮನುಷ್ಯಕುಮಾರನು ತನ್ನ ಮಹಿಮೆಯ ಸಿಂಹಾಸನದ ಮೇಲೆ ಕುಳಿತುಕೊಳ್ಳುವಾಗ ನನ್ನನ್ನು ಹಿಂಬಾಲಿಸಿರುವ ನೀವು ಸಹ ಹನ್ನೆರಡು ಸಿಂಹಾಸನಗಳ ಮೇಲೆ ಕುಳಿತುಕೊಂಡು ಇಸ್ರಾಯೇಲಿನ ಹನ್ನೆರಡು ಕುಲಗಳಿಗೆ ನ್ಯಾಯ ತೀರಿಸುವಿರಿ" (ಮತ್ತಾಯ 19:28) ಎಂದಿರುವರು. ಪಿಲಾತನ ಕೋರ್ಟಿನಲ್ಲಿ ನಡೆದ ಯೇಸುಕ್ರಿಸ್ತರ ವಿಚಾರಣೆಯು ಸಹ ಯೇಸುಕ್ರಿಸ್ತರ ದೌತ್ಯ ಯಹೂದ್ಯರಿಗೆ ಮಾತ್ರವಾಗಿದ್ದಿತೆಂದು ರುಜುಗೊಳಿಸಿದೆ. ಪಿಲಾತನು ಅವರನ್ನು "ಯಹೂದ್ಯರ ಅರಸ" (ಮತ್ತಾಯ 27:37) ಎಂದು ಗ್ರಹಿಸಿದನಲ್ಲದೆ ಎಲ್ಲಾ ಜನಾಂಗಗಳ ರಾಜನೆಂದು ಭಾವಿಸಿರಲಿಲ್ಲ. ಪೇತ್ರನು ಅನ್ಯ ಜಾತಿಯವರಿಗೆ ಉಪದೇಶಿಸಿ ಅವರೊಡನೆ ಉಣ್ಣಲು ತೊಡಗಿದಾಗ ಸುನ್ನತಿ ಮಾಡಿದವರು ಆತನನ್ನು ಎದುರಿಸಿ ಮಾತಾಡಿದಾಗ ಆತನಿಗೆ ಯೇಸುಕ್ರಿಸ್ತರ ಯಾವುದೇ ವಚನವನ್ನು ತನ್ನ ಕಾರ್ಯಕ್ಕೆ ಆಧಾರವಾಗಿ ಕೊಡಲು ಸಾಧ್ಯವಾಗದೆ ಆತನು ತನ್ನ ದರ್ಶನವನ್ನು ಮಾತ್ರ ವಿವರಿಸಿದನು. (ಅಪೋಸ್ತಲರ ಕೃತ್ಯಗಳು – ಅಧ್ಯಾಯ 11). ಇದೆಲ್ಲಾ ನೋಡುವಾಗ ಮತ್ತಾಯನ ಸುವಾರ್ತೆಗಳಲ್ಲಿ ಬರೆದಿರುವ: "ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮದ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ" (ಮತ್ತಾಯ 28:19) ಎಂಬ ವಚನಗಳು ಅನಂತರ ಸೇರಿಸಿದುವೆಂದು ಭಾಸವಾಗುತ್ತದೆ. ಶಿಷ್ಯರು ಯಾರನ್ನೂ ಈ ಮೇಲಿನ ಮೂವರ ಹೆಸರಲ್ಲಿ ದೀಕ್ಷಾಸ್ನಾನ ಮಾಡಿಸಲಿಲ್ಲ. ಜನಾಂಗ (Nation) ಎಂದು ಪ್ರಯೋಗಿಸಿದ ಶಬ್ದಕ್ಕೆ ಕೆಲವು ವಾಕ್ಯಗಳಲ್ಲಿ ಗೋತ್ರ (Tribe) ಎಂಬ ಅರ್ಥ ಸಹ ಕೊಡಬಹುದು. ಕೆಲವು ವಚನಗಳಲ್ಲಿ ಈ ಪದವು ಯೇಸುಕ್ರಿಸ್ತರ ಎರಡನೆಯ ಬರುವಿಕೆಯನ್ನು ಸಂಬಂಧಿಸಿ ಪ್ರಯೋಗಿಸಲ್ಪಟ್ಟಿದೆ. ಅದು ಅಹ್ಮದಿಯಾ ಸಂಘದ ಸ್ಥಾಪಕರಾದ ಹಝ್ರತ್ ಅಹ್ಮದರ ಬರುವಿಕೆಯಲ್ಲಿ ಪೂರ್ತಿಗೊಂಡಿದೆ. ಇವರು ದೇವರಿಂದ ಸರ್ವಜನಾಂಗಗಳ ಮಾರ್ಗದರ್ಶನಕ್ಕಾಗಿ ಕಳುಹಿಸಲ್ಪಟ್ಟರು.

ಮಾಡಬೇಕೆಂದು ಪೌಲನು ನಿರ್ಧರಿಸಿದನು. ಯೆಹೂದಿಗಳ ಧಾರ್ಮಿಕ ಆಚಾರಗಳನ್ನೂ ಮೋಶೆಯ ಧರ್ಮಶಾಸ್ತ್ರದ ನಿಬಂಧನೆಗಳನ್ನೂ ಅನ್ಯಜಾತಿಯವರು ಸ್ವೀಕರಿಸಲಾರರೆಂದು ಆತನಿಗೆ ತಿಳಿದಿತ್ತು. ಆತನಿಗೆ ಸ್ವಾಭಾವಿಕವಾಗಿದ್ದ ಧೈರ್ಯದಿಂದ ಆತನು ಮೋಶೆಯ ನಿಯಮಗಳನ್ನು ಅನುಸರಿಸುವುದನ್ನು ರದ್ದುಗೊಳಿಸಿ ಆ ನಿಯಮಾನುಸಾರವಾಗಿ ನಡೆಸಬೇಕಾದ ಎಲ್ಲಾ ಧಾರ್ಮಿಕ ಕ್ರಿಯೆಗಳನ್ನು ನಿಲ್ಲಿಸಿ ಕ್ರೈಸ್ತ ಧರ್ಮಕ್ಕೆ ಒಂದು ಹೊಸ ರೂಪವನ್ನು ಕೊಟ್ಟನು. ಅದು ಯಥಾರ್ಥವಾಗಿ ರೋಮನ್ ವಿಚಾರ, ಗ್ರೀಕ್ ಸಿದ್ಧಾಂತ ಮತ್ತು ಪೌಲನ ಸ್ವಯಂ ಊಹಾಶಕ್ತಿಯ ಮಿಶ್ರಣವಾಗಿದ್ದಿತು.

ಪೌಲನು ಹೇಳುವುದನ್ನು ನೋಡಿರಿ: —

1. "ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ. ಧರ್ಮಶಾಸ್ತ್ರದಿಂದ ಪಾಪದ ಅರುಹು ಉಂಟಾಗುತ್ತದಷ್ಟೆ ಧರ್ಮ ಪ್ರಮಾಣ ಸಂಬಂಧವಾದ ಕರ್ಮಗಳಿಲ್ಲದೆ ನಂಬಿಕೆಯಿಂದಲೇ ಮನುಷ್ಯರು ನೀತಿವಂತರೆಂದು ನಿರ್ಣಯಿಸಲ್ಪಡುವರು''. (ರೋಮಾಪುರದವರಿಗೆ 3:20, 28)

2. ''ಪಾಪವು ನಿಮ್ಮ ಮೇಲೆ ಅಧಿಕಾರ ನಡಿಸದು; ನೀವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ.''(ರೋಮಾಪುರದವರಿಗೆ 6:14).

3. ''ನಾನು ದೇವರ ಕೃಪೆಯನ್ನು ನಿರರ್ಥಕ ಮಾಡುವದಿಲ್ಲ. ಕರ್ಮ ಮಾರ್ಗದಿಂದ ನೀತಿಯುಂಟಾಗುವುದಾದರೆ ಕ್ರಿಸ್ತನು ಮರಣವನ್ನು ಹೊಂದಿದ್ದಕ್ಕೆ ಕಾರಣವೇ ಇಲ್ಲ." (ಗಲಾತ್ಯದವರಿಗೆ 2:21).

4. "ಯಾವನಾದರೂ ಯೇಸುಕ್ರಿಸ್ತನ ಮೇಲಣ ನಂಬಿಕೆಯಿಂದಲೇ ಹೊರತು ನೇಮನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವುದಿಲ್ಲವೆಂಬುದು ನಮಗೆ ತಿಳಿದಿರುವದರಿಂದ ''(ಗಲಾತ್ಯದವರಿಗೆ 2:16)

5. ''ನೋಡಿರಿ ಪೌಲನೆಂಬ ನಾನು ನಿಮಗೆ ಒಂದನ್ನು ಹೇಳುತ್ತೇನೆ — ನೀವು ಸುನ್ನತಿ ಮಾಡಿಸಿಕೊಂಡರೆ ಕ್ರಿಸ್ತನಿಂದ ನಿಮಗೆ ಏನೂ ಪ್ರಯೋಜನವಿಲ್ಲ.'' (ಗಲಾತ್ಯದವರಿಗೆ 5:2).

ಈ ಉಪದೇಶಗಳು ಯೇಸು ಕ್ರಿಸ್ತರ ಉಪದೇಶಗಳಿಗೆ ಪೂರ್ಣ ವಿರುದ್ಧವಾಗಿದ್ದುವು. ಯೇಸು ಕ್ರಿಸ್ತರು ಅವರ ಜೀವನಕಾಲದಲ್ಲಿ (ಮೋಶೆಯ) ನ್ಯಾಯ ಪ್ರಮಾಣಗಳನ್ನು ಅನುಸರಿಸುತ್ತಿದ್ದರು. ಯೆಹೂದಿಗಳಿಂದ ಬಂಧಿತನಾಗುವುದಕ್ಕೆ ಸ್ವಲ್ಪ ಮೊದಲು ಅವರು ಪಸಹಾ (ಪಸ್ಕ) ಹಬ್ಬವನ್ನು ಆಚರಿಸಿ ತನ್ನ ಶಿಷ್ಯರೊಂದಿಗೆ ಭೋಜನ ಮಾಡಿದರು. (ಮಾರ್ಕ 14:12-14).

ಯೇಸು ಕ್ರಿಸ್ತರು ತಾನು ಶುದ್ಧಗೊಳಿಸಿದ ಕುಷ್ಠರೋಗಿಯೊಡನೆ ಈ ರೀತಿ ಹೇಳಿದರು: ''ಯಾಜಕನಿಗೆ ನಿನ್ನ ಮೈ ತೋರಿಸಿ ಮೋಶೆಯು ನೇಮಕ ಮಾಡಿರುವದನ್ನು ಅರ್ಪಿಸಿ ಶುದ್ಧಾಚಾರವನ್ನು ನೆರವೇರಿಸು, ಅದು ಜನರಿಗೆ ಸಾಕ್ಷಿಯಾಗಲಿ.'' (ಮಾರ್ಕ 1:44).

ಯಜ್ಞವೇದಿಯ ಮುಂದೆ ತಮ್ಮ ಕಾಣಿಕೆಗಳನ್ನು ಸಮರ್ಪಿಸಬೇಕೆಂದು ಶಿಷ್ಯರೊಡನೆ ಯೇಸು ಕ್ರಿಸ್ತರು ಆಜ್ಞಾಪಿಸಿದ್ದರು. (ಮತ್ತಾಯ 5:24). ಅವರ ಶಿಷ್ಯರು ಸಹ ನ್ಯಾಯ ಪ್ರಮಾಣದ ಪ್ರಕಾರ ವರ್ತಿಸಿದ್ದರು. ಯೇಸು ಕ್ರಿಸ್ತರೊಂದಿಗೆ ಯೆರೂಸಲೇಮಿಗೆ ಬಂದಿದ್ದ ಸ್ತ್ರೀಯರು ಸುಗಂಧ ದ್ರವ್ಯಗಳನ್ನೂ ಪರಿಮಳ ಲೇಪನಗಳನ್ನೂ ಸಿದ್ಧಪಡಿಸಿ ನಿಯಮಾನುಸಾರವಾಗಿ ಸಬ್ಬತ್ ದಿವಸ ವಿಶ್ರಾಂತಿ ಹೊಂದಿದ್ದರು. (ಲೂಕ 23:56).

ಸಂತ ಪೌಲನಿಗೆ ಯಾವುದೇ ಆಜ್ಞೆಯಾಗಲೀ ಅಧಿಕಾರವಾಗಲೀ ಮೋಶೆಯ ನ್ಯಾಯ ಪ್ರಮಾಣಗಳನ್ನು ರದ್ದುಗೊಳಿಸಲು ಅಥವಾ ತಿದ್ದಲು ಇರಲಿಲ್ಲ. ಆತನು ಮೆಸ್ಸಾಯನೋ, ಪ್ರವಾದಿಯೋ ಅಪೋಸ್ತಲನೋ ಆಗಿರಲಿಲ್ಲ. ಹೀಗಿರುವಾಗ "ನೀವು ಸುನ್ನತಿ ಮಾಡಿಸಿಕೊಂಡರೆ ಕ್ರಿಸ್ತನಿಂದ ನಿಮಗೆ ಏನೂ ಪ್ರಯೋಜನವಿಲ್ಲ'' ಎಂದು ಹೇಳಲು ಆತನಿಗೆ ಏನು ಅಧಿಕಾರವಿದೆ? ಕ್ರಿಸ್ತರೂ (ಲೂಕ 2:21) ಎಲ್ಲಾ ಅಪೋಸ್ತಲರೂ ಸುನ್ನತಿ ಮಾಡಿದವರಾಗಿದ್ದರು. "ಮೋಶೆಯ ಧರ್ಮಶಾಸ್ತ್ರವನ್ನಾಗಲಿ ಪ್ರವಾದಿಗಳ ವಚನಗಳನ್ನಾಗಲಿ ತೆಗೆದು ಹಾಕುವುದಕ್ಕೆ ನಾನು ಬಂದೆನೆಂದು ನೀವು ನೆನಸಬೇಡಿರಿ. ತೆಗೆದುಹಾಕುವುದಕ್ಕೆ ಬಂದಿಲ್ಲ; ನೆರವೇರಿಸುವುದಕ್ಕೆ ಬಂದಿದ್ದೇನೆ.'' (ಮತ್ತಾಯ 5:17) ಎಂದು ಯೇಸು ಕ್ರಿಸ್ತರು ಹೇಳಿರುವರು.

ಮನುಷ್ಯನು ನ್ಯಾಯ ಪ್ರಮಾಣದ ಅನುಸರಣೆಯಿಂದ ಅಂಗೀಕೃತನಾಗಲಾರನೆಂಬ ಪೌಲನ ಹೇಳಿಕೆಯು ಪೂರ್ಣತಪ್ಪಾಗಿದೆ. ಜಕರಿಯ್ಯಾರವರೂ ಅವರ ಪತ್ನಿಯೂ "ಅವರಿಬ್ಬರೂ ಕರ್ತನ ಎಲ್ಲಾ ಆಜ್ಞೆಗಳನ್ನೂ ನೇಮನಿಷ್ಠೆಗಳನ್ನೂ ಕೈಕೊಂಡು ತಪ್ಪಿಲ್ಲದೆ ನಡಕೊಳ್ಳುತ್ತಾ

ದೇವರ ದೃಷ್ಟಿಯಲ್ಲಿ ನೀತಿವಂತರಾಗಿದ್ದರು." (ಲೂಕ 1:6) ಎಂಬ ವಚನದಿಂದ ಮೋಶೆಯ ನ್ಯಾಯ ಪ್ರಮಾಣದ ಅನುಸರಣೆಯಿಂದ ಅವರು ಪುಣ್ಯವಂತರಾದರೆಂದು ಸ್ಪಷ್ಟವಾಗುತ್ತದೆ. ಯೇಸುಕ್ರಿಸ್ತರ ಅಪೋಸ್ತಲರಾಗಲಿ ಪೌಲನಂತಹ ವಿಶ್ವಾಸವನ್ನು ಹೊಂದಿರಲಿಲ್ಲ. ಉದಾಹರಣೆಗೆ ಯೇಸು ಕ್ರಿಸ್ತರ ಸಹೋದರನಾದ ಯಾಕೋಬನು ಹೇಳುವುದನ್ನು ನೋಡಿರಿ: "ನನ್ನ ಸಹೋದರರೇ, ಒಬ್ಬನು ತನಗೆ ನಂಬಿಕೆಯುಂಟೆಂದು ಹೇಳಿಕೊಂಡು ತಕ್ಕ ಕ್ರಿಯೆಗಳಿಲ್ಲದವನಾಗಿದ್ದರೆ ಪ್ರಯೋಜನವೇನು? ಅಂಥ ನಂಬಿಕೆಯು ಇವನನ್ನು ರಕ್ಷಿಸುವುದೋ? ಒಬ್ಬ ಸಹೋದರನಿಗೆ ಇಲ್ಲವೇ ಒಬ್ಬ ಸಹೋದರಿಗೆ ಬಟ್ಟೆಯೂ ಆ ದಿನದ ಆಹಾರವೂ ಇಲ್ಲದೆ ಇರುವಾಗ ನಿಮ್ಮಲ್ಲಿ ಒಬ್ಬನು ಅವರಿಗೆ ದೇಹಕ್ಕೆ ಬೇಕಾದುದನ್ನು ಕೊಡದೆ—ಸಮಾಧಾನದಿಂದ ಹೋಗಿರಿ, ಬೆಂಕಿ ಕಾಯಿಸಿಕೊಳ್ಳಿ, ಹೊಟ್ಟೆ ತುಂಬಿಸಿಕೊಳ್ಳಿ ಎಂದು ಬರೀ ಮಾತು ಹೇಳಿದರೆ ಪ್ರಯೋಜನವೇನು? ಹಾಗೆಯೇ ಕ್ರಿಯೆಗಳಿಲ್ಲದಿದ್ದರೆ ನಂಬಿಕೆಯು ತನ್ನಲ್ಲಿ ಜೀವವಿಲ್ಲದ್ದು.... ಮನುಷ್ಯನು ಕ್ರಿಯೆಗಳಿಂದ ನೀತಿವಂತನೆಂದು ನಿರ್ಣಯಿಸಲ್ಪಡುತ್ತಾನೇ ಹೊರತು ಬರೀ ನಂಬಿಕೆಯಿಂದಲ್ಲವೆಂದು ನೋಡುತ್ತೀರಿ ಆತ್ಮವಿಲ್ಲದ ದೇಹವು ಸತ್ತದ್ದಾಗಿರುವ ಪ್ರಕಾರವೇ ಕ್ರಿಯೆಗಳಿಲ್ಲದ ನಂಬಿಕೆಯೂ ಸತ್ತದ್ದೇ'' (ಯಾಕೋಬ 2:14–26)

ಪೌಲನು ಮೋಶೆಯ ನ್ಯಾಯ ಪ್ರಮಾಣಕ್ಕೆ ವಿರುದ್ಧವಾಗಿ ಉಪದೇಶಿಸುವುದನ್ನು ಅಪೋಸ್ತಲರೂ ಇತರರೂ ವೀಕ್ಷಿಸಿ ಮೌನದಿಂದರಲಿಲ್ಲ. ಅವರು ಪೌಲನು ವ್ಯತ್ಯಸ್ಥ ಮಾರ್ಗವನ್ನನುಸರಿಸಿದುದನ್ನು ನೋಡಿ ಗಾಬರಿಗೊಂಡರು. ಅವರಲ್ಲಿ ಕೆಲವರು ಯೂದಾಯ ರಾಜ್ಯದಿಂದ ಪೌಲನ ಕಾರ್ಯಕ್ಷೇತ್ರಕ್ಕೆ ಹೋಗಿ ಹೊಸದಾಗಿ ಮತಾಂತರಗೊಂಡವರೊಡನೆ ಮೋಶೆಯ ನ್ಯಾಯ ಪ್ರಮಾಣಗಳನ್ನು ತಪ್ಪಿಲ್ಲದೆ ಅನುಸರಿಸಿ ಸುನ್ನತಿಯಂತಹ ಕರ್ಮಗಳನ್ನು ಕೈಗೊಂಡರೆ ಮಾತ್ರ ಮೋಕ್ಷ ಗಳಿಸುವರೆಂದು ಹೇಳಿದರು. (ಅಪೋಸ್ತರ ಕೃತ್ಯಗಳು 15:1).

ಇದರಿಂದ ಪೌಲನೊಡನೆ ಅವರಿಗೆ ದೊಡ್ಡ ಜಗಳ ಉಂಟಾಯಿತು. ಪೌಲನು ತನ್ನ ಕೆಲವು ಸಂಗಡಿಗರೊಡನೆ ಯೆರೂಸಲೇಮಿಗೆ ಹೋದನು. ಅಲ್ಲಿ ಒಂದು ಸಭೆ ಸೇರಿಸಲಾಯಿತು. ಇವರಲ್ಲಿ ಅಪೋಸ್ತಲರೂ ಹಿರಿಯರೂ ಶಿಷ್ಯರೂ ಭಾಗವಹಿಸಿದರು. ದೀರ್ಘವಾದ ವಾದಪ್ರತಿವಾದಗಳು ನಡೆದುವು. ಪೌಲನ ಕೆಲಸ ಇಷ್ಟರೊಳಗೆ ಸ್ಪಷ್ಟವಾದ ಅಭಿವೃದ್ಧಿ ಹೊಂದಿದ್ದು ಅದನ್ನು ಅಪೋಸ್ತಲರಿಗೆ ತಡೆಯಲು ಶಕ್ತಿಯಿರಲಿಲ್ಲ. ಯಹೂದಿಗಳಿಗೆ ಉಪದೇಶಿಸಿದವರು ಯಾವುದೇ ಜಯಗಳಿಸಲಿಲ್ಲ, ಮತ್ತು ಅವರು ಯಹೂದ್ಯ ಮತದ ಮೇಲೆ ವಿಜಯ ಗಳಿಸುವುದು ಅಸಾಧ್ಯವೆಂದು ನಿರಾಶೆಗೊಂಡಿದ್ದರು. ಸ್ಥಿತಿಗತಿ ಈ ರೀತಿ ಇರುವಾಗ ಪೇತ್ರನು ಎದ್ದು ಪೌಲನ ತರ್ಕಗಳನ್ನು ಅನುಮೋದಿಸಿ ಮಾತಾಡಿದನು. ಕಡೆಗೆ ಯಾಕೋಬನು ಒಂದು ಭಾಷಣ ಮಾಡಿ ಈ ರೀತಿ ಕೊನೆಗೊಳಿಸಿದನು: "ಅನ್ಯ ಜನರಲ್ಲಿ ದೇವರ ಕಡೆಗೆ ತಿರುಗಿಕೊಳ್ಳುವವರನ್ನು ತೊಂದರೆ ಪಡಿಸಬಾರದು'' (ಅಪೋಸ್ತಲರ ಕೃತ್ಯಗಳು 15:19). ಕೊನೆಗೆ ಒಂದು ಪತ್ರವನ್ನು ಅನ್ಯ ಜಾತಿಯವರಿಗೆ ಈ ಕೆಳಗಿನಂತೆ ಬರೆಯಲಾಯಿತು:—

"ಸಹೋದರರಾಗಿರುವ ಅಪೋಸ್ತಲರೂ ಹಿರಿಯರೂ ಅಂತಿಯೋಕ್ಯ, ಸಿರಿಯ, ಕಿಲಿಕ್ಯ ಸೀಮೆಗಳಲ್ಲಿ ವಾಸಿಸುವ ಅನ್ಯ ಜನರೊಳಗಿಂದ ಸಹೋದರರಾದವರಿಗೆ ಮಾಡುವ ವಂದನೆ. ಆದಾಗಿ ನಮ್ಮೊಳಗಿಂದ ಹೋದ ಕೆಲವರು ನಮ್ಮಿಂದ ಏನೂ ಅಪ್ಪಣೆ ಹೊಂದದೆ ತಮ್ಮ ಮಾತುಗಳಿಂದ ನಿಮ್ಮಲ್ಲಿ ಅಸಮಾಧಾನವನ್ನು ಹುಟ್ಟಿಸಿ ನಿಮ್ಮ ಮನಸುಗಳನ್ನು ಕಳವಳ ಗೊಳಿಸಿದ್ದಾರೆಂಬುದನ್ನು ಕೇಳಿದ್ದರಿಂದ....... ವಿಗ್ರಹಕ್ಕೆ ನೈವೇದ್ಯ ಮಾಡಿದ್ದನ್ನೂ ರಕ್ತವನ್ನೂ ಕುತ್ತಿಗೆ ಹಿಸುಕಿ ಕೊಂದದ್ದನ್ನೂ ಹಾದರವನ್ನೂ ವಿಸರ್ಜಿಸುವುದು ಅವಶ್ಯವಾಗಿದೆ; ಇದಕ್ಕೆ ಹೆಚ್ಚಿನ ಭಾರವನ್ನು ನಿಮ್ಮ ಮೇಲೆ ಹಾಕಬಾರದೆಂದು ಪವಿತ್ರಾತ್ಮನಿಗೂ ನಮಗೂ ವಿಹಿತವಾಗಿ ತೋರಿತು.'' (ಅಪೋಸ್ತಲರ ಕೃತ್ಯಗಳು 15:23–30).

## ಮೋಶೆಯ ನ್ಯಾಯಪ್ರಮಾಣದ ಬದಲಾಗಿ ಯೇಸುಕ್ರಿಸ್ತರು

ಅನ್ಯಜಾತಿಯವರನ್ನು ನ್ಯಾಯಪ್ರಮಾಣದ ಅನುಸರಣೆಯ ಶರ್ತವಿಲ್ಲದೆ ಮತಾಂತರಗೊಳಿಸಬಹುದೆಂಬ ತನ್ನ ಯೋಜನೆಯು ಒಪ್ಪಂದದ ಪರಿಣಾಮವಾಗಿ ಜಯಗಳಿಸುತ್ತಿರುವುದನ್ನೂ ಯಹೂದಿಗಳು ನ್ಯಾಯಪ್ರಮಾಣವನ್ನು ತಪ್ಪಿಲ್ಲದೆ ಅನುಸರಿಸುವುದರಲ್ಲಿ ನಿರ್ಬಂಧಿತರಾಗುವುದನ್ನೂ ಕಂಡ ಪೌಲನು ಒಂದು ಹೆಜ್ಜೆ ಮುಂದುವರಿದು ನ್ಯಾಯಪ್ರಮಾಣದ ಅನುಸರಣೆಯನ್ನು ಅನ್ಯಜಾತಿಯವರಿಗೂ ಯಹೂದಿಗಳಿಗೂ ಸಮಾನವಾಗಿ ರದ್ದುಗೊಳಿಸಿ

ಯೇಸುಕ್ರಿಸ್ತರ ರಕ್ತದ ಮೇಲಿನ ವಿಶ್ವಾಸ ನ್ಯಾಯ ಪ್ರಮಾಣದ ಸ್ಥಾನವನ್ನು ವಹಿಸುವುದೆಂದೂ ವಾದಿಸಿದನು. ಆತನು: "ನಾವು ನಂಬಿಕೆಯಿಂದ ನೀತಿವಂತರೆಂದು ನಿರ್ಣಯವನ್ನು ಹೊಂದುವದಕ್ಕಾಗಿ ನ್ಯಾಯಪ್ರಮಾಣವು ಕ್ರಿಸ್ತನಲ್ಲಿಗೆ ನಮ್ಮನ್ನು ಕರೆದುಕೊಂಡು ಹೋಗುವ ಶಿಕ್ಷಕನಾಯಿತು. ಆದರೆ ಕ್ರಿಸ್ತ ನಂಬಿಕೆಯು ಬಂದಿರಲಾಗಿ ನಾವಿನ್ನು ಶಿಕ್ಷಕನ ಕೈಕೆಳಗಿರುವವರಲ್ಲ" (ಗಲಾತ್ಯದವರಿಗೆ 3:24, 25)* ಎಂದೂ "ಇಲ್ಲಿ ಹೊಸ ಒಡಂಬಡಿಕೆಯೆಂದು ಹೇಳಿದ್ದರಲ್ಲಿ ಮೊದಲಿದ್ದದ್ದನ್ನು ಹಳೇದಾಗಿ ಮಾಡಿದ್ದಾನೆ. ಆದರೆ ಹಳೇದಾಗುತ್ತಾ ಮುದಿಯಾಗುವಂಥದಕ್ಕೆ ಅಂತ್ಯವು ಸಮೀಪವಾಗಿದೆ." (ಇಬ್ರಿಯರಿಗೆ 8:13) ಎಂದೂ ಹೇಳಿದನು.

ಯೇಸುಕ್ರಿಸ್ತರು ಶಿಷ್ಯರನ್ನು ಬಿಟ್ಟು ಹೋದ ನಂತರ ಶಿಷ್ಯರೊಡನೆ ಯಹೂದಿಗಳು: "ನಿಮ್ಮ ಮೆಸ್ಸಾಯನನ್ನು ನಾವು 'ಶಾಪಗ್ರಸ್ತ' ಮರಣಕ್ಕೆ ತುತ್ತಾಗಿಸಿದ್ದೇವೆಂದು" ಅಪಹೇಳನ ಮಾಡುತ್ತಿರುವಾಗ "ಅವರು ಸತ್ತ ನಂತರ ಎದ್ದಿರುವರು" ಎಂದು ಶಿಷ್ಯರು ಉತ್ತರಿಸುತ್ತಿದ್ದರು. ಆದರೆ ಅವರ ಪುನರುತ್ಥಾನಕ್ಕೆ ಸಾಕ್ಷಿ ಕೊಡುವುದು ಅಸಾಧ್ಯವಾಗಿತ್ತು. ಯೇಸುಕ್ರಿಸ್ತರು ಬಹಿರಂಗವಾಗಿ ಹೊರಗೆ ಬಂದಿರಲಿಲ್ಲ. ಅವರು ಅಲ್ಲಿದ್ದ ಕಾಲ ಅಡಗಿದ್ದರು. ಅವರು ಇನ್ನೊಂದು ದೇಶಕ್ಕೆ ಹೋದಾಗ ಉಪಮಾಲಂಕಾರದ ಭಾಷೆಯಲ್ಲಿ "ಅವರು ಸ್ವರ್ಗಕ್ಕೆ ಹೋದರೆಂದು" ಶಿಷ್ಯರು ಹೇಳಿದರು. ಈ ಉತ್ತರ ಯಹೂದಿಗಳಿಗೆ ಇನ್ನಷ್ಟು ಅವಿಶ್ವಸನೀಯವೂ ಅಸಂತೃಪ್ತಿದಾಯಕವೂ ಆಗಿತ್ತು. ಅವರು ಯೇಸುಕ್ರಿಸ್ತರನ್ನು "ಶಾಪಗ್ರಸ್ತ ಮರಣ ಹೊಂದಿದವರೆಂದು" ಭಾವಿಸುತ್ತಿದ್ದರು.

ಪೌಲನು ನ್ಯಾಯ ಪ್ರಮಾಣದ ರದ್ದುಗೊಳಿಸುವಿಕೆಯನ್ನು ಘೋಷಿಸಿ ಜನರನ್ನು ನ್ಯಾಯ ಪ್ರಮಾಣದ ಅನುಸರಣೆಯಿಂದ ವಿರಹಿತರನ್ನಾಗಿ ಮಾಡಿದ ನಂತರ ಆತನು ಧೈರ್ಯದಿಂದ ಯಹೂದಿಗಳೊಡನೆ ಅವರು ಹೇಳುವಂತೆಯೇ ಯೇಸುಕ್ರಿಸ್ತರು ಶಾಪಗ್ರಸ್ತ ಮರಣವನ್ನೇ ಅನುಭವಿಸಿದರೆಂದೂ "ಮರಕ್ಕೆ ತೂಗ ಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು" (ಗಲಾತ್ಯದವರಿಗೆ 3:13) ಎಂಬ ವಚನದ ಪ್ರಕಾರ ಯೇಸು ಕ್ರಿಸ್ತರು ತಮಗಾಗಿ ಶಾಪಗ್ರಸ್ತರಾಗಿ ನ್ಯಾಯ ಪ್ರಮಾಣದ ಶಾಪದಿಂದ ತಮ್ಮನ್ನು ರಕ್ಷಿಸಿದರು ಎಂದೂ ಹೇಳಿದನು.

ಪಾಪಗಳು ಅರ್ಪಣೆಗಳಿಂದಲೂ, ಮೃಗ ಬಲಿಯಿಂದಲೂ ಪರಿಹಾರಗೊಳ್ಳುತ್ತವೆಂಬ ನಂಬಿಕೆ ಯಹೂದಿಗಳಲ್ಲಿ ಬಲವಾಗಿ ಬೇರೂರಿದ್ದಿತು. ಮೀಕ ಎಂಬ ಪ್ರವಾದಿ ಈ ರೀತಿ ಹೇಳಿರುವರು: "ನಾನು ಯೆಹೋವನ ಸನ್ನಿಧಿಯಲ್ಲಿ ಯಾವ ಕಾಣಿಕೆಯೊಡನೆ ಕಾಣಿಸಿಕೊಳ್ಳಲಿ, ಯಾವದನ್ನರ್ಪಿಸಿ ಮಹೋನ್ನತ ದೇವರ ಸಮ್ಮುಖದಲ್ಲಿ ಅಡ್ಡಬೀಳಲಿ? ಹೋಮ ಪಶುಗಳನ್ನೂ ಒಂದು ವರುಷದ ಕರುಗಳನ್ನೂ ತೆಗೆದುಕೊಂಡು ಬಂದು ಆತನ ಮುಂದೆ ಕಾಣಿಸಿಕೊಳ್ಳಲೋ? ಸಾವಿರಾರು ಟಗರುಗಳನ್ನೂ ಲಕ್ಷೋಪಲಕ್ಷ ತೈಲ ಪ್ರವಾಹಗಳನ್ನೂ ನೋಡಿ ಯೆಹೋವನು ಮೆಚ್ಚ್ಯಾನೇ? ನನ್ನ ದ್ರೋಹದ ನಿಮಿತ್ತ ನನ್ನ ಚೊಚ್ಚಲ ಮಗನನ್ನು ಅರ್ಪಿಸಲೋ, ನನ್ನ ಆತ್ಮದ ಪಾಪಕ್ಕಾಗಿ ಗರ್ಭದ ಫಲವನ್ನು ಸಲ್ಲಿಸಲೋ?" (ಮೀಕ 6:6-7).

ಪೌಲನು ಈ ವಿಶ್ವಾಸವನ್ನು ನ್ಯಾಯಪ್ರಮಾಣದ ರದ್ದುಗೊಳಿಸುವಿಕೆಗೆ ಆಧಾರವಾಗಿ ಉಪಯೋಗಿಸಿ ಈ ರೀತಿ ಹೇಳಿದನು: "ಕ್ರಿಸ್ತನು ಸ್ವಂತ ರಕ್ತವನ್ನೇ ತೆಗೆದುಕೊಂಡು ನಮಗೋಸ್ಕರ ನಿತ್ಯವಿಮೋಚನೆಯನ್ನು ಸಂಪಾದಿಸಿಕೊಂಡವನಾಗಿ ಒಂದೇ ಸಾರಿ ದೇವರ ಸನ್ನಿಧಾನಕ್ಕೆ ಪ್ರವೇಶಿಸಿದನು. ಹೋತ ಹೋರಿಗಳ ರಕ್ತವೂ ಹೊಲೆಯಾದವರ ಮೇಲೆ ಚೆಲ್ಲುವ ಕಡಸಿನ ಬೂದಿಯೂ ಶರೀರದ ಹೊಲೆಯನ್ನು ಹೋಗಲಾಡಿಸಿ ಪವಿತ್ರ ಮಾಡುವದಾದರೆ ನಿತ್ಯಾತ್ಮನಿಂದ ತನ್ನನ್ನು ತಾನೇ ನಿರ್ದೋಷಿಯನ್ನಾಗಿ ದೇವರಿಗೆ ಸಮರ್ಪಿಸಿಕೊಂಡ ಕ್ರಿಸ್ತನ ರಕ್ತವು ಎಷ್ಟೋ ಹೆಚ್ಚಾಗಿ ನಮ್ಮನ್ನು ನಿರ್ಜೀವ ಕರ್ಮಗಳಿಂದ ಬಿಡಿಸಿ ನಾವು ಜೀವವುಳ್ಳ ದೇವರನ್ನು ಆರಾಧಿಸುವವರಾಗುವಂತೆ ನಮ್ಮ ಮನಸ್ಸನ್ನು ಶುದ್ಧೀಕರಿಸುವದಲ್ಲವೇ" (ಇಬ್ರಿಯರಿಗೆ 9:12–14).

---

* ಇಂಗ್ಲಿಷ್ ಬೈಬಲಿನಲ್ಲಿ ಈ ರೀತಿ ಬರೆಯಲಾಗಿದೆ:

"Wherefore the law was our schoolmaster to bring us into Christ, that we might be justified by faith. But after that faith is come, we are no longer under a schoolmaster." (Galatians 3:24-25). ಬಾಸೆಲ್ ಮಿಶ್ಯನ್ ಪ್ರೆಸ್ 1936ನೇ ಇಸವಿಯಲ್ಲಿ British and Foreign Bible Society ಗೋಸ್ಕರ ಪ್ರಕಟಿಸಿದ ಬೈಬಲಿನಲ್ಲಿ ಕೊಟ್ಟ ಕನ್ನಡ ಅನುವಾದವು ಮೇಲಿನ ವಾಕ್ಯಗಳಿಂದ ವ್ಯತ್ಯಸ್ತವಾಗಿರುವುದರಿಂದಲೂ ಪ್ರಸ್ತುತ ಗ್ರಂಥದ ಮೂಲ ಇಂಗ್ಲಿಷ್ ಆಗಿರುವುದರಿಂದಲೂ ಇಲ್ಲಿ ಇಂಗ್ಲಿಷ್ ಬೈಬಲಿನ ಅನುವಾದವನ್ನು ಕೊಡಲಾಗಿದೆ. —ಸಂಪಾದಕ.

ಪುನಃ ಈರೀತಿ ಹೇಳಿರುವನು: "ಆ ಕುಮಾರನಲ್ಲಿ (ಯೇಸುಕ್ರಿಸ್ತರಲ್ಲಿ) ನಮ್ಮ ಪಾಪಗಳು ಪರಿಹಾರವಾಗಿ (ಅವರ ರಕ್ತಾರ್ಪಣೆಯಿಂದ) ನಮಗೆ ಬಿಡುಗಡೆಯಾಯಿತು.'' (ಕೊಲೊಸ್ಸೆಯವರಿಗೆ 1:14). "ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು.'' (I ಕೊರಿಂಥದವರಿಗೆ 15:3). ರೋಮಾಪುರದವರಿಗೆ 5:10ರಲ್ಲಿ ಇದೇ ರೀತಿ ಪ್ರಸಾಪವಿದೆ.

ನಾನು ಮುಂದಿನ ಅಧ್ಯಾಯದಲ್ಲಿ ವಿವರಿಸುವ ಹಾಗೆ ಅನ್ಯ ಜಾತಿಯವರು ಇದೇ ರೀತಿಯ ವಿಶ್ವಾಸವನ್ನು ದೇವತೆಗಳ ಕುರಿತು ಹೊಂದಿದ್ದರು. ಹೀಗೆ ಪೌಲನು ಅನ್ಯ ಜಾತಿಗಳಿಗಿರುವ ತನ್ನ ಉಪದೇಶಗಳನ್ನು ಯೇಸುಕ್ರಿಸ್ತರು ಶಿಲುಬೆಯಲ್ಲಿ ಶಾಪಗ್ರಸ್ತ ಮರಣವನ್ನನುಭವಿಸಿ ಅನಂತರ ಪುನರುತ್ಥಾನಗೊಂಡರೆಂಬ ವಿಶ್ವಾಸಕ್ಕೆ ಕೇಂದ್ರಿಕರಿಸಿ, "ದಾವೀದನ ವಂಶದವನಾದ ಯೇಸುಕ್ರಿಸ್ತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟವನೆಂಬುದನ್ನು ಜ್ಞಾಪಕ ಮಾಡಿಕೋ. ಇದೇ ನಾನು ಸಾರುವ ಸುವಾರ್ತೆ'' (II ತಿಮೊಥೆಯನಿಗೆ 2:8) ಎಂದನು. ಅಲ್ಲದೆ "ಕ್ರಿಸ್ತನು (ಸತ್ತವರಿಂದ) ಎದ್ದು ಬರಲಿಲ್ಲವಾದರೆ ನಮ್ಮ ಪ್ರಸಂಗವು ಹುರುಳಿಲ್ಲದ್ದು, ಮತ್ತು ನಿಮ್ಮ ನಂಬಿಕೆಯೂ ಹುರುಳಿಲ್ಲದ್ದು.'' (I ಕೊರಿಂಥದವರಿಗೆ 15:14) ಎಂದಿರುವನು.

ಪೌಲನು ರೋಮನನಾಗಿದ್ದನು. (ಅಪೋಸ್ತಲರ ಕೃತ್ಯಗಳು22:25). ಆತನು ಸಿರಿಯಾ ಮೊದಲಾದ ದೇಶಗಳನ್ನು ಹಿಂದೆಯೇ ಸಂದರ್ಶಿಸಿ ಅವರ ಮಾನಸಿಕ ಸ್ಥಿತಿಯನ್ನು ಗುರುತಿಸಿದ್ದನು. ಆತನು ಅನ್ಯ ಜಾತಿಯವರ ಮೊದಲೇ ಇದ್ದ ಅಭಿಪ್ರಾಯಗಳಿಗೆ ಸರಿದೂಗುವ ತತ್ವಗಳ ಮೇಲೆಯೇ ತನ್ನ ಪ್ರವಚನಗಳನ್ನು ಆಧಾರಪಡಿಸಿ ಅವರಿಗೆ ಸುಲಭವಾಗಿ ಅರ್ಥವಾಗುವಂತೆ ಮಾಡಿದನು.

ಯೇಸುಕ್ರಿಸ್ತರನ್ನು ಪೌಲನು ಕಂಡಿರಲಿಲ್ಲವೆಂದೂ ಯೇಸುಕ್ರಿಸ್ತರು ಶಿಲುಬೆಗೆ ಕೊಡಲ್ಪಟ್ಟಾಗ, ಇಳಿಸಲ್ಪಟ್ಟಾಗ ಮತ್ತು ಶವ ಕುಟೀರದಿಂದ ಹೊರಬಂದಾಗ ಮತ್ತು ಶಿಷ್ಯರನ್ನು ಕೊನೆಯ ಬಾರಿ ಬೇಟಿಯಾದಾಗ ಆತನು ಉಪಸ್ಥಿತವಿರಲಿಲ್ಲವೆಂದೂ ಸುವಾರ್ತೆಗಳಿಂದ ವ್ಯಕ್ತವಾಗುತ್ತದೆ. ಆತನ ಮತ ಪರಿವರ್ತನದ ಮೂರನೆಯ ವರ್ಷ ಆತ ಯೆರೋಸಲೇಮಿಗೆ ಬಂದು ಪೇತ್ರನೊಡನೆ ಹದಿನೈದು ದಿವಸ ವಾಸಿಸಿದನು. ಅನಂತರ ಹದಿನಾಲ್ಕು ವರ್ಷ ಕಳೆದ ಬಳಿಕ ಆತನು ಪುನಃ ಯೆರೂಸಲೇಮಿಗೆ ಬಂದು ಅಪೋಸ್ತಲರಿಗೆ ತನ್ನ ಉಪದೇಶಗಳ ಸತ್ಯತೆಯನ್ನು ವ್ಯಕ್ತಗೊಳಿಸಲು ಯತ್ನಿಸಿದನು.

## ಪೌಲನೂ ಪೇತ್ರನು

ಶಿಲುಬೆಯಲ್ಲಿ ಶಾಪಗ್ರಸ್ತ ಮರಣ ಮತ್ತು ಅನಂತರದ ಪುನರುತ್ಥಾನ ಸಿದ್ಧಾಂತವನ್ನು ಸಂತ ಪೌಲನು ಏಕೆ ಜನರ ಮುಂದಿರಿಸಿದನು? ನ್ಯಾಯ ಪ್ರಮಾಣವನ್ನು ರದ್ದುಗೊಳಿಸಿ, ನ್ಯಾಯ ಪ್ರಮಾಣದ ಅನುಸರಣೆ ಮತ್ತು ಪಾಪದಿಂದ ಬಿಡುಗಡೆಗೊಳಿಸಿ ಅವರನ್ನು ಮತಾಂತರಗೊಳಿಸುವುದೇ ಆತನ ಉದ್ದೇಶವಾಗಿತ್ತು. ಅಪೋಸ್ತಲರಲ್ಲಿ ಆತನನ್ನು ಸಹಕರಿಸಿದವನೂ ಆತನ ಕ್ರಮಗಳನ್ನು ಅನುಸರಿಸಿ ನಡೆದವನೂ ಸಂತ ಪೇತ್ರನಾಗಿದ್ದನು. ಈತನ ಜೊತೆ ಪೌಲನು ಹದಿನೈದು ದಿವಸ ವಾಸಿಸಿದ್ದನು. ಸುವಾರ್ತೆಗಳು ಪೇತ್ರನನ್ನು ಅಸ್ಥಿರ ವಿಶ್ವಾಸಿಯನ್ನಾಗಿಯೂ ಸ್ವಪ್ರಾಭಿಪ್ರಾಯ ವಿರಹಿತನಾಗಿಯೂ ಚಿತ್ರಿಸುತ್ತದೆ:–"ಎಲ್ಲರೂ ನಿನ್ನ ವಿಷಯದಲ್ಲಿ ದಿಗಿಲುಪಟ್ಟು ಹಿಂಜರಿದರೂ ನಾನು ಹಿಂಜರಿಯುವುದಿಲ್ಲ.'' (ಮತ್ತಾಯ 26:33) ಎಂದು ಹೇಳಿ ಅನಂತರ ಸ್ವಲ್ಪವೇ ಸಮಯದ ನಂತರ ಮೂರು ಸಾರಿ ಯೇಸುಕ್ರಿಸ್ತನನ್ನು ನಿಷೇಧಿಸಿ ಮಾತಾಡಿ ಯೇಸುವನ್ನು ತಾನರಿಯೆನೆಂದು ಮೂರು ಸಾರಿ ಆಣೆಯನ್ನಿಟ್ಟುಕೊಂಡು ಹೇಳಿದನು (ಮತ್ತಾಯ 26:72).

ಪೇತನು ಬಲಹೀನ ವಿಶ್ವಾಸವನ್ನು ಹೊಂದಿದ್ದನೆಂದು ಪೌಲನೇ ಹೇಳುತ್ತಾನೆ. ಆತನು ಈ ರೀತಿ ನುಡಿದಿರುವನು: "ಕೇಫನು (ಪೇತನು) ಅಂತಿಯೋಕ್ಯಕ್ಕೆ ಬಂದಾಗ ಅವನು ದೋಷಿಯಾಗಿ ಕಾಣಿಸಿಕೊಂಡದ್ದರಿಂದ ನಾನು ಅವನನ್ನು ಮುಖಾಮುಖಿಯಾಗಿ ಎದುರಿಸಿದೆನು. ಯಾಕಂದರೆ ಯಕೋಬನ ಕಡೆಯಿಂದ ಕೆಲವರು ಬರುವದಕ್ಕೆ ಮುಂಚೆ ಅವನು ಅನ್ಯಜನರ ಸಂಗಡ ಊಟಮಾಡುತ್ತಿದ್ದನು; ಅವರು ಬಂದ ಮೇಲೆ ಸುನ್ನತಿಯರಾದ ಅವರಿಗೆ ಅವನು ಭಯಪಟ್ಟು ಅನ್ಯಜನರನ್ನು ಬಿಟ್ಟು ತನ್ನನ್ನು ಪ್ರತ್ಯೇಕಿಸಿಕೊಂಡನು ಇದಲ್ಲದೆ ಮಿಕ್ಕಾದ ಯೆಹೂದ್ಯರೂ ಅವನೊಂದಿಗೆ ಸೇರಿ ಹಾಗೆಯೇ ಕಪಟ ಮಾಡಿದರು; ಹೀಗೆ ಬಾರ್ನಬನೂ ಅವರ ಕಪಟದ ಸೆಳವಿಗೆ ಬಿದ್ದನು. ಅವರು ಸುವಾರ್ತೆಯ ಸತ್ಯಾರ್ಥದ ಪ್ರಕಾರ ನೆಟ್ಟಗೆ ನಡೆಯುವದಿಲ್ಲವೆಂದು ನಾನು ಕಂಡಾಗ ಎಲ್ಲರ ಮುಂದೆ ಕೇಫ (ಪೇತ್ರ)ನಿಗೆ ಹೇಳಿದ್ದೇನೆಂದರೆ —ನೀನು ಯಹೂದ್ಯನಾಗಿದ್ದು ಯೆಹೂದ್ಯರಂತೆ ನಡೆ

ಯಂದೆ ಅನ್ಯಜನರಂತೆ ನಡೆದ ಮೇಲೆ ಅನ್ಯಜನರಿಗೆ— ನೀವು ಯೆಹೂದ್ಯರ ಪದ್ಧತಿಗಳನ್ನು ಅನುಸರಿಬೇಕೆಂದು ನೀನು ಬಲಾತ್ಕಾರ ಮಾಡುವದು ಹೇಗೆ? '' (ಗಲಾತ್ಯದರಿಗೆ 2:11–14).

ಪ್ರೇತನಂತಹ ಓರ್ವ ವ್ಯಕ್ತಿ ಪೌಲನ ಪ್ರಭಾವಕ್ಕೊಳಗಾಗಿ ಯೇಸು ಕ್ರಿಸ್ತರ ರಕ್ತಾರ್ಪಣೆಯ ಸಿದ್ಧಾಂತದಲ್ಲಿ ವಿಶ್ವಾಸಗೊಂಡು ಯೇಸು ಕ್ರಿಸ್ತರ ಸ್ಪಷ್ಟ ಅಧ್ಯಾಪನಗಳಿಗೆ ವಿರೋಧವಾಗಿ ಉಪದೇಶಿಸಿ ಪೌಲನಂತೆ ಒಂದು ದರ್ಶನವನ್ನು ಕಂಡಂತೆ ಹೇಳಿದರೆ ಅದು ಅವಿಶ್ವಸನೀಯವಾಗುವುದಿಲ್ಲ. ''ಅವನು (ಪ್ರೇತನು) ಬಹಳ ಹಸಿದು ಊಟ ಮಾಡಬೇಕೆಂದಿದ್ದನು. ಊಟಕ್ಕೆ ಸಿದ್ಧವಾಗುತ್ತಿರುವಷ್ಟರಲ್ಲಿ ಅವನು ಧ್ಯಾನಪರವಶನಾಗಿ ಆಕಾಶವು ತೆರೆದಿರುವದನ್ನೂ ನಾಲ್ಕು ಮೂಲೆಗಳನ್ನು ಹಿಡಿದಿದ್ದ ದೊಡ್ಡ ಜೋಳಿಗೆಯಂತಿರುವ ಏನೋ ಒಂದು ವಸ್ತುವು ಭೂಮಿಯ ಮೇಲೆ ಇಳಿಯುವುದನ್ನೂ ಕಂಡನು. ಅದರೊಳಗೆ ಸಕಲ ವಿಧವಾದ ಪಶುಗಳೂ ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳೂ ಅಂತರಿಕ್ಷದಲ್ಲಿ ಹಾರಾಡುವ ಹಕ್ಕಿಗಳೂ ಇದ್ದವು. ಆಗ–ಪ್ರೇತನೇ, ಎದ್ದು ಕೊಯ್ದು ತಿನ್ನು ಎಂದು ಅವನಿಗೆ ಒಂದು ವಾಣಿ ಕೇಳಿಸಿತು. ಅದಕ್ಕೆ ಪ್ರೇತನು–ಬೇಡವೇ ಬೇಡ ಸ್ವಾಮಿ, ನಾನು ಎಂದೂ ಹೊಲೆ ಪದಾರ್ಥವನ್ನಾಗಲಿ ಅಶುದ್ಧ ಪದಾರ್ಥವನ್ನಾಗಲಿ ತಿಂದವನಲ್ಲ ಅಂದನು. ದೇವರು ಶುದ್ಧ ಮಾಡಿದ್ದನ್ನು ನೀನು ಹೊಲೆ ಎನ್ನಬೇಡವೆಂದು ತಿರಿಗಿ ಎರಡನೆಯ ಸಾರಿ ಅವನಿಗೆ ವಾಣಿ ಕೇಳಿಸಿತು. ಹೀಗೆ ಮೂರು ಸಾರಿ ಆಯಿತು. ಆದ ಕೂಡಲೇ ಆ ವಸ್ತುವು ಆಕಾಶದೊಳಗೆ ಸೇರಿಕೊಂಡಿತು.'' (ಅಪೋಲಸ್ತರ ಕೃತ್ಯಗಳು 10:10–16)

ದರ್ಶನಗಳ ಕುರಿತು ಈ ಜನರು ಚಿಂತಿಸಿದ್ದರೆ ದರ್ಶನಗಳು ಸಾತಾನನಿಂದಲೂ ಉಂಟಾಗುತ್ತವೆಯೆಂದೂ ಕೆಲವು ಸಾರಿ ಸ್ವವಿಚಾರಗಳೇ ಈ ರೀತಿ ಕಾಣುತ್ತಿವೆಯೆಂದೂ ತಿಳಿಯಬಹುದಿತ್ತು. ಏಕೆಂದರೆ ದೇವರ ವಚನಕ್ಕೆ ವಿರುದ್ಧವಾದ ದರ್ಶನ ದೇವರಿಂದ ಬಂದುದಾಗಿರದು. ಮೋಶೆಗೆ ದೇವರು ''ಹಂದಿಯು ನಿಮಗೆ ಅಶುದ್ಧ. ಇವುಗಳ ಮಾಂಸವನ್ನು ನೀವು ತಿನ್ನಕೂಡದು'' (ಧರ್ಮೋಪದೇಶಕಾಂಡ 14:8) ಎಂದಿರುವಾಗ ಎಲ್ಲಾ ಮೃಗಗಳು ಶುದ್ಧವೆಂದು ಪ್ರೇತನು ಕೇಳಿದ ಶಬ್ದ ಪಿಶಾಚದ್ದಲ್ಲದೆ ದೇವರದಾಗಲು ಸಾಧ್ಯವಿಲ್ಲ.

ಪೌಲನನ್ನು ಆತನ ಸ್ವಂತ ಮಾತುಗಳಿಂದಲೇ ಸರಿಯಾಗಿ ವಿವರಿಸಲು ಸಾಧ್ಯ. ಆತನು ಹೇಳುವುದನ್ನು ನೋಡಿರಿ:

"ಯೆಹೂದ್ಯರನ್ನು ಸಂಪಾದಿಸಿಕೊಳ್ಳುವುದಕ್ಕೆ ಯೆಹೂದ್ಯರಿಗೆ ಯೆಹೂದ್ಯನಂತಾದೆನು. ನಾನು ನಿಯಮಗಳಿಗೆ ಅಧೀನನಲ್ಲದವನಾದರೂ ನಿಯಮಗಳಿಗೆ ಅಧೀನರಾದವರನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಅವರಿಗೆ ನಿಯಮಗಳಿಗೆ ಅಧೀನನಂತಾದೆನು.'' (I ಕೊರಿಂಥವರಿಗೆ 9:20)

ಆತನು ತನ್ನ ಯಥಾರ್ಥ ಸ್ಥಿತಿಯನ್ನು ಈ ಕೆಳಗಿನ ವಚನದಿಂದಲೂ ವ್ಯಕ್ತಗೊಳಿಸಿರುವನು:

"ನನ್ನ ಸುಳ್ಳಿನಿಂದ ದೇವರ ಸತ್ಯವು ಪ್ರಸಿದ್ಧಿಗೆ ಬಂದು ಆತನ ಮಹಿಮೆ ಹೆಚ್ಚಾದರೆ ಇನ್ನು ನನಗೆ ಪಾಪಿಯೆಂದು ತೀರ್ಪಾಗುವುದು ಹೇಗೆ?'' (ರೋಮಾಪುರದವರಿಗೆ 3:7).

ಪೌಲನ ಈ ಸಿದ್ಧಾಂತ ಯೇಸುಕ್ರಿಸ್ತರ ಉಪದೇಶಗಳನ್ನು ತಿದ್ದುವಂತೆ ಮಾಡಿತು ಮತ್ತು ಆತನಿಗೆ ಯೋಗ್ಯತೆಯಿಲ್ಲದ ಸ್ಥಾನಗಳನ್ನು ವಾದಿಸಿ ಪಡೆಯುವಂತೆ ಮಾಡಿತು. ಆತನು ಅಪೋಸ್ತಲನಾಗಿರದಿದ್ದರೂ ತಾನು ಯೇಸುಕ್ರಿಸ್ತರೊಡನೆ ಜೀವಿಸಿದ ಅಪೊಸ್ತಲರಲ್ಲಿ ಒಬ್ಬನೆಂದು ಘೋಷಿಸಿದನು. ಯೇಸುಕ್ರಿಸ್ತರು ತನ್ನ ಪುನರುತ್ಥಾನದ ನಂತರ ಬಹಿರಂಗವಾಗಿ ಕಾಣಿಸಿಕೊಂಡಿಲ್ಲವೆಂದೂ ತನ್ನ ಶಿಷ್ಯರಿಗೆ ಮಾತ್ರ ಕಾಣಿಸಿಕೊಂಡರೆಂದೂ ಪೇತ್ರ ಹೇಳಿದ ಸಂಗತಿಯನ್ನು ಈ ಮೊದಲೇ ವಿವರಿಸಿರುವೆನು. ನಾಲ್ವರು ಸುವಾರ್ತಾ ಲೇಖಕರು ಸಹ ಇದನ್ನು ಅಂಗೀಕರಿಸಿರುವರು. ಆದರೆ ಪೌಲನು ಇದರ ವಿರುದ್ಧವಾಗಿ ಹೇಳಿಕೆ ಹೊರಡಿಸಿ ತನ್ನ ಅಪೋಸ್ತಲ ಸ್ಥಾನವನ್ನು ಸ್ಥಿರಪಡಿಸಲೆತ್ನಿಸಿರುವನು: "ಕ್ರಿಸ್ತನು ಕೇಫನಿಗೂ ಆ ಮೇಲೆ ಹನ್ನೆರಡು ಮಂದಿ ಅಪೋಸ್ತಲರಿಗೂ* ಕಾಣಿಸಿಕೊಂಡನು. ತರುವಾಯ ಒಂದೇ ಸಮಯದಲ್ಲಿ ಐನೂರು ಮಂದಿಗಿಂತ ಹೆಚ್ಚು ಸಹೋದರರಿಗೆ ಕಾಣಿಸಿಕೊಂಡನು.

* ಅಪೊಸ್ತಲರಲ್ಲಿ ಹನ್ನೊಂದು ಮಂದಿ ಮಾತ್ರ ಬಾಕಿಯಾಗಿದ್ದರಷ್ಟೇ?

...... ತರುವಾಯ ಆತನು ಯಾಕೋಬನಿಗೂ ಆ ಮೇಲೆ ಅಪೊಸ್ತಲರೆಲ್ಲರಿಗೂ ಕಾಣಿಸಿಕೊಂಡನು. ಕಟ್ಟಕಡೆಗೆ ದಿನ ತುಂಬದೆ ಹುಟ್ಟಿದವನಂತಿರುವ ನನಗೂ ಕಾಣಿಸಿಕೊಂಡನು.'' (I ಕೊರಿಂಥದವರಿಗೆ 15:5–8)

ಅನ್ಯಜಾತಿಯವರಿಗೆ ಬೇಕಾಗಿ ಪೌಲನೂ ಪೇತ್ರನೂ ಅವರನ್ನು ಅನುಸರಿಸಿದವರೂ ಯೇಸುಕ್ರಿಸ್ತರು ಉಪದೇಶಿಸಿದ ಧರ್ಮವನ್ನು ಬದಲಾಯಿಸಿದರು. ಅವರು ಯೇಸುಕ್ರಿಸ್ತರ ಶಿಲುಬಾಮರಣ, ಪುನರುತ್ಥಾನಗಳನ್ನೂ ಯೇಸುಕ್ರಿಸ್ತರು ಜನರ ಪಾಪಪರಿಹಾರಕ್ಕಾಗಿ "ಶಾಪಗ್ರಸ್ತ''ರಾದರೆಂದೂ ನಂಬಿದ್ದರು. ಮೋಕ್ಷ ದೊರೆಯಲು ಯೇಸುಕ್ರಿಸ್ತರ ರಕ್ತಾರ್ಪಣೆಯಲ್ಲಿ ವಿಶ್ವಾಸವಿಟ್ಟರೆ ಸಾಕೆಂದು ಅವರು ಜನರಿಗೆ ಬೋಧಿಸಿದರು. ಈ ಸುಲಭ ಮತವು (ಇದನ್ನು "ಪೌಲಮತ"ವೆಂದೇ ಕರೆಯಬೇಕಾಗಿದೆ) ಮೆಲ್ಲಮೆಲ್ಲನೆ ಶಕ್ತಿಪಡೆದು ಕೊನೆಗೆ "ಕ್ರೈಸ್ತಮತ', ವೆಂಬ ಹೆಸರಿನಲ್ಲಿ ಇಂದು ಕರೆಯಲ್ಪಡುವ ಮತದ ಸ್ಥಾಪಕರಾದ ಯೇಸುಕ್ರಿಸ್ತರು ಉಪದೇಶಿಸಿದ ಎಲ್ಲಾ ತತ್ವಗಳ ಸುಳುಹುಗಳನ್ನು ಕ್ರೈಸ್ತರು ಮರೆಯುವಷ್ಟರ ಮಟ್ಟಿಗೆ ಮಾಡಿತು.

[ಮುಂದುವರಿಯುವುದು]

# ಗಾಂಬಿಯಾದ ಆರ್ಥಿಕ ಮಂತ್ರಿ ಅಹ್ಮದಿಯಾ ಸಮ್ಮೇಳನ ಉದ್ಘಾಟಿಸಿದರು

ಗಾಂಬಿಯಾದ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ಎಪ್ರಿಲ್ 16, 17, 18 ತಾರೀಕುಗಳಲ್ಲಿ ಜರಗಿತು. ಅಲ್ಲಿನ ಆರ್ಥಿಕ ಸಚಿವರಾದ ಅಲ್‌ಹಾಜ್ ಗಾರ್‌ಬಾ ಜಹುಂಪ್ರಾ ಸಮ್ಮೇಳನವನ್ನು ಉದ್ಘಾಟಿಸಿದರು. ಸಮಾರೋಪ ಸಮಾರಂಭದಲ್ಲಿ ಗಾಂಬಿಯಾದ ಅಹ್ಮದಿಯಾ ಮಿಶನರಿ ಮೌಲಾನಾ ನಸೀಂ ಸೈಫಿ ಅಧ್ಯಕ್ಷತೆ ವಹಿಸಿದರು. ಗಾಂಬಿಯಾದ ಹಾಗೂ ಸೆನಿಗಲಿಯಾದ ಪ್ರಮುಖ ವ್ಯಕ್ತಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು.

# ಆಗ್ರಾದಲ್ಲಿ ಅಹ್ಮದಿಯಾ ಸಮ್ಮೇಳನ

ಉತ್ತರ ಪ್ರದೇಶದ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ಚರಿತ್ರ ಪ್ರಸಿದ್ಧವಾದ ಆಗ್ರಾ ಪಟ್ಟಣದಲ್ಲಿ ಜೂನ್ 6, 7, 8 ತಾರೀಕುಗಳಲ್ಲಿ ವಿಜಯಕರವಾಗಿ ನಡೆಯಿತು.

ಉಸ್ಮಾನಿಯಾ ಯೂನಿವರ್ಸಿಟಿಯ ಖಗೋಳ ಶಾಸ್ತ್ರಜ್ಞ ಡಾ। ಹಾಫಿಝ್ ಸಾಲಿಹ್ ಮುಹಮ್ಮದ್ ಅಲ್ಲಾವುದ್ದೀನ್ M.Sc.,Ph.D ಅಧ್ಯಕ್ಷತೆ ವಹಿಸಿದರು. ಮೊದಲ ದಿವಸದ "ಮತಾಚಾರ್ಯರ ದಿನ'' ಸಮಾರಂಭವನ್ನು ಸೇಟ್ ಅಚಲ್‌ಸಿಂಗ್ ಎಂ.ಪಿ. ಉದ್ಘಾಟಿಸಿದರು. ಆ ಸಭೆಯಲ್ಲಿ ಸಾಗರ್‌ದೇವ್ ಕೌಶಿಕ್ ಶ್ರೀ ಕೃಷ್ಣನ ಕುರಿತೂ, ಮೌಲಾನಾ ಶರೀಫ್ ಅಹ್ಮದ್ ಅಮೀನಿ ಮುಹಮ್ಮದ್ ಪೈಗಂಬರರ ಜೀವಿತದ ಕುರಿತೂ, ಸರ್‌ದಾರ್ ಬುದ್ಧಸಿಂಗ್ ಗುರುನಾನಕ್‌ಜಿಯ ಕುರಿತೂ, ಮೌಲಾನಾ ಬಶೀರ್ ಅಹ್ಮದ್ H. A. ಹಝ್ರತ್ ಅಹ್ಮದರ ಕುರಿತೂ, ಅಬ್ದುಲ್ ಹಕ್ಕ್‌ಫಾಸಿಲ್ ಯೇಸು ಕ್ರಿಸ್ತರ ಕುರಿತೂ ಭಾಷಣಮಾಡಿದರು. ಶ್ರೀ ಗಣೇಶ್‌ಜಿಯವರು ಅರ್ಯಸಮುದಾಯಿಕ ಸೌಹಾರ್ದದ ಕುರಿತು ಮಾತನಾಡಿದರು.

ಆತ್ಮದ ಶುದ್ಧೀಕರಣದಿಂದ ಮಾತ್ರವೇ ಯಥಾರ್ಥ ಲೋಕ ಸಮಾಧಾನವೂ ಶಾಂತಿಯೂ ಸ್ಥಾಪಿಸಲು ಸಾಧ್ಯವೆಂದು ಡಾ। ಸಾಲಿಹ್ ಮುಹಮ್ಮದ್ ಅಲ್ಲಾವುದ್ದೀನ್ ಹೇಳಿದರು. ಭಾರತದ ಉಪಾಧ್ಯಕ್ಷ ಶ್ರೀ ಬಿ ಡಿ. ಜತ್ತಿ, ಯು.ಪಿ. ರಾಜ್ಯಪಾಲ ಶ್ರೀ ಚೆನ್ನರೆಡ್ಡಿ, ಮುಖ್ಯಮಂತ್ರಿ ಶ್ರೀ ನಾರಾಯಣದತ್ ತೇವಾರಿ ಮೊದಲಾದವರ ಸಂದೇಶಗಳನ್ನು ಓದಿ ಕೇಳಿಸಲಾಯಿತು.

## ಮಳೆಗಾಗಿ ಪ್ರಾರ್ಥನೆ

ಕರ್ನಾಟಕ ರಾಜ್ಯದಲ್ಲಿ ಅನೇಕ ಕಡೆ ಮಳೆ ಇಲ್ಲದೆ ಇರುವುದರಿಂದ ಸಾಕಷ್ಟು ಮಳೆ ಬರುವಂತೆ ಎಲ್ಲಾ ಮತಸ್ಥರು ಪ್ರಾರ್ಥಿಸುವಂತೆ ಸರಕಾರವು ಅಪೇಕ್ಷೆಪಟ್ಟದ್ದನ್ನು ಅನುಸರಿಸಿ ಸ್ಥಳೀಯ ಅಹ್ಮದಿಯರು ಆಗಸ್ಟ್ 20ನೇ ಶುಕ್ರವಾರದಂದು ಮಧ್ಯಾಹ್ನ ಮಳೆಗಾಗಿ ಸಮೂಹಿಕವಾಗಿ ಪ್ರಾರ್ಥಿಸಿದರು.

## — ನಮ್ಮನ್ನು ಅಗಲಿ ಹೋದರು —

1. ಜನಾಬ್ M. K. ಹಮ್ಮಬ್ಬ ಹುಸೇನ್ ಸಾಹೇಬರು 4–7–76ರಂದು ತಮ್ಮ 75ನೇ ವಯಸ್ಸಿನಲ್ಲಿ ಮಂಗಳೂರಲ್ಲಿ ನಿಧನ ಹೊಂದಿದರು.

(ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿವೂನ್)

2. ಜನಾಬ್ B. H. ಮುಹಮ್ಮದ್ ಸಾಹೇಬರು 25–8–76ರಂದು ತಮ್ಮ 50ನೇ ವಯಸ್ಸಿನಲ್ಲಿ ಬಜ್ಪೆಯಲ್ಲಿ ನಿಧನ ಹೊಂದಿದರು.

(ಇನ್ನಾ ಲಿಲ್ಲಾಹಿ ವ ಇನ್ನಾ ಲಿಲ್ಲಾಹಿ ರಾಜಿವೂನ್)

ಮೇಲಿನ ಇಬ್ಬರು ಸಹೋದರರಿಗೂ ಅಲ್ಲಾಹು ತನ್ನ ಸಾಮಿಪ್ಯವನ್ನು ಅನುಗ್ರಹಿಸಲೆಂದೂ ಶೋಕತಪ್ತರಾದ ಬಂಧುಗಳಿಗೆ ಮನಃಶಾಂತಿಯನ್ನು ದಯಪಾಲಿಸಲೆಂದೂ ಪ್ರಾರ್ಥಿಸುತ್ತೇವೆ.

Regd. with the Registrar of Newspapers for India, Regd. No. R. N. 27354/75
YUGARASHMI Kannada Quarterly,
July – September 1976 / Wafa – Tabook 1355


# BOOKS ON ISLAM AND CONTEMPORARY RELIGIONS

1. **Holy Quran with Arabic Text and English Translation** 12-00
2. **Ahmadiyyat or The True Islam** 8-00
   By Hazrat Mirza Bashiruddin Mahmud Ahmad
3. **New World Order** 2-25
   By Hazrat Mirza Bashiruddin Mahmud Ahmad.
4. **The Teachings of Islam** 6-00
   By Hazrat Ghulam Ahmad
5. **Our Foreign Missions** 2-25
   By Mirza Mubarak Ahmad
6. **Where did Jesus Die ?** 2-25
   By J. D. Shams
7. **The Tomb of Jesus** 0-75
   By sufi M. R. Bengali
8 **Jesus in India** 2-25
   By Mirza Ghulam Ahmad
9 **The Christian Doctrine of Atonement** 1-50
   By Dr. Mufti Muhammad Sadiq
10. **An Interpretation of Islam** 1-50
   By Prof. Dr. Laura Veccia Vaglieri

Write to

**NAZIR DAWAT-O-TABLIGH**

**P. O. QADIAN - 143516. (Punjab)**


Printed by: A. B. Sunder Ram Shetty, at Aruna Printing Press, Dongerkery Mangalore and Edited and Published by Muhammad Yusuf on behalf of Jamath Ahamadiyya Mangalore, at 23/1008 Ansari Road, Bundar, Mangalore-575001.